WPP-47/2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೭	ಬೆಂಗಳೂರು, ಗುರುವಾರ, ಜನವರಿ ೧೨, ೨೦೧೨ (ಪುಷ್ಯ ೨೨, ಶಕ ವರ್ಷ ೧೯೩೩)	ಸಂಚಿಕೆ ೨

ಭಾಗ–೩

ಸರ್ಕಾರದ ಆಯಾ ಇಲಾಖೆಗಳ ಮುಖ್ಯಸ್ಥರ ಮತ್ತು ಸ್ಥಳೀಯ ಪ್ರಾಧಿಕಾರಿಗಳಿಗೆ ಸಂಬಂಧಿಸಿದ ಅಧಿಸೂಚನೆಗಳು

OFFICE OF THE COMMISSIONER OF EMPLOYMENT AND TRAINING,

GOVERNMENT OF KARNATAKA, "KAUSHALYA BHAVAN", NEAR DAIRY CIRCLE, BANNERGHATTA ROAD, BANGALORE-560 029.

Notification No. DET/EMP/EMI/8(3)/CR-81/2011-12, dated: 17-10-2011.

In exercise of the powers conferred by Section 6 of the Employment Exchanges (Compulsory Notification of Vacancies) Act, 1959, read with rule 7 of the Employment Exchanges (CNV) Rules, 1960 and in suppression of all previous Notifications issued in this behalf, I, Sri N.Manjunath Prasad, Commissioner of Employment and Training, Government of Karnataka, Bangalore, do hereby authorise the officers specified in column (2) of the table below to exercise the powers and rights detailed in Section 6 of the said Act in respect of the establishments situated in their respective jurisdictions as indicated in column (3) of the table below:-

TABLE

Sl. No.	Name of the Officer.		Jurisdiction.
(1)	(2)		(3)
1.	Joint Director of Employment, Directorate of Employment and Training, Bangalore.	-	Entire State of Karnataka.
2.	Deputy Director of Employment, Directorate of Employment and Training, Bangalore.	-	-do-
3.	Deputy Director (R & S), Directorate of Employment and Training, Bangalore.	-	-do-
4.	Assistant Director (Administration), Directorate of Employment and Training, Bangalore.	-	-do-
5.	Assistant Director (State Vocational Guidance), Directorate of Employment and Training, Bangalore.	-	-do-
6.	Employment Officers, Directorate of Employment and Training, Bangalore.		Revenue Districtsof Bangalore Urban and Rural.

(1)	(2)		(3)
7.	Assistant Director, State Special Employment Exchange for Scheduled Caste / Scheduled Tribe, Bangalore.	-	Entire State of Karnataka
8.	Assistant Director, Special Employment Exchange for Physically Handicapped, Bangalore.	-	Entire State of Karnataka
9.	Assistant Director, Sub Regional Employment Exchange, Bangalore.	-	Revenue Districts of Bangalore Urban and Rural, Kolar, Tumkur, Chitradurga, Davanagere, Shimoga, Ramanagara, Chikkaballapura.
10.	Assistant Director / Deputy Chief, University Employment Information and Guidance Bureau, Bangalore University, Bangalore.	-	Revenue Districts of Bangalore Urban and Rural.
11.	Employment Officer, University Employment Information and Guidance Bureau, Karnataka University, Dharwad.	-	Revenue District of Dharwad.
12.	Assistant Director / Deputy Chief, University Employment Information and Guidance Bureau, Gulbarga University, Gulbarga.	-	Revenue District of Gulbarga.
13.	Assistant Director / Deputy Chief, University Employment Information and Guidance Bureau, Mangalore University, Mangalore.	-	Revenue District of Dakshina Kannada.
14.	Assistant Director / Deputy Chief, University Employment Information and Guidance Bureau, Manasa Gangothri, Mysore		Revenue District of Mysore.
15.	Assistant Director / Deputy Chief, University Employment Information and Guidance Bureau, Kuvempu University, B.R.Project, Shankaraghatta, Shimoga District.	-	Revenue District of Shimoga.
16.	Employment Officer, Professional & Executive Employment Exchange, Bangalore		Revenue Districts of Bangalore Urban and Rural.
17.	Employment Officer, District Employment Exchange (Technical), Bangalore	-	Revenue Districts of Bangalore Urban and Rural.
18.	Employment Officer, District Employment Exchange (General), Bangalore	-	-do-
19.	Assistant Director, District Employment Exchange, Belgaum.	-	Revenue Districts of Belgaum, North Kanara.
20.	Employment Officer, District Employment Exchange, Bagalkot.	-	Revenue District of Bagalkot.
21.	Employment Officer, District Employment Exchange, Bellary.	-	Revenue District of Bellary.
22.	Employment Officer, District Employment Exchange, Bidar.	-	Revenue District of Bidar.
23.	Employment Officer, District Employment Exchange, Bijapur.	-	Revenue District of Bijapur.
24.	Employment Officer, District Employment Exchange, Chamarajanagar.		Revenue District of Chamarajanagar
25.	Employment Officer, District Employment Exchange, Chickmagalur.	-	Revenue District of Chickmagalur.

(1)	(2)		(3)
26.	Employment Officer, District Employment Exchange, Chitradurga.	-	Revenue District of Chitradurga.
27.	Employment Officer, District Employment Exchange, Chikkaballapura.	-	Revenue District of Chikkaballapura.
28.	Employment Officer, District Employment Exchange, Davanagere.	-	Revenue District of Davanagere.
29.	Assistant Director, District Employment Exchange, Gulbarga.	-	Revenue Districts of Gulbarga, Bidar, Raichur, Yadagiri, Bellary, Koppal.
30.	Employment Officer, District Employment Exchange, Gadag	-	Revenue District of Gadag
31.	Employment Officer, District Employment Exchange, Hassan.	-	Revenue District of Hassan.
32.	Employment Officer, District Employment Exchange, Haveri.		Revenue District of Haveri
33.	Assistant Director, District Employment Exchange, Hubli.	-	Revenue Districts of Dharwad, Haveri, Gadag, Bagalkot, Bijapur.
34.	Employment Officer, Project Employment Exchange, Karwar.	-	Revenue District of North Kanara.
35.	Employment Officer, District Employment Exchange, Kolar.	-	Revenue District of Kolar.
36.	Employment Officer, District Employment Exchange, Koppal.		Revenue District of Koppal
37.	Employment Officer, District Employment Exchange, Mandya.	-	Revenue District of Mandya.
38.	Employment Officer, District Employment Exchange, Mangalore.	-	Revenue District of Dakshina Kannada.
39.	Employment Officer, District Employment Exchange, Madikeri.	-	Revenue District of Kodagu.
40.	Assistant Director, District Employment Exchange, Mysore.	-	Revenue Districts of Mysore, Mandya, Chamarajanagar, Kodagu, Hassan, South Kanara, Udupi, Chickmagalur.
41.	Employment Officer, District Employment Exchange, Raichur.	-	Revenue District of Raichur.
42.	Employment Officer, District Employment Exchange, Ramanagara.	-	Revenue District of Ramanagara.
43.	Employment Officer, District Employment Exchange, Shimoga.	-	Revenue District of Shimoga.
44.	Employment Officer, District Employment Exchange, Tumkur.	-	Revenue District of Tumkur.
45.	Employment Officer, District Employment Exchange, Udupi		Revenue District of Udupi
46.	Employment Officer, District Employment Exchange, Yadagiri.	-	Revenue District of Yadagiri.

This notification which supercedes all the notifications issued earlier in this behalf, comes into force from the date of this publication in Karnataka Gazette.

N.Manjunath Prasad,
Commissioner,
Employment & Training.

P.R. 1161

KARNATAKA MEDICAL COUNCIL ELECTIONS – 2011

Ref. No. KMC FR/NTC/2011, 01-09-2011.

DECLARATION OF RESULTS FOR NON TEACHER'S CONSTITUENCY 3(2)(a)

as per Karnataka Medical Registration Act, 34 of 1961

The following SIX Candidates have been Elected to the Karnataka Medical Council as Members during its Election conducted on 31-08-2011 :

Sl. No.	NAME OF THE CANDIDATES	NO. OF VOTES SECURED
1.	DR.VEERABHADRAIAH T.A.	1827
2.	DR.RAVINDRA H.N.	1467
3.	DR.BASAVARAJU	1419
4.	DR.MOHANDAS BHANDARY.K.	1309
5.	DR.NAGARAJ ANNEGOWDA	1304
6.	DR.KANCHI PRALHAD V.	1215

Registrar Cum Returning Officer.

KARNATAKA MEDICAL COUNCIL ELECTIONS – 2011

Ref. No. KMC FR/TC/2011, 01-09-2011.

DECLARATION OF RESULTS FOR TEACHER'S CONSTITUENCY 3(2)(b)

as per Karnataka Medical Registration Act, 34 of 1961

The following FOUR Candidates have been Elected to the Karnataka Medical Council as Members during its Election conducted on 30-08-2011 :

Sl. No.	NAME OF THE CANDIDATES	NO. OF VOTES SECURED
1.	DR.UMA B.R.	636
2.	DR.H.VEERABHADRAPPA.	556
3.	DR.GUDUDUR AJAYKUMAR	542
4.	DR.PRABHAKARA G.N.	447

PD 198 **Registrar Cum Returning Officer.**

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಸಂಚಾರಿ ದಳ, ಬೆಂಗಳೂರು ರವರ ನ್ಯಾಯಾಲಯ.

ಎಫ್.ಓ.ಸಿ ಸಂಖ್ಯೆ: 340/1989-90 ದಿನಾಂಕ: 25/01/1990

ಸಂಖ್ಯೆ : ಎ1.ಅಅಪ್ರ.71A.340/89-90, ದಿನಾಂಕ : 16/12/2011.

ಉಪಸ್ಥಿತರು : ಶ್ರೀ ಕೆ.ಬಿ. ಮಂಜುನಾಥ, ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು

ಫಿರ್ಯಾದಿ : ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು

ಅರ್ಜಿದಾರರು:ಆರೋಪಿಗಳು : ಇರುವುದಿಲ್ಲ

ಪ್ರಕರಣದ ಮುಖ್ಯಾಂಶಗಳು :

ದಿನಾಂಕ:25–01–1990ರಂದು ಮೈಸೂರು ರಸ್ತೆ ಅರಣ್ಯ ತನಿಖಾ ಠಾಣೆಯಲ್ಲಿ ಅರಣ್ಯ ಸಂಚಾರಿ ದಳದ ಸಿಬ್ಬಂದಿಗಳು ತಪಾಸಣಾ ಕಾರ್ಯದಲ್ಲಿ ನಿರತರಾಗಿದ್ದಾಗ ಮೈಸೂರು ಕಡೆಯಿಂದ ಬೆಂಗಳೂರು ಕಡೆಗೆ ಬರುತ್ತಿದ್ದ ಲಾರಿ ಸಂಖ್ಯೆ:ಸಿಎಎ–1581 ಅನ್ನು ತಡೆದು ನಿಲ್ಲಿಸಿ ಪರಿಶೀಲನೆ ಮಾಡಲಾಗಿ, ಸದರಿ ಲಾರಿಯು ಎ.ಬಿ.ಟಿ ಪಾರ್ಸಲ್ ಸರ್ವೀಸ್ ಕಂಪನಿಗೆ ಸೇರಿದ್ದಾಗಿದ್ದು, ಲಾರಿಯಲ್ಲಿದ್ದ ಪಾರ್ಸಲ್ ವಸ್ತುಗಳಲ್ಲಿ 06 ಬಾಕ್ಸ್ ಅಗರಭತ್ತಿಗಳು ಎಂದು ಬಿಲ್ಲಿನಲ್ಲಿ ನಮೂದಿಸಲಾಗಿರುತ್ತದೆ. ಈ ಬಗ್ಗೆ ಅನುಮಾನ ಬಂದು ಸದರಿ ಬಾಕ್ಸುಗಳನ್ನು ತೆಗೆದು ನೋಡಲಾಗಿ, 05 ಬಾಕ್ಸುಗಳಲ್ಲಿ ಶ್ರೀಗಂಧದ ತುಂಡು ಹಾಗೂ ಚಕ್ಕೆಗಳಿದ್ದು, ಇದರ ತೂಕ 121 ಕೆ.ಜಿ ಮತ್ತು 01 ಬಾಕ್ಸಿನಲ್ಲಿ ಶ್ರೀಗಂಧದ ಪುಡಿ ಇದ್ದು, ಇದರ ತೂಕ 30 ಕೆ.ಜಿ ಇರುವುದು ಕಂಡುಬಂದಿರುತ್ತದೆ. ಲಾರಿ ಚಾಲಕನನ್ನು ವಿಚಾರಿಸಲಾಗಿ, ಚನ್ನಪಟ್ಟಣದ ಎ.ಬಿ.ಟಿ ಕಂಪನಿಯಿಂದ ಪಾರ್ಸಲ್‌ಗಳನ್ನು ತುಂಬಿಕೊಂಡು ಬೆಂಗಳೂರು ಕಡೆಗೆ ಬರುತ್ತಿದ್ದಾಗ ಸಿಬ್ಬಂದಿಗಳು ಸದರಿ ಲಾರಿಯನ್ನು ತಪಾಸಣೆ ಮಾಡುವ ಸಮಯದಲ್ಲಿ ಶ್ರೀಗಂಧದ ಪೆಟ್ಟಿಗೆಗಳು ಇರುವುದು ತಿಳಿದುಬಂದಿದ್ದು, ಎ.ಬಿ.ಟಿ ಕಂಪನಿಯವರು ಸಾರ್ವಜನಿಕ ಪಾರ್ಸಲ್‌ಗಳನ್ನು ಭಾರತದಾದ್ಯಂತ ಸಾಗಾಣಿಕೆ ಕಾರ್ಯ ನಿರ್ವಹಿಸುತ್ತಿದ್ದು, ಸಾರ್ವಜನಿಕರು ಎ.ಬಿ.ಟಿ ಕಂಪನಿಗೆ ಕೊಟ್ಟ ಪಾರ್ಸಲ್‌ಗಳನ್ನು ಅವರು ತಿಳಿಸಿದ ವಿಳಾಸಕ್ಕೆ ಅವರು ಒದಗಿಸಿದ ದಾಖಲೆಗಳ ಪ್ರಕಾರ ಪಾರ್ಸಲ್‌ಗಳನ್ನು ತಲುಪಿಸಬೇಕಾಗಿದ್ದು, ಕಂಪನಿಯ ನಿಯಮದ ಪ್ರಕಾರ ಸಾಗಾಣಿಕೆಗಾಗಿ ಸಾರ್ವಜನಿಕರು ಕೊಡುವ ಪಾರ್ಸಲ್‌ಗಳನ್ನು ತೆಗೆದು ಪರಿಶೀಲಿಸುವುದಿಲ್ಲ ಎಂದು ತಿಳಿಸಿರುತ್ತಾರೆ.

ಸೂಕ್ತ ರಹದಾರಿ ಇಲ್ಲದೇ ಶ್ರೀಗಂಧವನ್ನು ಸಾಗಣೆ ಮಾಡುವುದು ಕರ್ನಾಟಕ ಅರಣ್ಯ ಕಾಯ್ದೆ 1963ರ ಪ್ರಕಾರ ಅಕ್ರಮವಾಗಿರುವುದರಿಂದ ಸದರಿ ವಾಹನ ಮತ್ತು ಶ್ರೀಗಂಧವನ್ನು ಮಹಜರ್ ಸಹಿತ ಸರ್ಕಾರದ ಪರ ಅಮಾನತ್ತುಪಡಿಸಿಕೊಂಡು ಅರಣ್ಯ ಅಪರಾಧ ಮೊಕದ್ದಮೆಯನ್ನು ದಾಖಲಿಸಿರುತ್ತಾರೆ ಮತ್ತು ಹೆಚ್ಚಿನ ತನಿಖೆಗಾಗಿ ಎ.ಬಿ.ಟಿ. ಕಂಪನಿಗೆ ಸೇರಿದ ವಾಹನ ಹಾಗೂ ಒಟ್ಟು 151 ಕೆ.ಜಿ ಶ್ರೀಗಂಧವನ್ನು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಬೆಂಗಳೂರು ನಗರ ವಿಭಾಗ, ಬೆಂಗಳೂರು ರವರ ಸಮಕ್ಷಮ ಹಾಜರುಪಡಿಸಿರುತ್ತಾರೆ. ಜಪ್ತು ಮಾಡಲಾದ ಮುದ್ದೆಮಾಲನ್ನು ಸುರಕ್ಷತೆಗಾಗಿ ಅರಣ್ಯ ಸಂಚಾರಿ ದಳದ ದಾಸ್ತಾನು ಮಳಿಗೆಯಲ್ಲಿ ಇಡಲಾಗಿರುತ್ತದೆ.

ಪ್ರಕರಣವನ್ನು ತನಿಖೆ ನಡೆಸಿದ ವಲಯ ಅರಣ್ಯಾಧಿಕಾರಿಗಳು ಯಾರೋ ಆಸಾಮಿಗಳು ಸುಳ್ಳು ವಿಳಾಸ ನೀಡಿ ಸದರಿ ಶ್ರೀಗಂಧವನ್ನು ಅಕ್ರಮವಾಗಿ ಸಾಗಾಣಿಕೆ ಮಾಡಲು ನೊಂದಾಯಿಸಿರುವುದರಿಂದ ಆರೋಪಿಗಳು ಪತ್ತೆಯಾಗಿರುವುದಿಲ್ಲ. ಆದ ಕಾರಣ, ಅಮಾನತ್ತುಪಡಿಸಿಕೊಂಡಿರುವ 151 ಕೆ.ಜಿ ಶ್ರೀಗಂಧವನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಕ್ರಮ ಜರುಗಿಸುವಂತೆ ಕೋರಿರುತ್ತಾರೆ. ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಬೆಂಗಳೂರು ನಗರ ವಿಭಾಗ, ಬೆಂಗಳೂರು ರವರ ನ್ಯಾಯಾಲಯದ ನಡವಳಿ ಆದೇಶ ಸಂಖ್ಯೆ:ಎ4.ಎಸ್‌ಓಸಿ.ಸಿಆರ್.340/89–90, ದಿನಾಂಕ:01–02–1990 ರಲ್ಲಿ 06 ಬಾಕ್ಸು ಶ್ರೀಗಂಧದ ತುಂಡು/ಚಕ್ಕೆ ಹಾಗೂ ಪುಡಿಗಳನ್ನು ಹೊರತುಪಡಿಸಿ ಎ.ಬಿ.ಟಿ ಪಾರ್ಸಲ್ ಸರ್ವೀಸ್ ಕಂಪನಿಗೆ ಸೇರಿದ ಲಾರಿ ಹಾಗೂ ಇತರೆ ಪಾರ್ಸಲ್‌ಗಳನ್ನು ಮಧ್ಯಂತರ ಬಿಡುಗಡೆ ಮಾಡಿರುತ್ತಾರೆ.

ಸೂಕ್ತ ರಹದಾರಿ ಇಲ್ಲದೇ ಅಕ್ರಮವಾಗಿ ಶ್ರೀಗಂಧವನ್ನು ಸಾಗಣೆ ಮಾಡುವುದು ಕರ್ನಾಟಕ ಅರಣ್ಯ ಕಾಯ್ದೆಯ ಉಲ್ಲಂಘನೆಯಾಗಿದ್ದು, ಶ್ರೀಗಂಧವನ್ನು ಸಾಗಣೆ ಮಾಡುತ್ತಿದ್ದ ವಾಹನ ಸಂಖ್ಯೆ:ಸಿಎಎ–1581 ಎ.ಬಿ.ಟಿ ಪಾರ್ಸಲ್ ಕಂಪನಿಗೆ ಸೇರಿದ್ದು, ಪಾರ್ಸಲ್‌ಗಳನ್ನು ಸಾರ್ವಜನಿಕರಿಂದ ಪಡೆದು ತಲುಪಿಸುವ ಕಾರ್ಯ ನಿರ್ವಹಿಸಲಾಗುತ್ತದೆ. ಸುಳ್ಳು ವಿಳಾಸ ನೀಡಿ ಪಾರ್ಸಲ್‌ಗಳನ್ನು ನೊಂದಾಯಿಸಿರುವುದರಿಂದ ಎ.ಬಿ.ಟಿ.ಪಾರ್ಸಲ್ ಸಂಸ್ಥೆ ಅಕ್ರಮದಲ್ಲಿ ಭಾಗಿಯಾಗಿರುವುದಿಲ್ಲವೆಂಬ ಅಭಿಪ್ರಾಯವನ್ನು ಪಡಲಾಗಿದೆ.

ಪ್ರಕರಣಕ್ಕೆ ಸಂಬಂಧಿಸಿದ ಶ್ರೀ.ರವಿಕುಮಾರ್, ಸಹಾಯಕ ಸರ್ಕಾರಿ ಅಭಿಯೋಜಕರು ದಿನಾಂಕ:16–09–2011ರಂದು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು ರವರ ಸಮಕ್ಷಮ ವಾದವನ್ನು ದಾಖಲೆಗಳ ಸಹಿತ ಮಂಡಿಸಿರುತ್ತಾರೆ. ಸೂಕ್ತ ರಹದಾರಿ ಇಲ್ಲದೇ ಶ್ರೀಗಂಧದ ತುಂಡು, ಚಕ್ಕೆ ಹಾಗೂ ಪುಡಿಯನ್ನು ಸಾಗಣೆ ಮಾಡಿರುವುದು ಖಾತರಿಯಾಗಿರುತ್ತದೆ. ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 84 ರ ಅನ್ವಯ ಶ್ರೀಗಂಧವು ಸರ್ಕಾರದ ಸ್ವತ್ತಾಗಿದ್ದು, ಅದನ್ನು ಪಡೆಯಲು ಯಾರೂ ಸಹ ಮುಂದೆ ಬರದೇ ಇರುವ ಕಾರಣ, ಗೈರು ಹಾಜರಿರುವ ಸಾಕ್ಷಿಗಳ ವಿಚಾರಣೆ ಅವಶ್ಯಕತೆ ಇಲ್ಲವೆಂದು ಸರ್ಕಾರಿ ವಕೀಲರು ವಾದವನ್ನು ಮಂಡಿಸಿರುತ್ತಾರೆ.

ಪ್ರಕರಣದ ಬಗ್ಗೆ ಸರ್ಕಾರಿ ವಕೀಲರು ಮಂಡಿಸಿದ ವಾದ ಮತ್ತು ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಲಾಯಿತು. ಪ್ರತಿವಾದಿಗಳು ಇಲ್ಲದಿರುವ ಕಾರಣ, ನನ್ನ ಎದುರಿನಲ್ಲಿ ಹಾಜರುಪಡಿಸಿರುವ ದಾಖಲೆಗಳ ಆದಾರದ ಮೇಲೆ ತೀರ್ಮಾನವನ್ನು ಕೈಗೊಳ್ಳಬೇಕಾಗಿರುತ್ತದೆ. ತೀರ್ಮಾನವನ್ನು ಕೈಗೊಳ್ಳಲು ಈ ಕೆಳಕಂಡ ಅಂಶಗಳನ್ನು ಪರಿಗಣಿಸಬೇಕಾಗಿದೆ.

1. ವಾಹನ ಸಂಖ್ಯೆ:ಸಿಎಎ–1581 ಕರ್ನಾಟಕ ಅರಣ್ಯ ಕಾಯ್ದೆ 1963 ಮತ್ತು ನಿಯಮ 1969 ಗಳ ಉಲ್ಲಂಘನೆ ಮಾಡಿ ಅಕ್ರಮವಾಗಿ ಶ್ರೀಗಂಧದ ಸಾಗಣೆಯಲ್ಲಿ ಒಳಗೊಂಡಿರುವುದೇ?
2. ಸದರಿ ಪ್ರಕರಣದಲ್ಲಿ ವಾಹನ ಸಂಖ್ಯೆ:ಸಿಎಎ–1581 ಅನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ?

3. ಮೇಲಿನ ಅಂಶಗಳಿಗೆ ಅನುಗುಣವಾಗಿ ಯಾವ ಆದೇಶ?

ಮೇಲಿನ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆ ಇರುತ್ತದೆ.

1. ಮೊದಲನೇ ಅಂಶಕ್ಕೆ ನನ್ನ ಉತ್ತರ ಇಲ್ಲ ಎಂಬುದಾಗಿರುತ್ತದೆ.

2. ಎರಡನೇ ಅಂಶಕ್ಕೆ ನನ್ನ ಉತ್ತರ ಇಲ್ಲ ಎಂಬುದಾಗಿರುತ್ತದೆ.

3. ಅಂತಿಮ ಆದೇಶವನ್ನು ಈ ಕೆಳಕಂಡ ಕಾರಣಗಳಿಗೆ ನೀಡಲಾಗಿದೆ.

ವಾಹನ ಸಂಖ್ಯೆ:ಸಿಎಎ–1581 ಎ.ಬಿ.ಟಿ ಪಾರ್ಸೆಲ್ ಕಂಪನಿಗೆ ಸೇರಿದ್ದು, ಪಾರ್ಸೆಲ್‌ಗಳನ್ನು ಸಾರ್ವಜನಿಕರಿಂದ ಪಡೆದು ತಲುಪಿಸುವ ಕಾರ್ಯ ನಿರ್ವಹಿಸಲಾಗುತ್ತದೆ. ಸುಳ್ಳು ವಿಳಾಸ ನೀಡಿ ಪಾರ್ಸೆಲ್‌ಗಳನ್ನು ನೊಂದಾಯಿಸಿರುವುದರಿಂದ ಎ.ಬಿ.ಟಿ.ಪಾರ್ಸೆಲ್ ಸಂಸ್ಥೆ ಅಕ್ರಮದಲ್ಲಿ ಭಾಗಿಯಾಗಿರುವುದಿಲ್ಲವೆಂಬ ಅಭಿಪ್ರಾಯವನ್ನು ಪಡಲಾಗಿದೆ.

ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71ಎ ಮೇರೆಗೆ ರಾಜ್ಯ ಸರ್ಕಾರ ಸ್ವತ್ತಾದ ಶ್ರೀಗಂಧಕ್ಕೆ ಸಂಬಂಧಪಟ್ಟ ಅರಣ್ಯ ಮೊಕದ್ದಮೆಯಲ್ಲಿ ಒಳಗೊಂಡ ವಾಹನವನ್ನು ಅಧಿಕೃತ ಅಧಿಕಾರಿಯ ಮುಂದೆ ಹಾಜರುಪಡಿಸಿರುವುದರಿಂದ ಅಂತಹ ವಾಹನವನ್ನು ಮತ್ತು ಸರ್ಕಾರದ ಸ್ವತ್ತನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಅವಕಾಶವಿರುತ್ತದೆ. ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಬೆಂಗಳೂರು ನಗರ ವಿಭಾಗ, ಬೆಂಗಳೂರು ರವರ ನ್ಯಾಯಾಲಯದ ನಡವಳಿ ಆದೇಶ ಸಂಖ್ಯೆ:ಎ4.ಎಸ್‌ಓಸಿ. ಸಿಆರ್.340/89–90, ದಿನಾಂಕ:01–02–1990ರಲ್ಲಿ ಮೊಕದ್ದಮೆಯಲ್ಲಿ ಅಮಾನತ್ತುಪಡಿಸಿಕೊಂಡ 06 ಬಾಕ್ಸು ಶ್ರೀಗಂಧದ ತುಂಡು/ಚಕ್ಕೆ ಹಾಗೂ ಪುಡಿಗಳನ್ನು ಹೊರತುಪಡಿಸಿ ಎ.ಬಿ.ಟಿ ಪಾರ್ಸೆಲ್ ಸರ್ವೀಸ್ ಕಂಪನಿಗೆ ಸೇರಿದ ಲಾರಿ ಸಂಖ್ಯೆ:ಸಿಎಎ–1581 ಹಾಗೂ ಇತರೆ ಪಾರ್ಸೆಲ್‌ಗಳನ್ನು ಮಧ್ಯಂತರ ಬಿಡುಗಡೆ ಮಾಡಿರುತ್ತಾರೆ.

ಸದರಿ ಪ್ರಕರಣದಲ್ಲಿ ಎ.ಬಿ.ಟಿ ಪಾರ್ಸೆಲ್ ಸಂಸ್ಥೆಗೆ ಸೇರಿದ ಲಾರಿ ಸಂಖ್ಯೆ:ಸಿಎಎ–1581 ಅರಣ್ಯ ಅಪರಾಧದಲ್ಲಿ ಒಳಗೊಂಡಿರುವುದನ್ನು ಪೂರ್ಣವಾಗಿ ಸಾಬೀತು ಪಡಿಸಲು ಅವಶ್ಯವಿರುವ ದಾಖಲೆಗಳನ್ನು ವಿಚಾರಣೆಗೆ ಹಾಜರುಪಡಿಸದೇ ಇರುವುದರಿಂದ ಸದರಿ ವಾಹನವನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುವುದಿಲ್ಲ.

ಆದೇಶ

ನಾನು ಕೆ.ಬಿ.ಮಂಜುನಾಥ, ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71ಎ ರ ಮೇರೆಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಅರಣ್ಯ ಅಪರಾಧ ಮೊಕದ್ದಮೆ ಸಂಖ್ಯೆ:340/1989–90ರಲ್ಲಿ ಅಮಾನತ್ತುಪಡಿಸಿಕೊಂಡಿರುವ 151 ಕೆ.ಜಿ ಶ್ರೀಗಂಧದ ತುಂಡು, ಚಕ್ಕೆ ಮತ್ತು ಪುಡಿಯನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಈ ಮೂಲಕ ಆದೇಶಿಸುತ್ತೇನೆ. ಸದರಿ ಮೊಕದ್ದಮೆಯಲ್ಲಿ ಅಮಾನತ್ತುಪಡಿಸಿಕೊಂಡ ಲಾರಿ ಸಂಖ್ಯೆ:ಸಿಎಎ–1581 ವಾಹನವನ್ನು ಮಧ್ಯಂತರ ಆದೇಶದ ಮೂಲಕ ಬಿಡುಗಡೆಗೊಂಡಿರುವ ಆದೇಶವನ್ನು ಸ್ಥಿರೀಕರಿಸಿ ಖಾಯಂ ಬಿಡುಗಡೆಗೊಳಿಸಿದೆ.

ಈ ಆದೇಶವನ್ನು ಬೆರಳಚ್ಚುಗಾರರಿಗೆ ಉತ್ತಲೇಖನ ಕೊಟ್ಟಿದ್ದು, ಅವರು ಬೆರಳಚ್ಚಿಸಿದ ನಂತರ ತಿದ್ದುಪಡಿ ಮಾಡಿ ಈ ದಿನ ದಿನಾಂಕ:16–12–2011ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

ಈ ಆದೇಶವು ರಾಜ್ಯಪತ್ರದಲ್ಲಿ ಪ್ರಕಟಗೊಂಡ 30 ದಿವಸಗಳ ನಂತರ ಜಾರಿಗೆ ಬರುತ್ತದೆ.

ಕೆ.ಬಿ.ಮಂಜುನಾಥ,
ಅಧಿಕೃತ ಅಧಿಕಾರಿ ಹಾಗೂ
ಉಪ ಅರಣ್ಯ ಸಂರಕ್ಷಣಾಧಿಕಾರಿ,
ಅರಣ್ಯ ಸಂಚಾರಿ ದಳ, ಬೆಂಗಳೂರು.

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಸಂಚಾರಿ ದಳ, ಬೆಂಗಳೂರು ರವರ ನ್ಯಾಯಾಲಯ.

ಎಫ್.ಓ.ಸಿ ಸಂಖ್ಯೆ: 417/1989-90 ದಿನಾಂಕ: 21/03/1990

ಸಂಖ್ಯೆ : ಎ1.ಅಅಪ್ರ.71A.417/89-90, ದಿನಾಂಕ : 20/12/2011.

ಉಪಸ್ಥಿತರು : **ಶ್ರೀ ಕೆ.ಬಿ. ಮಂಜುನಾಥ, ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು**

ಫಿರ್ಯಾದಿ : **ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು**

ಅರ್ಜಿದಾರರು:ಆರೋಪಿಗಳು : **ಪತ್ತೆಯಾಗಿರುವುದಿಲ್ಲ**

ಪ್ರಕರಣದ ಮುಖ್ಯಾಂಶಗಳು :

ದಿನಾಂಕ:21–03–1990ರಂದು ಅರಣ್ಯ ಸಂಚಾರಿ ದಳದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಹಾಗೂ ಸಿಬ್ಬಂದಿಗಳು ಖಚಿತ ವರ್ತಮಾನದ ಮೇರೆಗೆ ಬ್ಯಾತ ರಸ್ತೆಯ ಬೈರಾಪುರ ಕಾಕೋಳು ರಸ್ತೆಯಲ್ಲಿ ಗಸ್ತು ಕಾಯುತ್ತಿದ್ದ ಸಂದರ್ಭದಲ್ಲಿ ಬ್ಯಾತ ಕಡೆಯಿಂದ ವೇಗವಾಗಿ ಬರುತ್ತಿದ್ದ ಜೀಪನ್ನು ನಿಲ್ಲಿಸುವಂತೆ ಸೂಚಿಸಿದರೂ, ನಿಲ್ಲಿಸದೇ ವೇಗವಾಗಿ ಚಲಿಸಿದಾಗ ಸಿಬ್ಬಂದಿಗಳು ವಾಹನದೊಂದಿಗೆ ಜೀಪನ್ನು ಬೆನ್ನಟ್ಟಿ ಕಾಕೋಳು ಕೆರೆಯ ಅಂಗಳದಲ್ಲಿ ನಿಲ್ಲಿಸಿದಾಗ, ಅದರಲ್ಲಿದ್ದ ಚಾಲಕ ಮತ್ತು ಒಬ್ಬ ಆಸಾಮಿ ಓಡಿ ಹೋಗಿದ್ದು, ಜೀಪನ್ನು ಪರಿಶೀಲಿಸಿದಾಗ ಮಹೇಂದ್ರ ಜೀಪಿನ ನೊಂದಣಿ ಸಂಖ್ಯೆ:ಎಂವೈಎಲ್–236 ಆಗಿದ್ದು, ಇಂಜಿನ್ ಸಂಖ್ಯೆ:ಎಂ.ಎಂ.806279, ಚಾಸ್ಸಿ ಸಂಖ್ಯೆ:7004314, ಮಾದರಿ 1972 ಇರುತ್ತದೆ. ಜೀಪಿನ ಒಳಗಡೆ ಪರಿಶೀಲಿಸಿದಾಗ 175 ಕೆ.ಜಿ ಶ್ರೀಗಂಧದ ತುಂಡುಗಳು ಮತ್ತು ಬೇರುಗಳು ಇರುವುದು ಕಂಡುಬಂದಿರುತ್ತದೆ. ಸೂಕ್ತ ರಹದಾರಿ ಇಲ್ಲದೇ ಶ್ರೀಗಂಧವನ್ನು ಸಾಗಣೆ ಮಾಡುವುದು ಕರ್ನಾಟಕ ಅರಣ್ಯ ಕಾಯ್ದೆ 1963ರ ಪ್ರಕಾರ ಅಕ್ರಮವಾಗಿರುವುದರಿಂದ ಸದರಿ ವಾಹನ ಮತ್ತು ಶ್ರೀಗಂಧವನ್ನು ಮಹಜರ್ ಸಹಿತ ಸರ್ಕಾರದ ಪರ ಅಮಾನತ್ತುಪಡಿಸಿಕೊಂಡು ಅರಣ್ಯ ಅಪರಾಧ ಮೊಕದ್ದಮೆಯನ್ನು ದಾಖಲಿಸಿರುತ್ತಾರೆ ಮತ್ತು ಹೆಚ್ಚಿನ ತನಿಖೆಗಾಗಿ ಪೋಲೀಸ್ ಸಬ್ ಇನ್ಸ್‌ಪೆಕ್ಟರ್, ರಾಜಾನುಕುಂಟೆ ಪೋಲೀಸ್ ಠಾಣೆ, ಬೆಂಗಳೂರು ಇವರಿಗೆ ಪ್ರಕರಣವನ್ನು ವಹಿಸಿ ವಾಹನ ಹಾಗೂ 175 ಕೆ.ಜಿ ಶ್ರೀಗಂಧವನ್ನು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಬೆಂಗಳೂರು ನಗರ ವಿಭಾಗ, ಬೆಂಗಳೂರು ರವರ ಸಮಕ್ಷಮ ಹಾಜರುಪಡಿಸಿರುತ್ತಾರೆ. ಜಪ್ತು ಮಾಡಲಾದ ವಾಹನ ಮತ್ತು ಮುದ್ದೆಮಾಲನ್ನು ಸುರಕ್ಷತೆಗಾಗಿ ಅರಣ್ಯ ಸಂಚಾರಿ ದಳದ ದಾಸ್ತಾನು ಮಳಿಗೆಯಲ್ಲಿ ಇಡಲಾಗಿರುತ್ತದೆ.

ಪೋಲೀಸ್ ಸಬ್ ಇನ್ಸ್‌ಪೆಕ್ಟರ್, ರಾಜಾನುಕುಂಟೆ ಪೋಲೀಸ್ ಠಾಣೆ, ಬೆಂಗಳೂರು ಇವರು ಕೇಸಿಗೆ ಸಂಬಂಧಪಟ್ಟ ಪೂರ್ಣ ಮಾಲು ಮತ್ತು ವಾಹನವನ್ನು ಹಾಜರುಪಡಿಸಿದಲ್ಲಿ ಮಾತ್ರ, ಕೇಸನ್ನು ದಾಖಲಿಸುವುದಾಗಿ ಹಿಂಬರಹವನ್ನು ತಮ್ಮ ಪತ್ರ ದಿನಾಂಕ:22–03–1990ರ ಮೂಲಕ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಸಂಚಾರಿ ದಳ, ಬೆಂಗಳೂರು ರವರಿಗೆ ತಿಳಿಸಿರುತ್ತಾರೆ.

ಪ್ರಕರಣವನ್ನು ತನಿಖೆ ನಡೆಸಿದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಆರೋಪಿಗಳು ಪತ್ತೆಯಾಗದೇ ಇರುವ ಕಾರಣ, ಅಮಾನತ್ತುಪಡಿಸಿಕೊಂಡಿರುವ ಮಹೇಂದ್ರ ಜೀಪು ಸಂಖ್ಯೆ:ಎಂವೈಎಲ್–236 ಹಾಗೂ ಅದರಲ್ಲಿದ್ದ 175 ಕೆ.ಜಿ ಶ್ರೀಗಂಧವನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಕ್ರಮ ಜರುಗಿಸುವಂತೆ ಕೋರಿರುತ್ತಾರೆ.

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು ರವರ ಕಛೇರಿಯಿಂದ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಬೆಳಗಾಂ ಇವರ ಕಛೇರಿಗೆ ದಿನಾಂಕ:24–01–2010ರಂದು ಪತ್ರ ವ್ಯವಹರಿಸಿ ವಾಹನ ನೊಂದಣಿ ಸಂಖ್ಯೆ:ಎಂವೈಎಲ್–236 ಮಹೇಂದ್ರ ಜೀಪಿನ ಮಾಲೀಕತ್ವದ ವಿವರಗಳನ್ನು ನೀಡುವಂತೆ ಕೋರಲಾಗಿತ್ತು. ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಬೆಳಗಾಂ ಇವರು ವಾಹನದ ಮಾಲೀಕರ ವಿವರಗಳನ್ನು ಒದಗಿಸಿರುವುದಿಲ್ಲ. ವಾಹನದ ಮಾಲೀಕರ ವಿಳಾಸ ಲಭ್ಯವಿಲ್ಲದ ಕಾರಣ, ದಿನಾಂಕ:14–08–2011ರ ಹೊಸ ದಿಗಂತ ದಿನಪತ್ರಿಕೆಯಲ್ಲಿ ವಾಹನದ ಬಗ್ಗೆ ಜಾಹಿರಾತನ್ನು ನೀಡಿ, ವಾಹನದ ಮಾಲೀಕರು/ವಾರಸುದಾರರು 30 ದಿನಗಳ ಒಳಗಾಗಿ ಸೂಕ್ತ ದಾಖಲೆಗಳೊಂದಿಗೆ ತಮ್ಮ ಆಕ್ಷೇಪಣೆಗಳನ್ನು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು ರವರ ಸಮಕ್ಷಮ ಸಲ್ಲಿಸಲು ಆದೇಶಿಸಲಾಗಿತ್ತು. ದಿನಾಂಕ:17–11–2011ರ ಕರ್ನಾಟಕ ರಾಜ್ಯಪತ್ರದಲ್ಲಿ ಸೂಕ್ತ ದಾಖಲೆಗಳೊಂದಿಗೆ 30 ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು ರವರ ಸಮಕ್ಷಮ ಸಲ್ಲಿಸಲು ಪ್ರಕಟಣೆ ಹೊರಡಿಸಲಾಗಿತ್ತು. ವಾಹನದ ಮಾಲೀಕರು ನಿಗಧಿತ ಅವಧಿಯಲ್ಲಿ ಆಕ್ಷೇಪಣೆಗಳನ್ನು ಸಲ್ಲಿಸಿರುವುದಿಲ್ಲ.

ಪ್ರಕರಣಕ್ಕೆ ಸಂಬಂಧಿಸಿದ ಸರ್ಕಾರಿ ಪರ ಸಾಕ್ಷಿಗಳಾದ ಶ್ರೀ.ಬಿ.ರಾಜು ಬಿನ್ ಶ್ರೀ.ಎಲ್ ಬೋರೇಗೌಡ, ನಿವೃತ್ತ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ (ಅಂದಿನ ವಲಯ ಅರಣ್ಯಾಧಿಕಾರಿ), ಶ್ರೀ.ಕೆ.ಯು.ಪೋತಪ್ಪ ಬಿನ್ ಲೇಟ್ ಶ್ರೀ.ಕೆ.ಯು.ಅಂಬಣ್ಣ, ವಲಯ ಅರಣ್ಯಾಧಿಕಾರಿ (ಅಂದಿನ ವನಪಾಲಕ), ಶ್ರೀ.ಎನ್.ಬಿ.ಹೇಮಣ್ಣ ಬಿನ್ ಶ್ರೀ.ಎನ್.ಬಸಣ್ಣ, ವಲಯ ಅರಣ್ಯಾಧಿಕಾರಿ (ಅಂದಿನ ಅರಣ್ಯ ರಕ್ಷಕ), ಶ್ರೀ.ಎನ್.ಜಿ.ಸತ್ಯನಾರಾಯಣ ಬಿನ್ ಲೇಟ್ ಶ್ರೀ.ಗಂಗಪ್ಪ, ವಲಯ ಅರಣ್ಯಾಧಿಕಾರಿ (ಅಂದಿನ ಅರಣ್ಯ ರಕ್ಷಕ) ಇವರುಗಳ ಮುಖ್ಯ ವಿಚಾರಣೆಯನ್ನು ಶ್ರೀ.ರವಿಕುಮಾರ್, ಸಹಾಯಕ ಸರ್ಕಾರಿ ಅಭಿಯೋಜಕರು ದಿನಾಂಕ:16–09–2011ರಂದು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು ರವರ ಸಮಕ್ಷಮ ನಡೆಸಿರುತ್ತಾರೆ.

ಸರ್ಕಾರಿ ಪರ ಸಾಕ್ಷಿಗಳಾದ ಶ್ರೀ.ಆರ್.ಶಿವಕುಮಾರ್, ವನಪಾಲಕ (ಅಂದಿನ ಅರಣ್ಯ ರಕ್ಷಕ), ಶ್ರೀ.ಕೆ.ಸೂರ್ಯನಾರಾಯಣ ಶೆಟ್ಟಿ, ಅರಣ್ಯ ರಕ್ಷಕ, ಶ್ರೀ.ಹೆಚ್.ಎನ್.ಮಂಜುನಾಥ್, ಅರಣ್ಯ ರಕ್ಷಕ, ಶ್ರೀ.ಹೆಚ್.ಪಿ.ಪ್ರಭಾಕರ್, ಅರಣ್ಯ ರಕ್ಷಕ ಇವರು ಗೈರು ಹಾಜರಾದ ಕಾರಣ ವಿಚಾರಣೆಗೆ ಒಳಪಡಿಸಲಾಗಿರುವುದಿಲ್ಲ. ಹಾಜರಿದ್ದ ಸರ್ಕಾರಿ ಸಾಕ್ಷಿಗಳು ನೀಡಿರುವ ಹೇಳಿಕೆಗಳು ಪ್ರಕರಣದಲ್ಲಿ ವಾಹನ ಸಂಖ್ಯೆ:ಎಂವೈಎಲ್–236 ಒಳಗೊಂಡಿರುವ ಬಗ್ಗೆ ಸಾಕ್ಷಿ ನೀಡಿರುವುದರಿಂದ ಗೈರು ಹಾಜರಿರುವ ಸಾಕ್ಷಿಗಳ ವಿಚಾರಣೆ ಅವಶ್ಯಕತೆ ಇಲ್ಲವೆಂದು ಸರ್ಕಾರಿ ವಕೀಲರು ವಾದವನ್ನು ಮಂಡಿಸಿರುತ್ತಾರೆ.

ಪ್ರಕರಣದ ಬಗ್ಗೆ ಸರ್ಕಾರಿ ವಕೀಲರು ಮಂಡಿಸಿದ ವಾದ ಮತ್ತು ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಲಾಯಿತು. ಪ್ರತಿವಾದಿಗಳು ಹಾಜರಿರದ ಕಾರಣ, ಅವರ ವಿಳಾಸ ಪತ್ತೆಯಾಗದ ಕಾರಣ, ನನ್ನ ಎದುರಿನಲ್ಲಿ ಹಾಜರುಪಡಿಸಿರುವ ದಾಖಲೆಗಳ ಆದಾರದ ಮೇಲೆ ತೀರ್ಮಾನವನ್ನು ಕೈಗೊಳ್ಳಬೇಕಾಗಿರುತ್ತದೆ. ತೀರ್ಮಾನವನ್ನು ಕೈಗೊಳ್ಳಲು ಈ ಕೆಳಕಂಡ ಅಂಶಗಳನ್ನು ಪರಿಗಣಿಸಬೇಕಾಗಿದೆ.

1. ವಾಹನ ಸಂಖ್ಯೆ:ಎಂವೈಎಲ್–236 ಕರ್ನಾಟಕ ಅರಣ್ಯ ಕಾಯ್ದೆ 1963 ಮತ್ತು ನಿಯಮ 1969 ಗಳ ಉಲ್ಲಂಘನೆ ಮಾಡಿ ಅಕ್ರಮವಾಗಿ ಶ್ರೀಗಂಧದ ಸಾಗಣೆಯಲ್ಲಿ ಒಳಗೊಂಡಿರುವುದೇ?
2. ಸದರಿ ಪ್ರಕರಣದಲ್ಲಿ ವಾಹನ ಸಂಖ್ಯೆ:ಎಂವೈಎಲ್–236 ಅನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ?
3. ಮೇಲಿನ ಅಂಶಗಳಿಗೆ ಅನುಗುಣವಾಗಿ ಯಾವ ಆದೇಶ?

ಮೇಲಿನ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆ ಇರುತ್ತದೆ.

1. ಮೊದಲನೇ ಅಂಶಕ್ಕೆ ನನ್ನ ಉತ್ತರ ಅಹುದು ಎಂಬುದಾಗಿರುತ್ತದೆ.
2. ಎರಡನೇ ಅಂಶಕ್ಕೆ ನನ್ನ ಉತ್ತರ ಅಹುದು ಎಂಬುದಾಗಿರುತ್ತದೆ.
3. ಅಂತಿಮ ಆದೇಶವನ್ನು ಈ ಕೆಳಕಂಡ ಕಾರಣಗಳಿಗೆ ನೀಡಲಾಗಿದೆ.

ದಿನಾಂಕ: 21–03–1990 ರಂದು ಅರಣ್ಯ ಸಂಚಾರಿ ದಳದ ಸಿಬ್ಬಂದಿ ಗಸ್ತು ಕಾಯುತ್ತಿರುವ ಸಂದರ್ಭದಲ್ಲಿ ವೇಗವಾಗಿ ಚಲಿಸುತ್ತಿದ್ದ ಮಹೇಂದ್ರ ಜೀಪನ್ನು ನಿಲ್ಲಿಸಲು ತಡೆದಾಗ ಅದು ನಿಲ್ಲಿಸದೇ ಇರುವುದು, ಅದನ್ನು ಬೆನ್ನಟ್ಟಿ ತಡೆದು ನಿಲ್ಲಿಸಿದಾಗ ಅದರಲ್ಲಿದ್ದ ಚಾಲಕ ಮತ್ತು ಒಬ್ಬ ಆಸಾಮಿ ಜೀಪನ್ನು ಬಿಟ್ಟು ಓಡಿ ಹೋಗಿರುತ್ತಾರೆ. ಜೀಪನ್ನು ಪರಿಶೀಲಿಸಿದಾಗ ಅದರಲ್ಲಿ 175 ಕೆ.ಜಿ ಶ್ರೀಗಂಧದ ತುಂಡುಗಳು ಮತ್ತು ಬೇರುಗಳು ಇರುವುದು ಕಂಡುಬಂದಿರುತ್ತದೆ. ಅರಣ್ಯ ಕಾಯ್ದೆಯ ಪ್ರಕಾರ ಶ್ರೀಗಂಧವನ್ನು ಸಾಗಣೆ ಮಾಡಲು ಇರಬೇಕಾದ ರಹದಾರಿ ಮತ್ತು ಸಂಬಂಧಪಟ್ಟ ದಾಖಲೆಗಳು ವಾಹನದಲ್ಲಿ ದೊರಕದೇ ಇರುವುದರಿಂದ ಅರಣ್ಯ ಮೊಕದ್ದಮೆಯು ದಾಖಲಾಗಿದ್ದು, ಅರಣ್ಯ ಸಿಬ್ಬಂದಿಯು ದಾಖಲಿಸಿರುವ ಮೊಕದ್ದಮೆಯು ಅರಣ್ಯ ಕಾಯ್ದೆಯ ವ್ಯಾಪ್ತಿಯಲ್ಲಿ ಸರಿ ಇರುತ್ತದೆ. ವಾಹನ ಮಾಲೀಕರ ಮಾಹಿತಿಯನ್ನು ಪಡೆಯಲು ಸಾರಿಗೆ ಅಧಿಕಾರಿಗಳನ್ನು ಸಂಪರ್ಕಿಸಲಾಗಿರುತ್ತದೆ, ಆದರೆ ಮಾಲೀಕರ ಮಾಹಿತಿ ಲಭ್ಯವಾಗಿರುವುದಿಲ್ಲ. ಆದುದರಿಂದ ಮಾಲೀಕರಿಗೆ ಅರಣ್ಯ ಕಾಯ್ದೆಯ ಸೆಕ್ಷನ್ 71 ಬಿ ಪ್ರಕಾರ ನೋಟೀಸನ್ನು ಜಾರಿ ಮಾಡಲು ಸಾಧ್ಯವಾಗಿರುವುದಿಲ್ಲ. ದಿನಾಂಕ:14–08–2011ರ ಹೊಸ ದಿಗಂತ ದಿನಪತ್ರಿಕೆಯಲ್ಲಿ ವಾಹನದ ಬಗ್ಗೆ ಜಾಹಿರಾತನ್ನು ನೀಡಿ, ವಾಹನದ ಮಾಲೀಕರು/ವಾರಸುದಾರರು 30 ದಿನಗಳ ಒಳಗಾಗಿ ಸೂಕ್ತ ದಾಖಲೆಗಳೊಂದಿಗೆ ತಮ್ಮ ಆಕ್ಷೇಪಣೆಗಳನ್ನು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು ರವರ ಸಮಕ್ಷಮ ಸಲ್ಲಿಸಲು ಆದೇಶಿಸಲಾಗಿತ್ತು. ದಿನಾಂಕ:17–11–2011ರ ಕರ್ನಾಟಕ ರಾಜ್ಯಪತ್ರದಲ್ಲಿ ಸೂಕ್ತ ದಾಖಲೆಗಳೊಂದಿಗೆ 30 ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು ರವರ ಸಮಕ್ಷಮ ಸಲ್ಲಿಸಲು ಪ್ರಕಟಣೆ ಹೊರಡಿಸಲಾಗಿತ್ತು. ವಾಹನದ ಮಾಲೀಕರು ನಿಗಧಿತ ಅವಧಿಯಲ್ಲಿ ಆಕ್ಷೇಪಣೆಗಳನ್ನು ಸಲ್ಲಿಸಿರುವುದಿಲ್ಲ.

ಸರ್ಕಾರಿ ಪರ ಸಾಕ್ಷಿಗಳು ಸಹ ಸದರಿ ವಾಹನವು ಅಕ್ರಮವಾಗಿ ಶ್ರೀಗಂಧವನ್ನು ಸಾಗಣೆ ಮಾಡುತ್ತಿದ್ದದನ್ನು ವಿಚಾರಣಾ ಸಮಯದಲ್ಲಿ ಹೇಳಿಕೆ ನೀಡಿರುತ್ತಾರೆ. ಆದುದರಿಂದ ಸದರಿ ವಾಹನವು ಕರ್ನಾಟಕ ಅರಣ್ಯ ಕಾಯ್ದೆ 1963 ಹಾಗೂ ನಿಯಮ 1969ರ ಉಲ್ಲಂಘನೆ ಮಾಡಿರುವುದು ಖಾತರಿಯಾಗಿರುತ್ತದೆ.

ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71ಎ (1) ಮೇರೆಗೆ ರಾಜ್ಯ ಸರ್ಕಾರ ಸ್ವತ್ತಾದ ಶ್ರೀಗಂಧಕ್ಕೆ ಸಂಬಂಧಪಟ್ಟ ಅರಣ್ಯ ಮೊಕದ್ದಮೆಯಲ್ಲಿ ಒಳಗೊಂಡ ವಾಹನವನ್ನು ಅಧಿಕೃತ ಅಧಿಕಾರಿಯ ಮುಂದೆ ಹಾಜರುಪಡಿಸಿರುವುದರಿಂದ ಅಂತಹ ವಾಹನವನ್ನು ಮತ್ತು ಸರ್ಕಾರದ ಸ್ವತ್ತನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಅವಕಾಶವಿರುವುದರಿಂದ ಸದರಿ ವಾಹನವನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುತ್ತದೆ.

ಆದೇಶ

ನಾನು ಕೆ.ಬಿ.ಮಂಜುನಾಥ, ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71ಎ ರ ಮೇರೆಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಅರಣ್ಯ ಅಪರಾಧ ಮೊಕದ್ದಮೆ ಸಂಖ್ಯೆ:417/1989–90ರಲ್ಲಿ ಅಮಾನತ್ತುಪಡಿಸಿಕೊಂಡಿರುವ 175 ಕೆ.ಜಿ ಶ್ರೀಗಂಧದ ತುಂಡು ಮತ್ತು ಬೇರುಗಳು ಹಾಗೂ ಮಹೇಂದ್ರ ಜೀಪು ಸಂಖ್ಯೆ:ಎಂ.ವೈ.ಎಲ್–236 ವಾಹನವನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಈ ಮೂಲಕ ಆದೇಶಿಸುತ್ತೇನೆ.

ಈ ಆದೇಶವನ್ನು ಬೆರಳಚ್ಚುಗಾರರಿಗೆ ಉತ್ತಲೇಖನ ಕೊಟ್ಟಿದ್ದು, ಅವರು ಬೆರಳಚ್ಚಿಸಿದ ನಂತರ ತಿದ್ದುಪಡಿ ಮಾಡಿ ಈ ದಿನ ದಿನಾಂಕ:20–12–2011 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

ಈ ಆದೇಶವು ರಾಜ್ಯಪತ್ರದಲ್ಲಿ ಪ್ರಕಟಗೊಂಡ 30 ದಿವಸಗಳ ನಂತರ ಜಾರಿಗೆ ಬರುತ್ತದೆ.

ಕೆ.ಬಿ.ಮಂಜುನಾಥ,
ಅಧಿಕೃತ ಅಧಿಕಾರಿ ಹಾಗೂ
ಉಪ ಅರಣ್ಯ ಸಂರಕ್ಷಣಾಧಿಕಾರಿ,
ಅರಣ್ಯ ಸಂಚಾರಿ ದಳ, ಬೆಂಗಳೂರು.

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಸಂಚಾರಿ ದಳ, ಬೆಂಗಳೂರು ರವರ ನ್ಯಾಯಾಲಯ.

ಎಫ್.ಓ.ಸಿ ಸಂಖ್ಯೆ: 418/1989-90 ದಿನಾಂಕ: 22/03/1990

ಸಂಖ್ಯೆ : ಎ1.ಅಅಪ್ರ.71A.418/1989-90, ದಿನಾಂಕ : 16/12/2011.

ಉಪಸ್ಥಿತರು	:	**ಶ್ರೀ ಕೆ.ಬಿ. ಮಂಜುನಾಥ, ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು**
ಫಿರ್ಯಾದಿ	:	**ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು**
ಅರ್ಜಿದಾರರು:ಆರೋಪಿಗಳು	:	**ಇರುವುದಿಲ್ಲ**

ಪ್ರಕರಣದ ಮುಖ್ಯಾಂಶಗಳು :

ದಿನಾಂಕ:22–03–1990ರಂದು ಅರಣ್ಯ ಸಂಚಾರಿ ದಳದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಹಾಗೂ ಸಿಬ್ಬಂದಿಗಳು ಖಚಿತ ವರ್ತಮಾನದ ಮೇರೆಗೆ ಬ್ಯಾತ ರಸ್ತೆಯ ಬೈರಾಪುರ ಕಾಕೋಳು ರಸ್ತೆಯಲ್ಲಿ ಗಸ್ತು ಕಾಯುತ್ತಿದ್ದ ಸಂದರ್ಭದಲ್ಲಿ ಬ್ಯಾತ ಕಡೆಯಿಂದ ವೇಗವಾಗಿ ಬರುತ್ತಿದ್ದ ಅಂಬಾಜಿಡರ್ ಕಾರನ್ನು ನಿಲ್ಲಿಸುವಂತೆ ಸೂಚಿಸಿದರೂ, ನಿಲ್ಲಿಸದೇ ವೇಗವಾಗಿ ಚಲಿಸಿದಾಗ ಸಿಬ್ಬಂದಿಗಳು ವಾಹನದೊಂದಿಗೆ ಕಾರನ್ನು ಬೆನ್ನಟ್ಟಿ ಕಾಕೋಳು ಕೆರೆಯ ಅಂಗಳದಲ್ಲಿ ನಿಲ್ಲಿಸಿದಾಗ, ಅದರಲ್ಲಿದ್ದ ಚಾಲಕ ಮತ್ತು ಇಬ್ಬರು ಆಸಾಮಿಗಳು ಓಡಿ ಹೋಗಿದ್ದು, ಕಾರನ್ನು ಪರಿಶೀಲಿಸಿದಾಗ ನೀಲಿ ಬಣ್ಣದ ಅಂಬಾಜಿಡರ್ ಕಾರಿನ ನೊಂದಣಿ ಸಂಖ್ಯೆ:ಸಿಎಎಲ್–9919 ಆಗಿದ್ದು, ಇಂಜಿನ್ ಸಂಖ್ಯೆ:ಇಜಿ81987, ಚಾಸ್ಸಿ ಸಂಖ್ಯೆ:11197467 ಇರುತ್ತದೆ. ಕಾರಿನ ಒಳಗಡೆ ಪರಿಶೀಲಿಸಿದಾಗ ಹಿಂಬದಿಯ ಸೀಟಿನಲ್ಲಿ ಹಾಗೂ ಡಿಕ್ಕಿಯಲ್ಲಿ ಶ್ರೀಗಂಧದ ತುಂಡುಗಳು ಮತ್ತು ಬೇರುಗಳು ಇರುವುದು ಕಂಡುಬಂದಿರುತ್ತದೆ. ಸೂಕ್ತ ರಹದಾರಿ ಇಲ್ಲದೇ ಶ್ರೀಗಂಧವನ್ನು ಸಾಗಣೆ ಮಾಡುವುದು ಕರ್ನಾಟಕ ಅರಣ್ಯ ಕಾಯ್ದೆ 1963ರ ಪ್ರಕಾರ ಅಕ್ರಮವಾಗಿರುವುದರಿಂದ ಸದರಿ ವಾಹನ ಮತ್ತು ಶ್ರೀಗಂಧವನ್ನು ಮಹಜರ್ ಸಹಿತ ಸರ್ಕಾರದ ಪರ ಅಮಾನತ್ತುಪಡಿಸಿಕೊಂಡು ಅರಣ್ಯ ಅಪರಾಧ ಮೊಕದ್ದಮೆಯನ್ನು ದಾಖಲಿಸಿರುತ್ತಾರೆ ಮತ್ತು ಹೆಚ್ಚಿನ ತನಿಖೆಗಾಗಿ ಪೊಲೀಸ್ ಸಬ್ ಇನ್ಸ್‌ಪೆಕ್ಟರ್, ರಾಜಾನುಕುಂಟೆ ಪೊಲೀಸ್ ಠಾಣೆ, ಬೆಂಗಳೂರು ಇವರಿಗೆ ಪ್ರಕರಣವನ್ನು ವಹಿಸಿ ವಾಹನ ಹಾಗೂ 505 ಕೆ.ಜಿ ಶ್ರೀಗಂಧವನ್ನು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಬೆಂಗಳೂರು ನಗರ ವಿಭಾಗ, ಬೆಂಗಳೂರು ರವರ ಸಮಕ್ಷಮ ಹಾಜರುಪಡಿಸಿರುತ್ತಾರೆ. ಜಪ್ತು ಮಾಡಲಾದ ವಾಹನ ಮತ್ತು ಮುದ್ದೆಮಾಲನ್ನು ಸುರಕ್ಷತೆಗಾಗಿ ಅರಣ್ಯ ಸಂಚಾರಿ ದಳದ ದಾಸ್ತಾನು ಮಳಿಗೆಯಲ್ಲಿ ಇಡಲಾಗಿರುತ್ತದೆ.

ಪೊಲೀಸ್ ಸಬ್ ಇನ್ಸ್‌ಪೆಕ್ಟರ್, ರಾಜಾನುಕುಂಟೆ ಪೊಲೀಸ್ ಠಾಣೆ, ಬೆಂಗಳೂರು ಇವರು ಕೇಸಿಗೆ ಸಂಬಂಧಪಟ್ಟ ಪೂರ್ಣ ಮಾಲು ಮತ್ತು ವಾಹನವನ್ನು ಹಾಜರುಪಡಿಸಿದಲ್ಲಿ ಮಾತ್ರ, ಕೇಸನ್ನು ದಾಖಲಿಸುವುದಾಗಿ ಹಿಂಬರಹವನ್ನು ತಮ್ಮ ಪತ್ರ ದಿನಾಂಕ:22–03–1990ರ ಮೂಲಕ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಸಂಚಾರಿ ದಳ, ಬೆಂಗಳೂರು ರವರಿಗೆ ತಿಳಿಸಿರುತ್ತಾರೆ.

ಪ್ರಕರಣವನ್ನು ತನಿಖೆ ನಡೆಸಿದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಆರೋಪಿಗಳು ಪತ್ತೆಯಾಗದೇ ಇರುವ ಕಾರಣ, ಅಮಾನತ್ತುಪಡಿಸಿಕೊಂಡಿರುವ ಅಂಬಾಜಿಡರ್ ಕಾರ್ ಸಂಖ್ಯೆ:ಸಿಎಎಲ್–9919 ಹಾಗೂ ಅದರಲ್ಲಿದ್ದ 505 ಕೆ.ಜಿ ಶ್ರೀಗಂಧವನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಕ್ರಮ ಜರುಗಿಸುವಂತೆ ಕೋರಿರುತ್ತಾರೆ.

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು ರವರ ಕಛೇರಿಯಿಂದ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಜಯನಗರ, ಬೆಂಗಳೂರು ಇವರ ಕಛೇರಿಗೆ ದಿನಾಂಕ:24–01–2010ರಂದು ಪತ್ರ ವ್ಯವಹರಿಸಿ ವಾಹನ ನೊಂದಣಿ ಸಂಖ್ಯೆ:ಸಿಎಎಲ್–9919 ಅಂಬಾಜಿಡರ್ ವಾಹನದ ಮಾಲೀಕತ್ವದ ವಿವರಗಳನ್ನು ನೀಡುವಂತೆ ಕೋರಲಾಗಿತ್ತು. ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಜಯನಗರ, ಬೆಂಗಳೂರು ದಕ್ಷಿಣ, ಇವರು ವಾಹನದ ಮಾಲೀಕರ ವಿವರಗಳನ್ನು ಒದಗಿಸಿರುತ್ತಾರೆ. ಅವರ ವರದಿಯಲ್ಲಿ ಸದರಿ ವಾಹನದ ಮಾಲೀಕರ ಹೆಸರು ಶ್ರೀ.ಜಗನ್ನಾಥ್.ಬಿ.ಕೆ ಮತ್ತು ವಿಳಾಸ ನಂ.933, 23ನೇ ಮುಖ್ಯರಸ್ತೆ, 39ನೇ ಅಡ್ಡರಸ್ತೆ, 4ನೇ ಬ್ಲಾಕ್, ಜಯನಗರ, ಬೆಂಗಳೂರು ಎಂದು ನಮೂದಿಸಲಾಗಿರುತ್ತದೆ.

ಸೂಕ್ತ ರಹದಾರಿ ಇಲ್ಲದೇ ಅಕ್ರಮವಾಗಿ ಶ್ರೀಗಂಧವನ್ನು ಸಾಗಣೆ ಮಾಡುವುದು ಕರ್ನಾಟಕ ಅರಣ್ಯ ಕಾಯ್ದೆಯ ಉಲ್ಲಂಘನೆಯಾಗಿದ್ದು, ಸದರಿ ಕಾಯ್ದೆಯ ಸೆಕ್ಷನ್ 71ಎ ರಡಿಯಲ್ಲಿ ಕ್ರಮ ಜರುಗಿಸಲು ಕೋರಿದ ಮೇರೆಗೆ ವಾಹನ ಮಾಲೀಕರಾದ ಶ್ರೀ.ಜಗನ್ನಾಥ್.ಬಿ.ಕೆ, ನಂ.933, 23ನೇ ಮುಖ್ಯರಸ್ತೆ, 39ನೇ ಅಡ್ಡರಸ್ತೆ, 4ನೇ ಬ್ಲಾಕ್, ಜಯನಗರ, ಬೆಂಗಳೂರು ಇವರ ವಿಳಾಸಕ್ಕೆ ಕರ್ನಾಟಕ ಅರಣ್ಯ ಕಾಯ್ದೆಯ 71ಬಿ ಪ್ರಕಾರ ನೋಟೀಸನ್ನು ಜಾರಿ ಮಾಡಿ ಮಾಲು ಹಾಗೂ ವಾಹನವನ್ನು ಏಕೆ ಮುಟ್ಟುಗೋಲು ಹಾಕಿಕೊಳ್ಳಬಾರದು ಎಂಬುದರ ಬಗ್ಗೆ ಆಕ್ಷೇಪಣೆಗಳು, ತಕರಾರುಗಳು ಇದ್ದಲ್ಲಿ, ನೋಟಿಸ್ ನೀಡಿದ 15 ದಿನದೊಳಗಾಗಿ ಅಧಿಕೃತ ಅಧಿಕಾರಿಗಳ ಸಮಕ್ಷಮ ಆಕ್ಷೇಪಣೆಗಳನ್ನು ಸಲ್ಲಿಸಲು ನೋಟಿಸನ್ನು ರಿಜಿಸ್ಟರ್ಡ್ ಅಂಚೆಯ ಮೂಲಕ ದಿನಾಂಕ:13–07–2011ರಂದು ನೀಡಲಾಗಿತ್ತು, ಆದರೆ ಅಂತಹ ವ್ಯಕ್ತಿ ಸದರಿ ವಿಳಾಸದಲ್ಲಿ ಇರುವುದಿಲ್ಲವೆಂಬ ವಿವರದೊಡನೆ ಅಂಚೆ ಇಲಾಖೆಯು ಲಕೋಟೆಯನ್ನು ಹಿಂತಿರುಗಿಸಿರುತ್ತದೆ. ಮುಂದುವರೆದು, ವಲಯ ಅರಣ್ಯಾಧಿಕಾರಿಗಳು, ಅರಣ್ಯ ಸಂಚಾರಿ ದಳ, ಬೆಂಗಳೂರು ಇವರು ಸದರಿ ಸ್ಥಳಕ್ಕೆ ಭೇಟಿ

ನೀಡಿ ವಿಚಾರಣೆ ನಡೆಸಿ ಸದರಿ ಸ್ಥಳದಲ್ಲಿ ಶ್ರೀ.ಜಗನ್ನಾಥ್.ಬಿ.ಕೆ ಎಂಬ ವ್ಯಕ್ತಿಯು ವಾಸವಿರುವುದಿಲ್ಲವೆಂದು ಖಾತರಿಪಡಿಸಿಕೊಂಡು ಪಂಚನಾಮೆ ಜರುಗಿಸಿ ಅಧಿಕೃತ ಅಧಿಕಾರಿಗಳಿಗೆ ಸಲ್ಲಿಸಿರುತ್ತಾರೆ.

ಪ್ರಕರಣಕ್ಕೆ ಸಂಬಂಧಿಸಿದ ಸರ್ಕಾರಿ ಪರ ಸಾಕ್ಷಿಗಳಾದ ಶ್ರೀ.ಬಿ.ರಾಜು ಬಿನ್ ಶ್ರೀ.ಎಲ್ ಬೋರೇಗೌಡ, ನಿವೃತ್ತ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ (ಅಂದಿನ ವಲಯ ಅರಣ್ಯಾಧಿಕಾರಿ), ಶ್ರೀ.ಕೆ.ಯು.ಪೋತಪ್ಪ ಬಿನ್ ಲೇಟ್ ಶ್ರೀ.ಕೆ.ಯು.ಅಂಬಣ್ಣ, ವಲಯ ಅರಣ್ಯಾಧಿಕಾರಿ (ಅಂದಿನ ವನಪಾಲಕ), ಶ್ರೀ.ಎನ್.ಬಿ.ಹೇಮಣ್ಣ ಬಿನ್ ಶ್ರೀ.ಎನ್.ಬಸಣ್ಣ, ವಲಯ ಅರಣ್ಯಾಧಿಕಾರಿ (ಅಂದಿನ ಅರಣ್ಯ ರಕ್ಷಕ), ಶ್ರೀ.ಆರ್.ಶಿವಕುಮಾರ್ ಬಿನ್ ಶ್ರೀ.ವಿ.ಆರ್.ರಾಮಯ್ಯ, ವನಪಾಲಕ (ಅಂದಿನ ಅರಣ್ಯ ರಕ್ಷಕ), ಶ್ರೀ.ಎನ್.ಜಿ.ಸತ್ಯನಾರಾಯಣ ಬಿನ್ ಲೇಟ್ ಶ್ರೀ.ಗಂಗಪ್ಪ, ವಲಯ ಅರಣ್ಯಾಧಿಕಾರಿ (ಅಂದಿನ ಅರಣ್ಯ ರಕ್ಷಕ) ಇವರುಗಳ ಮುಖ್ಯ ವಿಚಾರಣೆಯನ್ನು ಶ್ರೀ.ರವಿಕುಮಾರ್, ಸಹಾಯಕ ಸರ್ಕಾರಿ ಅಭಿಯೋಜಕರು ದಿನಾಂಕ:16–09–2011ರಂದು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು ರವರ ಸಮಕ್ಷಮ ನಡೆಸಿರುತ್ತಾರೆ.

ಸರ್ಕಾರಿ ಪರ ಸಾಕ್ಷಿಗಳಾದ ಶ್ರೀ.ಕೆ.ಸೂರ್ಯನಾರಾಯಣ ಶೆಟ್ಟಿ, ಅರಣ್ಯ ರಕ್ಷಕ, ಶ್ರೀ.ಹೆಚ್.ಎನ್.ಮಂಜುನಾಥ್, ಅರಣ್ಯ ರಕ್ಷಕ, ಶ್ರೀ.ಹೆಚ್.ಪಿ.ಪ್ರಭಾಕರ್, ಅರಣ್ಯ ರಕ್ಷಕ, ಶ್ರೀ.ಎ.ಲಕ್ಷ್ಮಿಕಾಂತ, ವಾಹನ ಚಾಲಕ ಇವರು ಗೈರು ಹಾಜರಾದ ಕಾರಣ ವಿಚಾರಣೆಗೆ ಒಳಪಡಿಸಲಾಗಿರುವುದಿಲ್ಲ. ಹಾಜರಿದ್ದ ಸರ್ಕಾರಿ ಸಾಕ್ಷಿಗಳು ನೀಡಿರುವ ಹೇಳಿಕೆಗಳು ಪ್ರಕರಣದಲ್ಲಿ ವಾಹನ ಸಂಖ್ಯೆ:ಸಿಎಎಲ್–9919 ಒಳಗೊಂಡಿರುವ ಬಗ್ಗೆ ಸಾಕ್ಷಿ ನೀಡಿರುವುದರಿಂದ ಗೈರು ಹಾಜರಿರುವ ಸಾಕ್ಷಿಗಳ ವಿಚಾರಣೆ ಅವಶ್ಯಕತೆ ಇಲ್ಲವೆಂದು ಸರ್ಕಾರಿ ವಕೀಲರು ವಾದವನ್ನು ಮಂಡಿಸಿರುತ್ತಾರೆ.

ಪ್ರಕರಣದ ಬಗ್ಗೆ ಸರ್ಕಾರಿ ವಕೀಲರು ಮಂಡಿಸಿದ ವಾದ ಮತ್ತು ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಲಾಯಿತು. ಪ್ರತಿವಾದಿಗಳು ಹಾಜರಿರದ ಕಾರಣ, ಅವರ ವಿಳಾಸ ಪತ್ತೆಯಾಗದ ಕಾರಣ, ನನ್ನ ಎದುರಿನಲ್ಲಿ ಹಾಜರುಪಡಿಸಿರುವ ದಾಖಲೆಗಳ ಆದಾರದ ಮೇಲೆ ತೀರ್ಮಾನವನ್ನು ಕೈಗೊಳ್ಳಬೇಕಾಗಿರುತ್ತದೆ. ತೀರ್ಮಾನವನ್ನು ಕೈಗೊಳ್ಳಲು ಈ ಕೆಳಕಂಡ ಅಂಶಗಳನ್ನು ಪರಿಗಣಿಸಬೇಕಾಗಿದೆ.

1. ವಾಹನ ಸಂಖ್ಯೆ:ಸಿಎಎಲ್–9919 ಕರ್ನಾಟಕ ಅರಣ್ಯ ಕಾಯ್ದೆ 1963 ಮತ್ತು ನಿಯಮ 1969 ಗಳ ಉಲ್ಲಂಘನೆ ಮಾಡಿ ಅಕ್ರಮವಾಗಿ ಶ್ರೀಗಂಧದ ಸಾಗಣೆಯಲ್ಲಿ ಒಳಗೊಂಡಿರುವುದೇ?
2. ಸದರಿ ಪ್ರಕರಣದಲ್ಲಿ ವಾಹನ ಸಂಖ್ಯೆ:ಸಿಎಎಲ್–9919 ಅನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ?
3. ಮೇಲಿನ ಅಂಶಗಳಿಗೆ ಅನುಗುಣವಾಗಿ ಯಾವ ಆದೇಶ?

ಮೇಲಿನ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆ ಇರುತ್ತದೆ.

1. ಮೊದಲನೇ ಅಂಶಕ್ಕೆ ನನ್ನ ಉತ್ತರ ಅಹುದು ಎಂಬುದಾಗಿರುತ್ತದೆ.
2. ಎರಡನೇ ಅಂಶಕ್ಕೆ ನನ್ನ ಉತ್ತರ ಅಹುದು ಎಂಬುದಾಗಿರುತ್ತದೆ.
3. ಅಂತಿಮ ಆದೇಶವನ್ನು ಈ ಕೆಳಕಂಡ ಕಾರಣಗಳಿಗೆ ನೀಡಲಾಗಿದೆ.

ದಿನಾಂಕ:22–03–1990 ರಂದು ಅರಣ್ಯ ಸಂಚಾರಿ ದಳದ ಸಿಬ್ಬಂದಿ ಗಸ್ತು ಕಾಯುತ್ತಿರುವ ಸಂದರ್ಭದಲ್ಲಿ ವೇಗವಾಗಿ ಚಲಿಸುತ್ತಿದ್ದ ಅಂಬಾಜಿಡರ್ ಕಾರನ್ನು ನಿಲ್ಲಿಸಲು ತಡೆದಾಗ ಅದು ನಿಲ್ಲಿಸದೇ ಇರುವುದು, ಅದನ್ನು ಬೆನ್ನಟ್ಟಿ ತಡೆದು ನಿಲ್ಲಿಸಿದಾಗ ಅದರಲ್ಲಿದ್ದ ಚಾಲಕ ಮತ್ತು ಇಬ್ಬರು ಆಸಾಮಿಗಳು ಕಾರನ್ನು ಬಿಟ್ಟು ಓಡಿ ಹೋಗಿರುತ್ತಾರೆ. ಕಾರನ್ನು ಪರಿಶೀಲಿಸಿದಾಗ ಅದರಲ್ಲಿ 505 ಕೆ.ಜಿ ಶ್ರೀಗಂಧದ ತುಂಡುಗಳು ಮತ್ತು ಬೇರುಗಳು ಇರುವುದು ಕಂಡುಬಂದಿರುತ್ತದೆ. ಅರಣ್ಯ ಕಾಯ್ದೆಯ ಪ್ರಕಾರ ಶ್ರೀಗಂಧವನ್ನು ಸಾಗಣೆ ಮಾಡಲು ಇರಬೇಕಾದ ರಹದಾರಿ ಮತ್ತು ಸಂಬಂಧಪಟ್ಟ ದಾಖಲೆಗಳು ವಾಹನದಲ್ಲಿ ದೊರಕದೇ ಇರುವುದರಿಂದ ಅರಣ್ಯ ಮೊಕದ್ದಮೆಯು ದಾಖಲಾಗಿದ್ದು, ಅರಣ್ಯ ಸಿಬ್ಬಂದಿಯು ದಾಖಲಿಸಿರುವ ಮೊಕದ್ದಮೆಯು ಅರಣ್ಯ ಕಾಯ್ದೆಯ ವ್ಯಾಪ್ತಿಯಲ್ಲಿ ಸರಿ ಇರುತ್ತದೆ. ವಾಹನ ಮಾಲೀಕರ ಮಾಹಿತಿಯನ್ನು ಸಾರಿಗೆ ಅಧಿಕಾರಿಗಳಿಂದ ಪಡೆದು ಮಾಲೀಕರ ವಿಳಾಸಕ್ಕೆ ಅರಣ್ಯ ಕಾಯ್ದೆಯ ಸೆಕ್ಷನ್ 71 ಬಿ ಪ್ರಕಾರ ನೋಟೀಸನ್ನು ಜಾರಿ ಮಾಡಿರುವುದು ಅಂಚೆ ಇಲಾಖೆಯಿಂದ ಹಿಂದಕ್ಕೆ ಬಂದಿರುತ್ತದೆ. ಸದರಿ ವಿಳಾಸದಲ್ಲಿ ವಾಹನದ ಮಾಲೀಕರು ವಾಸಿಸುತ್ತಿಲ್ಲವೆಂಬುದರ ಬಗ್ಗೆ ವಲಯ ಅರಣ್ಯಾಧಿಕಾರಿಗಳು ಪಂಚನಾಮೆ ಸಹಿತ ಸಲ್ಲಿಸಿರುವ ವರದಿಯಿಂದ ಸದರಿ ವಾಹನದ ಮಾಲೀಕರು ಸುಳ್ಳು ವಿಳಾಸವನ್ನು ನೀಡಿ ವಾಹನವನ್ನು ನೋಂದಣಿ ಮಾಡಿಸಿರುವುದು ಕಂಡುಬಂದಿರುತ್ತದೆ. ಸರ್ಕಾರಿ ಪರ ಸಾಕ್ಷಿಗಳು ಸಹ ಸದರಿ ವಾಹನವು ಅಕ್ರಮವಾಗಿ ಶ್ರೀಗಂಧವನ್ನು ಸಾಗಣೆ ಮಾಡುತ್ತಿದ್ದದನ್ನು ವಿಚಾರಣಾ ಸಮಯದಲ್ಲಿ ಹೇಳಿಕೆ ನೀಡಿರುತ್ತಾರೆ. ಆದುದರಿಂದ ಸದರಿ ವಾಹನವು ಕರ್ನಾಟಕ ಅರಣ್ಯ ಕಾಯ್ದೆ 1963 ಹಾಗೂ ನಿಯಮ 1969ರ ಉಲ್ಲಂಘನೆ ಮಾಡಿರುವುದು ಖಾತರಿಯಾಗಿರುತ್ತದೆ.

ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71ಎ ಮೇರೆಗೆ ರಾಜ್ಯ ಸರ್ಕಾರ ಸ್ವತ್ತಾದ ಶ್ರೀಗಂಧಕ್ಕೆ ಸಂಬಂಧಪಟ್ಟ ಅರಣ್ಯ ಮೊಕದ್ದಮೆಯಲ್ಲಿ ಒಳಗೊಂಡ ವಾಹನವನ್ನು ಅಧಿಕೃತ ಅಧಿಕಾರಿಯ ಮುಂದೆ ಹಾಜರುಪಡಿಸಿರುವುದರಿಂದ ಅಂತಹ ವಾಹನವನ್ನು ಮತ್ತು ಸರ್ಕಾರದ ಸ್ವತ್ತನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಅವಕಾಶವಿರುವುದರಿಂದ ಸದರಿ ವಾಹನವನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುತ್ತದೆ.

ಆದೇಶ

ನಾನು ಕೆ.ಬಿ.ಮಂಜುನಾಥ, ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71ಎ ರ ಮೇರೆಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಅರಣ್ಯ ಅಪರಾಧ ಮೊಕದ್ದಮೆ ಸಂಖ್ಯೆ:418/1989–90ರಲ್ಲಿ ಅಮಾನತ್ತುಪಡಿಸಿಕೊಂಡಿರುವ 505 ಕೆ.ಜಿ ಶ್ರೀಗಂಧದ ತುಂಡು ಮತ್ತು ಬೇರುಗಳು ಹಾಗೂ ಅಂಬಾಜಿಡರ್ ಕಾರು ಸಂಖ್ಯೆ:ಸಿಎಎಲ್–9919 ವಾಹನವನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಈ ಮೂಲಕ ಆದೇಶಿಸುತ್ತೇನೆ.

ಈ ಆದೇಶವನ್ನು ಬೆರಳಚ್ಚುಗಾರರಿಗೆ ಉತ್ತಲೇಖನ ಕೊಟ್ಟಿದ್ದು, ಅವರು ಬೆರಳಚ್ಚಿಸಿದ ನಂತರ ತಿದ್ದುಪಡಿ ಮಾಡಿ ಈ ದಿನ ದಿನಾಂಕ:16–12–2011ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

ಈ ಪ್ರಕಟಣೆ ಹೊರಡಿಸಿದ 30 ದಿವಸಗಳ ನಂತದ ಈ ಆದೇಶ ಜಾರಿಗೆ ಬರುವುದು.

ಕೆ.ಬಿ.ಮಂಜುನಾಥ,
ಅಧಿಕೃತ ಅಧಿಕಾರಿ ಹಾಗೂ
ಉಪ ಅರಣ್ಯ ಸಂರಕ್ಷಣಾಧಿಕಾರಿ,
ಅರಣ್ಯ ಸಂಚಾರಿ ದಳ, ಬೆಂಗಳೂರು.

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಸಂಚಾರಿ ದಳ, ಬೆಂಗಳೂರು ರವರ ನ್ಯಾಯಾಲಯ.

ಎಫ್.ಓ.ಸಿ ಸಂಖ್ಯೆ: 158/1996-97 ದಿನಾಂಕ: 26/09/1996

ಸಂಖ್ಯೆ : ಎ1.ಅಅಪ್ರ.71A.158/96-97, ದಿನಾಂಕ : 16/12/2011.

ಉಪಸ್ಥಿತರು	:	**ಶ್ರೀ ಕೆ.ಬಿ. ಮಂಜುನಾಥ, ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು**
ಫಿರ್ಯಾದಿ	:	**ವಲಯ ಅರಣ್ಯಾಧಿಕಾರಿ, ಅರಣ್ಯ ಸಂಚಾರಿ ದಳ ಬೆಂಗಳೂರು**
ಅರ್ಜಿದಾರರು:ಆರೋಪಿಗಳು	:	**ಸೈಯದ್ ಮೊಹಮದ್ ಬಿನ್ ಸೈಯದ್ ಅಹಮದ್, ಮೇಡಿಮಲ್ಲಸಂದ್ರ, ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ. ತಲೆಮರೆಸಿಕೊಂಡಿರುತ್ತಾರೆ.**

ಪ್ರಕರಣದ ಮುಖ್ಯಾಂಶಗಳು :

ದಿನಾಂಕ:26–09–1996ರಂದು ಬೆಳಿಗ್ಗೆ 6.00 ಗಂಟೆಯ ಸಮಯದಲ್ಲಿ ಶ್ರೀಗಂಧವನ್ನು ಅಕ್ರಮವಾಗಿ ದಾಸ್ತಾನು ಮಾಡಿರುವ ಬಗ್ಗೆ ದೊರೆತ ಖಚಿತ ಮಾಹಿತಿಯ ಮೇರೆಗೆ ಅರಣ್ಯ ಸಂಚಾರಿ ದಳದ ಸಿಬ್ಬಂದಿ, ಜಾಗೃತ ದಳದ ಸಿಬ್ಬಂದಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಪೊಲೀಸ್ ಹಾಗೂ ಅಬಕಾರಿ ಇಲಾಖೆಯ ಸಿಬ್ಬಂದಿಗಳು ಹೊಸಕೋಟೆ ತಾಲ್ಲೂಕಿನ ಮೇಡಿ ಮಲ್ಲಸಂದ್ರ ಗ್ರಾಮದ ಮೇಲೆ ದಾಳಿ ಮಾಡಿ ಅನೇಕ ಮನೆಗಳನ್ನು ಪರಿಶೀಲಿಸಿಕೊಂಡು ಬರುತ್ತಿರುವಾಗ, ಬೀಗವನ್ನು ಹಾಕದೇ ಹಾಗೆಯೇ ಚಿಲಕ ಹಾಕಿದ್ದ ಮನೆಯ ಬಾಗಿಲನ್ನು ತೆರೆದು ನೋಡಲಾಗಿ, ಮನೆಯ ಒಳಗಡೆ ಒಂದು ಮಂಚದ ಕೆಳಗೆ ಮರದ ಹಲಗೆಗಳನ್ನು ಇಡಲಾಗಿದ್ದು, ಸದರಿ ಹಲಗೆಗಳ ಕೆಳಗೆ ಒಂದು ಆಳವಾದ ಗುಂಡಿಯೊಳಗೆ ಕೆಲವು ಗೋಣಿ ಚೀಲದ ಮೂಟೆಗಳನ್ನು ದಾಸ್ತಾನು ಮಾಡಲಾಗಿರುತ್ತದೆ. ಇಲಾಖೆಯ ಸಿಬ್ಬಂದಿಗಳು ಗುಂಡಿಯೊಳಗೆ ಇಳಿದು ಗುಂಡಿಯೊಳಗಿದ್ದ ಗೋಣಿಚೀಲದ ಮೂಟೆಗಳನ್ನು ಹೊರಕ್ಕೆ ತೆಗೆದು ನೋಡಲಾಗಿ, ಅದರಲ್ಲಿ ಶ್ರೀಗಂಧದ ತುಂಡುಗಳನ್ನು ತುಂಬಿರುವುದು ಕಂಡುಬಂದಿರುತ್ತದೆ. ಸದರಿ ಮನೆಯ ಮಾಲೀಕರ ಬಗ್ಗೆ ಅಕ್ಕಪಕ್ಕದ ಮನೆಯವರನ್ನು ವಿಚಾರಿಸಲಾಗಿ, ಸೈಯದ್ ಅಹಮದ್ ಬಿನ್ ಸೈಯದ್ ಅಹಮದ್ ಎಂಬುದಾಗಿ ತಿಳಿದುಬಂದಿರುತ್ತದೆ. ಸದರಿ ದಾಳಿಯ ಸಮಯದಲ್ಲಿ ಮನೆಯ ಮಾಲೀಕರಾಗಲೀ ಮತ್ತು ಯಾವುದೇ ವಾರಸುದಾರರು ಇರುವುದಿಲ್ಲ. ಎಂಟು ಗೋಣಿಚೀಲಗಳಲ್ಲಿದ್ದ ಶ್ರೀಗಂಧದ ತುಂಡುಗಳನ್ನು ಅಳತೆ ಮಾಡಲಾಗಿ ಒಟ್ಟು 44 ಶ್ರೀಗಂಧದ ತುಂಡುಗಳಿದ್ದು, ಇದರ ತೂಕ 405 ಕೆ.ಜಿ ಇರುತ್ತದೆ. ಸೂಕ್ತ ರಹದಾರಿ ಇಲ್ಲದೇ ಶ್ರೀಗಂಧವನ್ನು ದಾಸ್ತಾನು ಮಾಡುವುದು ಕರ್ನಾಟಕ ಅರಣ್ಯ ಕಾಯ್ದೆ 1963ರ ಪ್ರಕಾರ ಅಕ್ರಮವಾಗಿರುವುದರಿಂದ ಸದರಿ ಶ್ರೀಗಂಧವನ್ನು ಮಹಜರ್ ಸಹಿತ ಸರ್ಕಾರದ ಪರ ಅಮಾನತ್ತುಪಡಿಸಿಕೊಂಡು ಅರಣ್ಯ ಅಪರಾಧ ಮೊಕದ್ದಮೆಯನ್ನು ದಾಖಲಿಸಿರುತ್ತಾರೆ.

ಹೆಚ್ಚಿನ ತನಿಖೆಗಾಗಿ 405 ಕೆ.ಜಿ ಶ್ರೀಗಂಧವನ್ನು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಸಂಚಾರಿ ದಳ, ಬೆಂಗಳೂರು ರವರ ಸಮಕ್ಷಮ ಹಾಜರುಪಡಿಸಿರುತ್ತಾರೆ. ಜಪ್ತು ಮಾಡಲಾದ ಮುದ್ದೆಮಾಲನ್ನು ಸುರಕ್ಷತೆಗಾಗಿ ಅರಣ್ಯ ಸಂಚಾರಿ ದಳದ ದಾಸ್ತಾನು ಮಳಿಗೆಯಲ್ಲಿ ಇಡಲಾಗಿರುತ್ತದೆ.

ಸೂಕ್ತ ರಹದಾರಿ ಇಲ್ಲದೇ ಅಕ್ರಮವಾಗಿ ಶ್ರೀಗಂಧವನ್ನು ದಾಸ್ತಾನು ಮಾಡುವುದು ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 87ರ ಉಲ್ಲಂಘನೆಯಾಗಿದ್ದು, ಸದರಿ ಕಾಯ್ದೆಯ ಸೆಕ್ಷನ್ 71ಎ ರಡಿಯಲ್ಲಿ ಕ್ರಮ ಜರುಗಿಸಲು ಕೋರಿದ ಮೇರೆಗೆ ಶ್ರೀಗಂಧವನ್ನು ಅಕ್ರಮವಾಗಿ ದಾಸ್ತಾನು ಮಾಡಲಾಗಿದ್ದ ಮನೆಯ ಮಾಲೀಕರಾದ ಸೈಯದ್ ಮಹಮದ್ ಇವರ ಬಗ್ಗೆ ತನಿಖೆ ನಡೆಸಲು ವಲಯ ಅರಣ್ಯಾಧಿಕಾರಿಗಳು, ಅರಣ್ಯ ಸಂಚಾರಿ ದಳ, ಬೆಂಗಳೂರು ಇವರು ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ ತಾಲ್ಲೂಕು, ಮೇಡಿ ಮಲ್ಲಸಂದ್ರ ಗ್ರಾಮದಲ್ಲಿ ಈ ಹಿಂದೆ ವಾಸವಿದ್ದ ಸೈಯದ್ ಮಹಮದ್ ಇವರ ವಾಸಸ್ಥಳಕ್ಕೆ ಭೇಟಿ ನೀಡಿ ವಿಚಾರಣೆ ನಡೆಸಲಾಗಿ, ಸದರಿ ಸ್ಥಳದಲ್ಲಿನ ಅಕ್ಕಪಕ್ಕದ ವಾಸಿಗಳು ಸೈಯದ್ ಮಹಮದ್ ಇವರ ಮನೆಯ ಮೇಲೆ ಇಲಾಖೆಯವರು ದಾಳಿ ಮಾಡಿದಾಗಿನಿಂದ ಸದರಿ ಮನೆಯಲ್ಲಿ ಯಾರೂ ಸಹ ವಾಸವಿರುವುದಿಲ್ಲವೆಂದು ಹಾಗೂ ಸೈಯದ್ ಮಹಮದ್ ಎಂಬ ವ್ಯಕ್ತಿಯು ಇಲ್ಲಿಯವರೆಗೂ ಕಂಡಿರುವುದಿಲ್ಲವೆಂದು ತಿಳಿಸಿದ ಮೇರೆಗೆ ಇದನ್ನು ಖಾತರಿಪಡಿಸಿಕೊಂಡು ಪಂಚನಾಮೆ ಜರುಗಿಸಿ ಅಧಿಕೃತ ಅಧಿಕಾರಿಗಳಿಗೆ ಸಲ್ಲಿಸಿರುತ್ತಾರೆ. ಆರೋಪಿಗಳು ಪತ್ತೆಯಾಗದೇ ಇರುವ ಕಾರಣ, ಅಮಾನತ್ತುಪಡಿಸಿಕೊಂಡಿರುವ 405 ಕೆ.ಜಿ ಶ್ರೀಗಂಧವನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಕ್ರಮ ಜರುಗಿಸುವಂತೆ ಕೋರಿರುತ್ತಾರೆ.

ಪ್ರಕರಣಕ್ಕೆ ಸಂಬಂಧಿಸಿದ ಸರ್ಕಾರಿ ಪರ ಸಾಕ್ಷಿಗಳಾದ ಶ್ರೀ.ಕೆ.ಯು.ಪೋತಪ್ಪ ಬಿನ್ ಲೇಟ್ ಶ್ರೀ.ಕೆ.ಯು.ಅಂಬಣ್ಣ, ವಲಯ ಅರಣ್ಯಾಧಿಕಾರಿ (ಅಂದಿನ ವನಪಾಲಕ), ಶ್ರೀ.ಕೆ.ವಿ.ಶ್ರೀನಿವಾಸಪ್ಪ ಬಿನ್ ಲೇಟ್ ಶ್ರೀ.ವರದಪ್ಪ, ವಲಯ ಅರಣ್ಯಾಧಿಕಾರಿ ಹಾಗೂ ಶ್ರೀಕೆ.ಜಿ.ಮಂಜುನಾಥ್ ಬಿನ್ ಲೇಟ್ ಶ್ರೀ.ಕೆ.ಎಸ್.ಗಂಗಣ್ಣ, ವನಪಾಲಕ (ಅಂದಿನ ಅರಣ್ಯ ರಕ್ಷಕ) ಇವರುಗಳ ಮುಖ್ಯ ವಿಚಾರಣೆಯನ್ನು ಶ್ರೀ.ರವಿಕುಮಾರ್, ಸಹಾಯಕ ಸರ್ಕಾರಿ ಅಭಿಯೋಜಕರು ದಿನಾಂಕ:16–09–2011ರಂದು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು ರವರ ಸಮಕ್ಷಮ ನಡೆಸಿರುತ್ತಾರೆ.

ಸರ್ಕಾರಿ ಪರ ಸಾಕ್ಷಿಗಳಾದ ಶ್ರೀ.ಮಹದೇವಯ್ಯ, ವಲಯ ಅರಣ್ಯಾಧಿಕಾರಿ, ಶ್ರೀ.ರಾಮಸ್ವಾಮಿ, ಅರಣ್ಯ ರಕ್ಷಕ ಹಾಗೂ ಶ್ರೀ.ವಿ.ಅನಂತ, ವಾಹನ ಚಾಲಕ ಇವರು ಗೈರು ಹಾಜರಾದ ಕಾರಣ ವಿಚಾರಣೆಗೆ ಒಳಪಡಿಸಲಾಗಿರುವುದಿಲ್ಲ. ಹಾಜರಿದ್ದ ಸರ್ಕಾರಿ ಸಾಕ್ಷಿಗಳು ನೀಡಿರುವ ಹೇಳಿಕೆಗಳು ಪ್ರಕರಣದಲ್ಲಿ 405 ಕೆ.ಜಿ ಶ್ರೀಗಂಧವನ್ನು ಅಕ್ರಮವಾಗಿ ದಾಸ್ತಾನು ಮಾಡಿರುವ ಬಗ್ಗೆ ಸಾಕ್ಷಿ ನೀಡಿರುವುದರಿಂದ ಗೈರು ಹಾಜರಿರುವ ಸಾಕ್ಷಿಗಳ ವಿಚಾರಣೆ ಅವಶ್ಯಕತೆ ಇಲ್ಲವೆಂದು ಸರ್ಕಾರಿ ವಕೀಲರು ವಾದವನ್ನು ಮಂಡಿಸಿರುತ್ತಾರೆ.

ಪ್ರಕರಣದ ಬಗ್ಗೆ ಸರ್ಕಾರಿ ವಕೀಲರು ಮಂಡಿಸಿದ ವಾದ ಮತ್ತು ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಲಾಯಿತು. ಆರೋಪಿಯು ತಲೆಮರೆಸಿಕೊಂಡಿರುವುದರಿಂದ ಹಾಗೂ ಪ್ರತಿವಾದಿಗಳು ಹಾಜರಿರದ ಕಾರಣ, ಆರೋಪಿಗಳು ಅವರ ವಿಳಾಸದಲ್ಲಿ ವಾಸವಿಲ್ಲದೇ ಇರುವ ಕಾರಣ, ನನ್ನ ಎದುರಿನಲ್ಲಿ ಹಾಜರುಪಡಿಸಿರುವ ದಾಖಲೆಗಳ ಆದಾರದ ಮೇಲೆ ತೀರ್ಮಾನವನ್ನು ಕೈಗೊಳ್ಳಬೇಕಾಗಿರುತ್ತದೆ. ತೀರ್ಮಾನವನ್ನು ಕೈಗೊಳ್ಳಲು ಈ ಕೆಳಕಂಡ ಅಂಶಗಳನ್ನು ಪರಿಗಣಿಸಬೇಕಾಗಿದೆ.

1. ಸದರಿ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಳ್ಳಲಾಗಿರುವ ಒಟ್ಟು 405 ಕೆ.ಜಿ ಶ್ರೀಗಂಧದ ತುಂಡುಗಳು ದಾಸ್ತಾನು ಮಾಡಿರುವುದು ಕರ್ನಾಟಕ ಅರಣ್ಯ ಕಾಯ್ದೆ 1963 ರ ಸೆಕ್ಷನ್ 87 ರ ಉಲ್ಲಂಘನೆಯಾಗಿದೆಯೇ?
2. ಸದರಿ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಳ್ಳಲಾಗಿರುವ ಒಟ್ಟು 405 ಕೆ.ಜಿ ಶ್ರೀಗಂಧದ ತುಂಡುಗಳನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ?
3. ಮೇಲಿನ ಅಂಶಗಳಿಗೆ ಅನುಗುಣವಾಗಿ ಯಾವ ಆದೇಶ?

ಮೇಲಿನ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆ ಇರುತ್ತದೆ.

1. ಮೊದಲನೇ ಅಂಶಕ್ಕೆ ನನ್ನ ಉತ್ತರ ಅಹುದು ಎಂಬುದಾಗಿರುತ್ತದೆ.
2. ಎರಡನೇ ಅಂಶಕ್ಕೆ ನನ್ನ ಉತ್ತರ ಅಹುದು ಎಂಬುದಾಗಿರುತ್ತದೆ.
3. ಅಂತಿಮ ಆದೇಶವನ್ನು ಈ ಕೆಳಕಂಡ ಕಾರಣಗಳಿಗೆ ನೀಡಲಾಗಿದೆ.

ದಿನಾಂಕ:26–09–1996ರಂದು ಸಿಬ್ಬಂದಿಗಳು ಹೊಸಕೋಟೆ ತಾಲ್ಲೂಕಿನ ಮೇಡಿ ಮಲ್ಲಸಂದ್ರ ಗ್ರಾಮದ ಮೇಲೆ ದಾಳಿ ಮಾಡಿದಾಗ ಸೈಯದ್ ಅಹಮದ್ ಎಂಬುವವರಿಗೆ ಸೇರಿದ ಮನೆಯ ಒಳಗಡೆ ಇದ್ದ ಗುಂಡಿಯ ಒಳಗೆ ಅಕ್ರಮವಾಗಿ ಶ್ರೀಗಂಧದ ತುಂಡುಗಳನ್ನು ದಾಸ್ತಾನು ಮಾಡಿರುವುದು ಕರ್ನಾಟಕ ಅರಣ್ಯ ಕಾಯ್ದೆ 1963 ರ ಸೆಕ್ಷನ್ 87ರ ಉಲ್ಲಂಘನೆಯಾಗಿರುತ್ತದೆ. ಶ್ರೀಗಂಧವನ್ನು ದಾಸ್ತಾನು ಮಾಡಲು ಇರಬೇಕಾದ ರಹದಾರಿ ಮತ್ತು ಸಂಬಂಧಪಟ್ಟ ದಾಖಲೆಗಳು ಸದರಿ ಮನೆಯಲ್ಲಿ ದೊರಕದೇ ಇರುವುದರಿಂದ ಅರಣ್ಯ ಮೊಕದ್ದಮೆಯು ದಾಖಲಾಗಿದ್ದು, ಅರಣ್ಯ ಸಿಬ್ಬಂದಿಯು ದಾಖಲಿಸಿರುವ ಮೊಕದ್ದಮೆಯು ಅರಣ್ಯ ಕಾಯ್ದೆಯ ವ್ಯಾಪ್ತಿಯಲ್ಲಿ ಸರಿ ಇರುತ್ತದೆ. ಮನೆಯ ಮಾಲೀಕರ ಮಾಹಿತಿಯನ್ನು ಸಂಗ್ರಹಿಸಲು ವಲಯ ಅರಣ್ಯಾಧಿಕಾರಿಗಳು, ಅರಣ್ಯ ಸಂಚಾರಿ ದಳ, ಬೆಂಗಳೂರು ಇವರು ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ ತಾಲ್ಲೂಕು, ಮೇಡಿ ಮಲ್ಲಸಂದ್ರ ಗ್ರಾಮದಲ್ಲಿ ಈ ಹಿಂದೆ ವಾಸವಿದ್ದ ಸೈಯದ್ ಮಹಮದ್ ಇವರ ವಾಸಸ್ಥಳಕ್ಕೆ ಭೇಟಿ ನೀಡಿ ವಿಚಾರಣೆ ನಡೆಸಿದ ಸಮಯದಲ್ಲಿ ಸೈಯದ್ ಮಹಮದ್ ಇವರ ಮನೆಯ ಮೇಲೆ ಇಲಾಖೆಯವರು ದಾಳಿ ಮಾಡಿದಾಗಿನಿಂದ ಸದರಿ ಮನೆಯಲ್ಲಿ ಯಾರೂ ಸಹ ವಾಸವಿರುವುದಿಲ್ಲವೆಂದು ಹಾಗೂ ಸೈಯದ್

ಮಹಮದ್ ಎಂಬ ವ್ಯಕ್ತಿಯು ಇಲ್ಲಿಯವರೆಗೂ ಕಂಡಿರುವುದಿಲ್ಲವೆಂದು ವಲಯ ಅರಣ್ಯಾಧಿಕಾರಿಗಳು ಪಂಚನಾಮೆ ಸಹಿತ ಸಲ್ಲಿಸಿರುವ ವರದಿಯಿಂದ ಕಂಡುಬಂದಿರುತ್ತದೆ. ಸರ್ಕಾರಿ ಪರ ಸಾಕ್ಷಿಗಳು ಸಹ ಸದರಿ ಶ್ರೀಗಂಧವನ್ನು ಅಕ್ರಮವಾಗಿ ದಾಸ್ತಾನು ಮಾಡಿರುವುದನ್ನು ವಿಚಾರಣಾ ಸಮಯದಲ್ಲಿ ಹೇಳಿಕೆ ನೀಡಿರುತ್ತಾರೆ. ಆದುದರಿಂದ ಒಟ್ಟು 405 ಕೆ.ಜಿ ಶ್ರೀಗಂಧದ ತುಂಡುಗಳ ದಾಸ್ತಾನು ಮಾಡಿ ಕರ್ನಾಟಕ ಅರಣ್ಯ ಕಾಯ್ದೆ 1963 ರ ಸೆಕ್ಷನ್ 84ರ ಮೇರೆಗೆ ಸರ್ಕಾರಿ ಸ್ವತ್ತಾಗಿದ್ದು, ಸೆಕ್ಷನ್ 87ರ ಉಲ್ಲಂಘನೆ ಆಗಿರುವುದು ಖಾತರಿಯಾಗಿರುತ್ತದೆ.

ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71ಎ ಮೇರೆಗೆ ಅರಣ್ಯ ಮೊಕದ್ದಮೆಯಲ್ಲಿ ಅಮಾನತ್ತುಪಡಿಸಿಕೊಂಡಿರುವ ಸರ್ಕಾರ ಸ್ವತ್ತಾದ 405 ಕೆ.ಜಿ ಶ್ರೀಗಂಧದ ತುಂಡುಗಳನ್ನು ಅಧಿಕೃತ ಅಧಿಕಾರಿಯ ಮುಂದೆ ಹಾಜರುಪಡಿಸಿರುವುದರಿಂದ ಅಂತಹ ಸ್ವತ್ತನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಅವಕಾಶವಿರುವುದರಿಂದ ಸದರಿ ಶ್ರೀಗಂಧವನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುತ್ತದೆ.

ಆದೇಶ

ನಾನು ಕೆ.ಬಿ.ಮಂಜುನಾಥ, ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71ಎ ರ ಮೇರೆಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಅರಣ್ಯ ಅಪರಾಧ ಮೊಕದ್ದಮೆ ಸಂಖ್ಯೆ:158/1996–97ರಲ್ಲಿ ಅಮಾನತ್ತುಪಡಿಸಿಕೊಂಡಿರುವ 405 ಕೆ.ಜಿ ಶ್ರೀಗಂಧದ ತುಂಡುಗಳನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಈ ಮೂಲಕ ಆದೇಶಿಸುತ್ತೇನೆ.

ಈ ಆದೇಶವನ್ನು ಬೆರಳಚ್ಚುಗಾರರಿಗೆ ಉತ್ತಲೇಖನ ಕೊಟ್ಟಿದ್ದು, ಅವರು ಬೆರಳಚ್ಚಿಸಿದ ನಂತರ ತಿದ್ದುಪಡಿ ಮಾಡಿ ಈ ದಿನ ದಿನಾಂಕ: 16–12–2011ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

ಈ ಆದೇಶವು ರಾಜ್ಯಪತ್ರದಲ್ಲಿ ಪ್ರಕಟಗೊಂಡ 30 ದಿವಸಗಳ ನಂತರ ಜಾರಿಗೆ ಬರುತ್ತದೆ.

ಕೆ.ಬಿ.ಮಂಜುನಾಥ,
ಅಧಿಕೃತ ಅಧಿಕಾರಿ ಹಾಗೂ
ಉಪ ಅರಣ್ಯ ಸಂರಕ್ಷಣಾಧಿಕಾರಿ,
ಅರಣ್ಯ ಸಂಚಾರಿ ದಳ, ಬೆಂಗಳೂರು.

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಸಂಚಾರಿ ದಳ, ಬೆಂಗಳೂರು ರವರ ನ್ಯಾಯಾಲಯ.

ಎಫ್.ಓ.ಸಿ ಸಂಖ್ಯೆ: 334/1996-97 ದಿನಾಂಕ: 31/03/1997

ಸಂಖ್ಯೆ : ಎ1.ಅಅಪ್ರ.71A.334/96-97, ದಿನಾಂಕ : 16/12/2011.

ಉಪಸ್ಥಿತರು	:	**ಶ್ರೀ ಕೆ.ಬಿ. ಮಂಜುನಾಥ, ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು**
ಪಿರ್ಯಾದಿ	:	**ವಲಯ ಅರಣ್ಯಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು**
ಅರ್ಜಿದಾರರು:ಆರೋಪಿಗಳು	:	**ಪತ್ತೆಯಾಗಿರುವುದಿಲ್ಲ**

ಪ್ರಕರಣದ ಮುಖ್ಯಾಂಶಗಳು :

ದಿನಾಂಕ:31–03–1996ರಂದು ಖಚಿತ ಮಾಹಿತಿಯ ಮೇಲೆ ಅರಣ್ಯ ಸಂಚಾರಿ ದಳದ ಸಿಬ್ಬಂದಿಗಳು ಬೆಂಗಳೂರು ನಗರದ ಪ್ರಕಾಶನಗರ ಬಡಾವಣೆಯ ಮುದ್ದಪ್ಪ ಗಾರ್ಡನ್ ರಸ್ತೆ, 2ನೇ ಅಡ್ಡರಸ್ತೆಯಲ್ಲಿರುವ ಮನೆ ನಂ.52/1 ಮಳಿಗೆಗೆ ದಾಳಿ ಮಾಡಿದಾಗ ಅಕ್ರಮವಾಗಿ ಬೀಟೆ, ತೇಗ, ಹೊನ್ನೆ ಹಾಗು ಕೆಲವು ಕಾಡು ಜಾತಿಯ ಸೈಜುಗಳನ್ನು ಶೇಖರಿಸಿರುವುದು ಕಂಡುಬಂದಿರುತ್ತದೆ. ಇದಕ್ಕೆ ಸಂಬಂಧಪಟ್ಟವರು ಯಾರೂ ಸಹ ಸ್ಥಳದಲ್ಲಿ ಇಲ್ಲದಿದ್ದಕಾರಣ, ಸ್ಥಳೀಯರ ಬಳಿ ವಿಚಾರಿಸಲಾಗಿ, ಶೇಖರಿಸಿಟ್ಟಿದ್ದ ಮಾಲಿನ ವಾರಸುದಾರರು ಯಾರೆಂಬುದು ತಿಳಿದುಬಂದಿರುವುದಿಲ್ಲ. ಸದರಿ ಮರಗಳ ಕೋಯ್ದ ಸೈಜುಗಳನ್ನು ಅಳತೆ ಮಾಡಲಾಗಿ, ಬೀಟೆ ಕೋಯ್ದ ಸೈಜುಗಳು ಒಟ್ಟು 6.388 ಸಿ.ಎಫ್.ಟಿ, ಹೊನ್ನೆ ಕೋಯ್ದ ಸೈಜುಗಳು ಒಟ್ಟು 40.693 ಸಿ.ಎಫ್.ಟಿ ಮತ್ತು ತೇಗ ಮರದ ಕೋಯ್ದ ಸೈಜುಗಳು ಒಟ್ಟು 1.781 ಸಿ.ಎಫ್.ಟಿ ಇರುತ್ತದೆ. ಸೂಕ್ತ ರಹದಾರಿ ಇಲ್ಲದೇ ಬೀಟೆ, ಹೊನ್ನೆ ಮತ್ತು ತೇಗದ ಮರದ ಕೋಯ್ದ ಸೈಜುಗಳನ್ನು ದಾಸ್ತಾನು ಮಾಡುವುದು ಕರ್ನಾಟಕ ಅರಣ್ಯ ಕಾಯ್ದೆ 1963ರ ಪ್ರಕಾರ ಅಕ್ರಮವಾಗಿರುವುದರಿಂದ ಸದರಿ ಕೋಯ್ದ ಸೈಜುಗಳನ್ನು ಮಹಜರ್ ಸಹಿತ ಸರ್ಕಾರದ ಪರ ಅಮಾನತ್ತುಪಡಿಸಿಕೊಂಡು ಅರಣ್ಯ ಅಪರಾಧ ಮೊಕದ್ದಮೆಯನ್ನು ದಾಖಲಿಸಿರುತ್ತಾರೆ ಮತ್ತು ಹೆಚ್ಚಿನ ತನಿಖೆಗಾಗಿ ಜಪ್ತು ಮಾಡಲಾದ ಮಾಲನ್ನು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಸಂಚಾರಿ ದಳ, ಬೆಂಗಳೂರು ರವರ ಸಮಕ್ಷಮ ಹಾಜರುಪಡಿಸಿರುತ್ತಾರೆ. ಜಪ್ತು ಮಾಡಲಾದ ಮುದ್ದೆಮಾಲನ್ನು ಸುರಕ್ಷತೆಗಾಗಿ ಅರಣ್ಯ ಇಲಾಖೆಯ ಜಾರಕಬಂಡೆ ದಾಸ್ತಾನು ಮಳಿಗೆಯಲ್ಲಿ ಇಡಲಾಗಿರುತ್ತದೆ.

ಸೂಕ್ತ ರಹದಾರಿ ಇಲ್ಲದೇ ಅಕ್ರಮವಾಗಿ ಬೀಟೆ, ಹೊನ್ನೆ ಮತ್ತು ತೇಗದ ಮರದ ಕೋಯ್ದ ಸೈಜುಗಳನ್ನು ದಾಸ್ತಾನು ಮಾಡುವುದು ಕರ್ನಾಟಕ ಅರಣ್ಯ ಕಾಯ್ದೆಯ ಉಲ್ಲಂಘನೆಯಾಗಿದ್ದು, ಆರೋಪಿಗಳು ಪತ್ತೆಯಾಗದೇ ಇರುವ ಕಾರಣ, ಅಮಾನತ್ತುಪಡಿಸಿಕೊಂಡಿರುವ ಬೀಟೆ, ಹೊನ್ನೆ ಮತ್ತು ತೇಗದ ಮರದ ಕೋಯ್ದ ಸೈಜುಗಳನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಕ್ರಮ ಜರುಗಿಸುವಂತೆ ಕೋರಿರುತ್ತಾರೆ.

ಪ್ರಕರಣಕ್ಕೆ ಸಂಬಂಧಿಸಿದ ಸರ್ಕಾರಿ ಪರ ಸಾಕ್ಷಿಗಳಾದ ಶ್ರೀ.ಕೆ.ವಿ.ಶ್ರೀನಿವಾಸಪ್ಪ ಬಿನ್ ಲೇಟ್ ಶ್ರೀ.ವರದಪ್ಪ, ವಲಯ ಅರಣ್ಯಾಧಿಕಾರಿ ಇವರ ಮುಖ್ಯ ವಿಚಾರಣೆಯನ್ನು ಶ್ರೀ.ರವಿಕುಮಾರ್, ಸಹಾಯಕ ಸರ್ಕಾರಿ ಅಭಿಯೋಜಕರು ದಿನಾಂಕ:16–09–2011ರಂದು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು ರವರ ಸಮಕ್ಷಮ ನಡೆಸಿರುತ್ತಾರೆ.

ಸರ್ಕಾರಿ ಪರ ಸಾಕ್ಷಿಗಳಾದ ಶ್ರೀ.ಮಹದೇವಯ್ಯ, ವಲಯ ಅರಣ್ಯಾಧಿಕಾರಿ, ಶ್ರೀ.ಕೆ.ಎಸ್.ರುದ್ರಯ್ಯ, ಉಪ ವಲಯ ಅರಣ್ಯಾಧಿಕಾರಿ (ಅಂದಿನ ಅರಣ್ಯ ರಕ್ಷಕ) ಹಾಗೂ ಶ್ರೀ.ವೀರಣ್ಣ ರೆಡ್ಡಿ, ಅರಣ್ಯ ರಕ್ಷಕ ಇವರು ಗೈರು ಹಾಜರಾದ ಕಾರಣ ವಿಚಾರಣೆಗೆ ಒಳಪಡಿಸಲಾಗಿರುವುದಿಲ್ಲ. ಹಾಜರಿದ್ದ ಸರ್ಕಾರಿ ಸಾಕ್ಷಿಗಳು ನೀಡಿರುವ ಹೇಳಿಕೆಗಳು ಪ್ರಕರಣದಲ್ಲಿ ಒಟ್ಟು 48.862 ಘನ ಅಡಿ ಬೀಟೆ, ಹೊನ್ನೆ ಮತ್ತು ತೇಗದ ಮರದ ಕೋಯ್ದ ಸೈಜುಗಳನ್ನು ಅಕ್ರಮವಾಗಿ ದಾಸ್ತಾನು ಮಾಡಿರುವ ಬಗ್ಗೆ ಸಾಕ್ಷಿ ನೀಡಿರುವುದರಿಂದ ಗೈರು ಹಾಜರಿರುವ ಸಾಕ್ಷಿಗಳ ವಿಚಾರಣೆ ಅವಶ್ಯಕತೆ ಇಲ್ಲವೆಂದು ಸರ್ಕಾರಿ ವಕೀಲರು ವಾದವನ್ನು ಮಂಡಿಸಿರುತ್ತಾರೆ.

ಪ್ರಕರಣದ ಬಗ್ಗೆ ಸರ್ಕಾರಿ ವಕೀಲರು ಮಂಡಿಸಿದ ವಾದ ಮತ್ತು ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಲಾಯಿತು. ಪ್ರತಿವಾದಿಗಳು ಇಲ್ಲದ ಕಾರಣ, ನನ್ನ ಎದುರಿನಲ್ಲಿ ಹಾಜರುಪಡಿಸಿರುವ ದಾಖಲೆಗಳ ಆದಾರದ ಮೇಲೆ ತೀರ್ಮಾನವನ್ನು ಕೈಗೊಳ್ಳಬೇಕಾಗಿರುತ್ತದೆ. ತೀರ್ಮಾನವನ್ನು ಕೈಗೊಳ್ಳಲು ಈ ಕೆಳಕಂಡ ಅಂಶಗಳನ್ನು ಪರಿಗಣಿಸಬೇಕಾಗಿದೆ.

1. ಸದರಿ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಳ್ಳಲಾಗಿರುವ ಒಟ್ಟು 48.862 ಘನ ಅಡಿ ಬೀಟೆ, ಹೊನ್ನೆ ಮತ್ತು ತೇಗದ ಮರದ ಕೋಯ್ದ ಸೈಜುಗಳನ್ನು ದಾಸ್ತಾನು ಮಾಡಿರುವುದು ಕರ್ನಾಟಕ ಅರಣ್ಯ ಕಾಯ್ದೆ 1963 ರ ಸೆಕ್ಷನ್ 104 ಎ ಮತ್ತು ನಿಯಮ 1969 ರ ನಿಯಮ 144 ಗಳ ಉಲ್ಲಂಘನೆಯಾಗಿದೆಯೇ?

2. ಸದರಿ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಳ್ಳಲಾಗಿರುವ ಒಟ್ಟು 48.862 ಘನ ಅಡಿ ಬೀಟೆ, ಹೊನ್ನೆ ಮತ್ತು ತೇಗದ ಮರದ ಕೋಯ್ದ ಸೈಜುಗಳನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ?

3. ಮೇಲಿನ ಅಂಶಗಳಿಗೆ ಅನುಗುಣವಾಗಿ ಯಾವ ಆದೇಶ?

ಮೇಲಿನ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆ ಇರುತ್ತದೆ.

1. ಮೊದಲನೇ ಅಂಶಕ್ಕೆ ನನ್ನ ಉತ್ತರ ಅಹುದು ಎಂಬುದಾಗಿರುತ್ತದೆ.

2. ಎರಡನೇ ಅಂಶಕ್ಕೆ ನನ್ನ ಉತ್ತರ ಅಹುದು ಎಂಬುದಾಗಿರುತ್ತದೆ.

3. ಅಂತಿಮ ಆದೇಶವನ್ನು ಈ ಕೆಳಕಂಡ ಕಾರಣಗಳಿಗೆ ನೀಡಲಾಗಿದೆ.

ದಿನಾಂಕ:31–03–1996ರಂದು ಸಿಬ್ಬಂದಿಗಳು ಬೆಂಗಳೂರು ನಗರದ ಪ್ರಕಾಶನಗರ ಬಡಾವಣೆಯ ಮುದ್ದಪ್ಪ ಗಾರ್ಡನ್ ರಸ್ತೆ, 2ನೇ ಅಡ್ಡರಸ್ತೆಯಲ್ಲಿರುವ ಮನೆ ನಂ.52/1 ಮಳಿಗೆಗೆ ದಾಳಿ ಮಾಡಿದಾಗ ಅಕ್ರಮವಾಗಿ ಬೀಟೆ, ತೇಗ, ಹೊನ್ನೆ ಹಾಗೂ ಕೆಲವು ಕಾಡು ಜಾತಿಯ ಸೈಜುಗಳನ್ನು ಶೇಖರಿಸಿರುವುದು.

ಕರ್ನಾಟಕ ಅರಣ್ಯ ಕಾಯ್ದೆ 1963 ರ ಪ್ರಕಾರ ಬೀಟೆ, ತೇಗ ಹಾಗೂ ಹೊನ್ನೆ ಮರದ ಕೋಯ್ದ ಸೈಜುಗಳನ್ನು ದಾಸ್ತಾನು ಮಾಡಲು ಇರಬೇಕಾದ ರಹದಾರಿ ಮತ್ತು ಸಂಬಂಧಪಟ್ಟ ದಾಖಲೆಗಳು ಸದರಿ ಸ್ಥಳದಲ್ಲಿ ದೊರಕದೇ ಇರುವುದರಿಂದ ಮತ್ತು ಸದರಿ ಮಾಲಿನ ವಾರಸುದಾರರು ಯಾರೆಂಬುದು ಪತ್ತೆಯಾಗದ ಕಾರಣ ಅರಣ್ಯ ಮೊಕದ್ದಮೆಯು ದಾಖಲಾಗಿದ್ದು, ಅರಣ್ಯ ಸಿಬ್ಬಂದಿಯು ದಾಖಲಿಸಿರುವ ಮೊಕದ್ದಮೆಯು ಅರಣ್ಯ ಕಾಯ್ದೆಯ ವ್ಯಾಪ್ತಿಯಲ್ಲಿ ಸರಿ ಇರುತ್ತದೆ. ಸರ್ಕಾರಿ ಪರ ಸಾಕ್ಷಿಗಳು ಸಹ ಸದರಿ ಬೀಟೆ, ತೇಗ ಹಾಗೂ ಹೊನ್ನೆ ಮರಗಳ ಕೋಯ್ದ ಸೈಜುಗಳನ್ನು ಅಕ್ರಮವಾಗಿ ದಾಸ್ತಾನು ಮಾಡಿರುವುದನ್ನು ವಿಚಾರಣಾ ಸಮಯದಲ್ಲಿ ಹೇಳಿಕೆ ನೀಡಿರುತ್ತಾರೆ. ಆದುದರಿಂದ ಕರ್ನಾಟಕ ಅರಣ್ಯ ಕಾಯ್ದೆ 1963 ಹಾಗೂ ನಿಯಮ 1969ರ ಉಲ್ಲಂಘನೆಯಾಗಿರುವುದು ಖಾತರಿಯಾಗಿರುತ್ತದೆ.

ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 80 ರ ಮೇರೆಗೆ ಅರಣ್ಯೋತ್ಪನ್ನಗಳ ಮಾಲೀಕತ್ವವು ರುಜುವಾತು ಆಗುವವರೆಗೆ ಅವು ಸರ್ಕಾರದ ಸ್ವತ್ತೆಂದು ಭಾವಿಸಲಾಗುವುದು. ಸದರಿ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಂಡಿರುವ ಬೀಟೆ, ತೇಗ ಹಾಗೂ ಹೊನ್ನೆ ಮರಗಳ ಒಟ್ಟು 48.862 ಘನ ಅಡಿ ಕೋಯ್ದ ಸೈಜುಗಳನ್ನು ಅಧಿಕೃತ ಅಧಿಕಾರಿಯ ಮುಂದೆ ಹಾಜರುಪಡಿಸಲಾಗಿದೆ. ಸದರಿ ಮಾಲಿನ ವಾರಸುದಾರರು ಪತ್ತೆಯಾಗಿರುವುದಿಲ್ಲವೆಂದು ವಿಚಾರಣಾ ಸಮಯದಲ್ಲಿ ಸರ್ಕಾರಿ ಪರ ಸಾಕ್ಷಿ ನೀಡಲಾಗಿದೆ. ವಾರಸುದಾರರಿಲ್ಲದ ಸ್ವತ್ತನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಅವಕಾಶವಿರುವುದರಿಂದ ಸದರಿ ಮಾಲನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುತ್ತದೆ.

ಆದೇಶ

ನಾನು ಕೆ.ಬಿ.ಮಂಜುನಾಥ, ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71ಎ ರ ಮೇರೆಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಅರಣ್ಯ ಅಪರಾಧ ಮೊಕದ್ದಮೆ ಸಂಖ್ಯೆ:334/1996–97ರಲ್ಲಿ ಅಮಾನತ್ತುಪಡಿಸಿಕೊಂಡಿರುವ ಬೀಟೆ ಕೋಯ್ದ ಸೈಜುಗಳು ಒಟ್ಟು 6.388 ಸಿ.ಎಫ್.ಟಿ, ಹೊನ್ನೆ ಕೋಯ್ದ ಸೈಜುಗಳು ಒಟ್ಟು 40.693 ಸಿ.ಎಫ್.ಟಿ ಮತ್ತು ತೇಗ ಮರದ ಕೋಯ್ದ ಸೈಜುಗಳು ಒಟ್ಟು 1.781 ಸಿ.ಎಫ್.ಟಿ ಗಳನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಈ ಮೂಲಕ ಆದೇಶಿಸುತ್ತೇನೆ.

ಈ ಆದೇಶವನ್ನು ಬೆರಳಚ್ಚುಗಾರರಿಗೆ ಉತ್ತಲೇಖನ ಕೊಟ್ಟಿದ್ದು, ಅವರು ಬೆರಳಚ್ಚಿಸಿದ ನಂತರ ತಿದ್ದುಪಡಿ ಮಾಡಿ ಈ ದಿನ ದಿನಾಂಕ:16–12–2011ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

ಈ ಆದೇಶವು ರಾಜ್ಯಪತ್ರದಲ್ಲಿ ಪ್ರಕಟಗೊಂಡ 30 ದಿವಸಗಳ ನಂತರ ಜಾರಿಗೆ ಬರುತ್ತದೆ.

ಕೆ.ಬಿ.ಮಂಜುನಾಥ,
ಅಧಿಕೃತ ಅಧಿಕಾರಿ ಹಾಗೂ
ಉಪ ಅರಣ್ಯ ಸಂರಕ್ಷಣಾಧಿಕಾರಿ,
ಅರಣ್ಯ ಸಂಚಾರಿ ದಳ, ಬೆಂಗಳೂರು.

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಸಂಚಾರಿ ದಳ, ಬೆಂಗಳೂರು ರವರ ನ್ಯಾಯಾಲಯ.

ಎಫ್.ಓ.ಸಿ ಸಂಖ್ಯೆ: 262/2000-01, ದಿನಾಂಕ: 02/02/2001

ಸಂಖ್ಯೆ : ಎ1.ಅಅಪ್ರ.71A.262/00-01, ದಿನಾಂಕ : 20/12/2011.

ಉಪಸ್ಥಿತರು	:	**ಶ್ರೀ ಕೆ.ಬಿ. ಮಂಜುನಾಥ, ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು**
ಪಿರ್ಯಾದಿ	:	**ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು**
ಅರ್ಜಿದಾರರು:ಆರೋಪಿಗಳು	:	**ಎ1–ಸಿದ್ದಿಕ್ ಬಿನ್ ಹವಿರಾದ್, ಚಿಕ್ಕಮಗಳೂರು ಜಿಲ್ಲೆ** **ಎ2–ಸೋಮಶೇಖರ್ ಬಿನ್ ಕುಮಾರಸ್ವಾಮಿ, ಚಿಕ್ಕಮಗಳೂರು**

ಪ್ರಕರಣದ ಮುಖ್ಯಾಂಶಗಳು :

ದಿನಾಂಕ:02–02–2001ರಂದು ರಾತ್ರಿ 10.30ರ ಸಮಯದಲ್ಲಿ ಅರಣ್ಯ ಸಂಚಾರಿ ದಳದ ಸಿಬ್ಬಂದಿ ಗಸ್ತು ಕಾರ್ಯಚರಣೆಯಲ್ಲಿ ನಿರ್ವಹಿಸುತ್ತಿದ್ದಾಗ ತುಮಕೂರು ಕಡೆಯಿಂದ ಬೆಂಗಳೂರು ಕಡೆಗೆ ಅನುಮಾನಸ್ಪದವಾಗಿ ಬರುತ್ತಿದ್ದ ಮಾರುತಿ 800 ಬಿಳಿ ಬಣ್ಣದ ಕಾರನ್ನು ತಡೆದು ನಿಲ್ಲಿಸಿ ಪರಿಶೀಲಿಸಲಾಗಿ, ಕಾರಿನ ನೊಂದಣಿ ಸಂಖ್ಯೆ:ಕೆಎ–18–ಎಂ–1821 ಆಗಿದ್ದು, ಕಾರಿನ ಒಳಗೆ ಇಬ್ಬರು ವ್ಯಕ್ತಿಗಳು ಇರುವುದು ಕಂಡುಬಂದಿರುತ್ತದೆ. ನಂತರ ಕಾರಿನ ಡಿಕ್ಕಿಯನ್ನು ತೆಗೆಯಿಸಿ ನೋಡಲಾಗಿ, ಡಿಕ್ಕಿಯಲ್ಲಿ ಒಂದು ಗೋಣಿ ಚೀಲದಲ್ಲಿ ಮೂಟೆ ಕಟ್ಟಿ ಇಟ್ಟಿರುವುದನ್ನು ಕಂಡು ಅದನ್ನು ತೆಗೆದು ನೋಡಲಾಗಿ, ಮೂಟೆಯಲ್ಲಿ ಸಿಪ್ಪೆಸಹಿತ ಹಾಗೂ ಸಿಪ್ಪೆರಹಿತ ಶ್ರೀಗಂಧದ ತುಂಡುಗಳು ಹಾಗೂ ಮೂಟೆಯ ಕೆಳಗಡೆಯೂ ಸಹ ಶ್ರೀಗಂಧದ ತುಂಡುಗಳು ಇರುವುದು ಕಂಡುಬಂದಿರುತ್ತದೆ. ಕಾರಿನಲ್ಲಿದ್ದ ಆಸಾಮಿಗಳಾದ 1.ಸಿದ್ದಿಕ್ ಬಿನ್ ಹವಿರದ್, ವಾಹನ ಚಾಲಕ, ಆಲ್ದೂರು ಗ್ರಾಮ, ಚಿಕ್ಕಮಗಳೂರು ಜಿಲ್ಲೆ ಹಾಗೂ 2.ಸೋಮಶೇಖರ್ ಬಿನ್ ಕುಮಾರಸ್ವಾಮಿ, ಆಲ್ದೂರು ಗ್ರಾಮ, ಚಿಕ್ಕಮಗಳೂರು ಇವರುಗಳನ್ನು ವಿಚಾರಣೆಗೆ ಒಳಪಡಿಸಿ ಶ್ರೀಗಂಧವನ್ನು ಸಾಗಣೆ ಮಾಡಲು ಅರಣ್ಯ ಇಲಾಖೆಯ ರಹದಾರಿ ಇರುವುದೇ? ಎಂದು ಪ್ರಶ್ನಿಸಿದಾಗ, ತಮ್ಮ ಬಳಿ ರಹದಾರಿ ಇರುವುದಿಲ್ಲವೆಂದು ತಿಳಿಸಿರುತ್ತಾರೆ. ಆರೋಪಿಗಳನ್ನು ಮತ್ತು ಶ್ರೀಗಂಧದ ತುಂಡುಗಳನ್ನು ಪಂಚನಾಮೆ ಸಹಿತ ವಶಕ್ಕೆ ತೆಗೆದುಕೊಳ್ಳಲಾಯಿತು. ವಾಹನದಲ್ಲಿದ್ದ ಶ್ರೀಗಂಧವನ್ನು ತೂಕ ಮಾಡಲಾಗಿ, ಒಟ್ಟು 44 ಕೆ.ಜಿ ಇರುವುದು ಕಂಡುಬಂದಿರುತ್ತದೆ. ಕಾರನ್ನು ಪರಿಶೀಲನೆಗೆ ಒಳಪಡಿಸಿದಾಗ, ಕಾರಿನಲ್ಲಿ ನೊಂದಣಿ ಸಂಖ್ಯೆಗಳ ಎರಡು ನಾಮಫಲಕಗಳಿದ್ದು, ಅವುಗಳ ಸಂಖ್ಯೆ:ಕೆಎ–16–ಎಂ–2136 ಹಾಗೂ ಎಂಹೆಚ್–05–ಎ–675 ಎಂದು ಮುದ್ರಿತವಾಗಿರುತ್ತದೆ. ಕಾರಿನ ಚಾಸ್ಸಿ ಸಂಖ್ಯೆ:218131 ಆಗಿರುತ್ತದೆ.

ಸೂಕ್ತ ರಹದಾರಿ ಇಲ್ಲದೇ ಶ್ರೀಗಂಧವನ್ನು ಸಾಗಣೆ ಮಾಡುವುದು ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 80, 84, 87 ಮತ್ತು ಕರ್ನಾಟಕ ಅರಣ್ಯ ನಿಯಮ 1969ರ ನಿಯಮ 144, 154, ರ ಉಲ್ಲಂಘನೆಯಾಗಿರುತ್ತದೆ. ಆದುದರಿಂದ ಅರಣ್ಯ ಅಪರಾಧ ಮೊಕದ್ದಮೆಯನ್ನು ದಾಖಲಿಸಿರುತ್ತಾರೆ. ಬಂಧಿಸಲಾದ ಇಬ್ಬರು ಆರೋಪಿಗಳನ್ನು ಮಾನ್ಯ ಜೆ.ಎಂ.ಎಫ್.ಸಿ ನ್ಯಾಯಾಲಯ, ನೆಲಮಂಗಲ, ಬೆಂಗಳೂರು ಗ್ರಾಮಾಂತರ ಜಿಲ್ಲೆ ರಲ್ಲಿ ಹಾಜರುಪಡಿಸಿ ನಂತರ ಆರೋಪಿಗಳನ್ನು ನ್ಯಾಯಂಗ ಬಂಧನಕ್ಕೆ ಒಳಪಡಿಸಲಾಗಿರುತ್ತದೆ. ಅಮಾನತ್ತುಪಡಿಸಿಕೊಂಡ ಸ್ವತ್ತನ್ನು ಅಧಿಕೃತ ಅಧಿಕಾರಿ

ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಸಂಚಾರಿ ದಳ, ಬೆಂಗಳೂರು ರವರ ಸಮಕ್ಷಮ ಹಾಜರುಪಡಿಸಿರುತ್ತಾರೆ. ಜಪ್ತು ಮಾಡಲಾದ ವಾಹನ ಮತ್ತು ಮುದ್ದೆಮಾಲನ್ನು ಸುರಕ್ಷತೆಗಾಗಿ ಅರಣ್ಯ ಸಂಚಾರಿ ದಳದ ದಾಸ್ತಾನು ಮಳಿಗೆಯಲ್ಲಿ ಇಡಲಾಗಿರುತ್ತದೆ.

ಪ್ರಕರಣವನ್ನು ತನಿಖೆ ನಡೆಸಿದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಅಮಾನತ್ತುಪಡಿಸಿಕೊಂಡಿರುವ ಮಾರುತಿ 800 ಬಿಳಿ ಬಣ್ಣದ ಕಾರು ಸಂಖ್ಯೆ:ಕೆಎ–18–ಎಂ–1821 ಹಾಗೂ ಅದರಲ್ಲಿದ್ದ 44 ಕೆ.ಜಿ ಶ್ರೀಗಂಧವನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಕ್ರಮ ಜರುಗಿಸುವಂತೆ ಕೋರಿರುತ್ತಾರೆ.

ವಾಹನದ ಮಾಲೀಕತ್ವದ ಬಗ್ಗೆ ಮಾಹಿತಿ ಪಡೆಯಲು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಚಿಕ್ಕಮಗಳೂರು ಮತ್ತು ರೀಜನಲ್ ಟ್ರಾನ್ಸ್‌ಪೋರ್ಟ್ ಆಫಿಸರ್, ಕಲ್ಯಾಣ್, ಬಾಂಬೆ ಇವರಿಗೆ ಪತ್ರ ವ್ಯವಹರಿಸಲಾಗಿದೆ. ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಂದ ಯಾವುದೇ ಮಾಹಿತಿ ಲಭ್ಯವಿಲ್ಲದ ಕಾರಣ, ವಾಹನದ ವಿವರಗಳನ್ನು ಮುದ್ರಿಸಿ ಕರ್ನಾಟಕ ರಾಜ್ಯಪತ್ರ ದಿನಾಂಕ:26–08–2004 ಹಾಗೂ 17–11–2011ರಲ್ಲಿ ಪ್ರಕಟಣೆಯನ್ನು ಹೊರಡಿಸಲಾಗಿತ್ತು. ಹೊಸ ದಿಗಂತ ದಿನಪತ್ರಿಕೆಯಲ್ಲಿ ದಿನಾಂಕ:14–08–2011ರಲ್ಲಿ ವಾಹನದ ಬಗ್ಗೆ ಜಾಹಿರಾತನ್ನು ನೀಡಿ, ವಾಹನದ ಮಾಲೀಕರು/ವಾರಸುದಾರರು 30 ದಿನಗಳ ಒಳಗಾಗಿ ಸೂಕ್ತ ದಾಖಲೆಗಳೊಂದಿಗೆ ತಮ್ಮ ಆಕ್ಷೇಪಣೆಗಳನ್ನು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು ರವರ ಸಮಕ್ಷಮ ಸಲ್ಲಿಸಲು ಸೂಚಿಸಲಾಗಿತ್ತು. ಪ್ರಕಟಣೆಯ ಅವಧಿ ಪೂರ್ಣಗೊಂಡ ಬಳಿಕ ವಾಹನದ ಮಾಲೀಕತ್ವವನ್ನು ಯಾರೂ ಸಹ ವಹಿಸಿಕೊಂಡಿರುವುದಿಲ್ಲ ಮತ್ತು ಪ್ರಾಧಿಕಾರದ ಮುಂದೆ ಆಕ್ಷೇಪಣೆಗಳನ್ನು ಸಲ್ಲಿಸಿರುವುದಿಲ್ಲ.

ಪ್ರಕರಣಕ್ಕೆ ಸಂಬಂಧಿಸಿದ ಸರ್ಕಾರಿ ಪರ ಸಾಕ್ಷಿಗಳಾದ ಶ್ರೀ.ವಿ.ಕೃಷ್ಣಮೂರ್ತಿ ಬಿನ್ ಲೇಟ್.ಶ್ರೀ.ಎ.ವೆಂಕಟಮುನಿಯಪ್ಪ, ಉಪ ಅರಣ್ಯ ಸಂರಕ್ಷಣಾಧಿಕಾರಿ (ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ) ಹಾಗೂ ಶ್ರೀ.ಸದಾನಂದಪ್ಪ ಬಿನ್ ಲೇಟ್.ಶ್ರೀ.ಮುನಿಪೂಜೇಗೌಡ, ವಲಯ ಅರಣ್ಯಾಧಿಕಾರಿ (ಅಂದಿನ ವನಪಾಲಕ) ಇವರುಗಳ ಮುಖ್ಯ ವಿಚಾರಣೆಯನ್ನು ಶ್ರೀ.ರವಿಕುಮಾರ್, ಸಹಾಯಕ ಸರ್ಕಾರಿ ಅಭಿಯೋಜಕರು ದಿನಾಂಕ:16–09–2011ರಂದು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು ರವರ ಸಮಕ್ಷಮ ನಡೆಸಿರುತ್ತಾರೆ.

ಸರ್ಕಾರಿ ಪರ ಸಾಕ್ಷಿಗಳಾದ ಶ್ರೀ.ಎಂ.ರವಿರಾಜು, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಶ್ರೀ.ಕೆ.ಯು.ಪೋತಪ್ಪ, ವಲಯ ಅರಣ್ಯಾಧಿಕಾರಿ ಇವರು ಗೈರು ಹಾಜರಾದ ಕಾರಣ ವಿಚಾರಣೆಗೆ ಒಳಪಡಿಸಲಾಗಿರುವುದಿಲ್ಲ. ಹಾಜರಿದ್ದ ಸರ್ಕಾರಿ ಸಾಕ್ಷಿಗಳು ನೀಡಿರುವ ಹೇಳಿಕೆಗಳು ಪ್ರಕರಣದಲ್ಲಿ ವಾಹನ ಸಂಖ್ಯೆ:ಕೆಎ–18–ಎಂ–1821 ಒಳಗೊಂಡಿರುವ ಬಗ್ಗೆ ಸಾಕ್ಷಿ ನೀಡಿರುವುದರಿಂದ ಗೈರು ಹಾಜರಿರುವ ಸಾಕ್ಷಿಗಳ ವಿಚಾರಣೆ ಅವಶ್ಯಕತೆ ಇಲ್ಲವೆಂದು ಸರ್ಕಾರಿ ವಕೀಲರು ವಾದವನ್ನು ಮಂಡಿಸಿರುತ್ತಾರೆ.

ಪ್ರಕರಣದ ಬಗ್ಗೆ ಸರ್ಕಾರಿ ವಕೀಲರು ಮಂಡಿಸಿದ ವಾದ ಮತ್ತು ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಲಾಯಿತು. ಪ್ರತಿವಾದಿಗಳು ಹಾಜರಿರದ ಕಾರಣ, ಅವರ ವಿಳಾಸ ಪತ್ತೆಯಾಗದ ಕಾರಣ, ನನ್ನ ಎದುರಿನಲ್ಲಿ ಹಾಜರುಪಡಿಸಿರುವ ದಾಖಲೆಗಳ ಆದಾರದ ಮೇಲೆ ತೀರ್ಮಾನವನ್ನು ಕೈಗೊಳ್ಳಬೇಕಾಗಿರುತ್ತದೆ. ತೀರ್ಮಾನವನ್ನು ಕೈಗೊಳ್ಳಲು ಈ ಕೆಳಕಂಡ ಅಂಶಗಳನ್ನು ಪರಿಗಣಿಸಬೇಕಾಗಿದೆ.

1. ವಾಹನ ಸಂಖ್ಯೆ:ಕೆಎ–18–ಎಂ–1821 ಕರ್ನಾಟಕ ಅರಣ್ಯ ಕಾಯ್ದೆ 1963 ಮತ್ತು ನಿಯಮ 1969 ಗಳ ಉಲ್ಲಂಘನೆ ಮಾಡಿ ಅಕ್ರಮವಾಗಿ ಶ್ರೀಗಂಧದ ಸಾಗಣೆಯಲ್ಲಿ ಒಳಗೊಂಡಿರುವುದೇ?
2. ಸದರಿ ಪ್ರಕರಣದಲ್ಲಿ ವಾಹನ ಸಂಖ್ಯೆ:ಕೆಎ–18–ಎಂ–1821 ಅನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ?
3. ಮೇಲಿನ ಅಂಶಗಳಿಗೆ ಅನುಗುಣವಾಗಿ ಯಾವ ಆದೇಶ?

ಮೇಲಿನ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆ ಇರುತ್ತದೆ.

1. ಮೊದಲನೇ ಅಂಶಕ್ಕೆ ನನ್ನ ಉತ್ತರ ಅಹುದು ಎಂಬುದಾಗಿರುತ್ತದೆ.
2. ಎರಡನೇ ಅಂಶಕ್ಕೆ ನನ್ನ ಉತ್ತರ ಅಹುದು ಎಂಬುದಾಗಿರುತ್ತದೆ.
3. ಅಂತಿಮ ಆದೇಶವನ್ನು ಈ ಕೆಳಕಂಡ ಕಾರಣಗಳಿಗೆ ನೀಡಲಾಗಿದೆ.

ದಿನಾಂಕ:02–02–2001ರಂದು ರಾತ್ರಿ 10.30ರ ಸಮಯದಲ್ಲಿ ಅರಣ್ಯ ಸಂಚಾರಿ ದಳದ ಸಿಬ್ಬಂದಿ ಗಸ್ತು ಕಾರ್ಯಚರಣೆಯಲ್ಲಿ ನಿರ್ವಹಿಸುತ್ತಿದ್ದಾಗ ಮಾರುತಿ 800 ನೊಂದಣಿ ಸಂಖ್ಯೆ:ಕೆಎ–18–ಎಂ–1821 ಕಾರಿನಲ್ಲಿ 44 ಕೆ.ಜಿ ಶ್ರೀಗಂಧವನ್ನು ಅಕ್ರಮವಾಗಿ ಸಾಗಣೆ ಮಾಡುತ್ತಿರುವುದು ಅರಣ್ಯ ಕಾಯ್ದೆಯ ಉಲ್ಲಂಘನೆಯಾಗಿರುತ್ತದೆ. ಶ್ರೀಗಂಧವನ್ನು ಸಾಗಣೆ ಮಾಡಲು ಇರಬೇಕಾದ ರಹದಾರಿ ಮತ್ತು ಸಂಬಂಧಪಟ್ಟ ದಾಖಲೆಗಳು ವಾಹನದಲ್ಲಿ ದೊರಕದೇ ಇರುವುದರಿಂದ ಅರಣ್ಯ ಮೊಕದ್ದಮೆ ದಾಖಲಾಗಿದ್ದು, ಅರಣ್ಯ ಸಿಬ್ಬಂದಿಯು ದಾಖಲಿಸಿರುವ ಮೊಕದ್ದಮೆಯು ಅರಣ್ಯ ಕಾಯ್ದೆಯ ವ್ಯಾಪ್ತಿಯಲ್ಲಿ ಸರಿ ಇರುತ್ತದೆ. ಆರೋಪಿಗಳ ಹೇಳಿಕೆ ಪ್ರಕಾರ ಶ್ರೀಗಂಧವನ್ನು ಅಕ್ರಮವಾಗಿ ತಡಿತಲೆ ಮಾಡಿ ಸಂಗ್ರಹಿಸಿ ಸಾಗಿಸುತ್ತಿರುವುದು ಸ್ಪಷ್ಟವಾಗಿರುತ್ತದೆ. ವಾಹನ ಮಾಲೀಕರ ಮಾಹಿತಿಯನ್ನು ಪಡೆಯಲು ಸಾರಿಗೆ ಅಧಿಕಾರಿಗಳನ್ನು ಸಂಪರ್ಕಿಸಲಾಗಿರುತ್ತದೆ, ಆದರೆ ಮಾಲೀಕರ ಮಾಹಿತಿ ಲಭ್ಯವಾಗಿರುವುದಿಲ್ಲ. ಆದುದರಿಂದ ಮಾಲೀಕರಿಗೆ ಅರಣ್ಯ ಕಾಯ್ದೆಯ ಸೆಕ್ಷನ್ 71 ಬಿ ಪ್ರಕಾರ ನೋಟೀಸನ್ನು ಜಾರಿ ಮಾಡಲು ಸಾಧ್ಯವಾಗಿರುವುದಿಲ್ಲ.

ಕರ್ನಾಟಕ ರಾಜ್ಯಪತ್ರ ದಿನಾಂಕ:26–08–2004 ಹಾಗೂ 17–11–2011ರಲ್ಲಿ ಪ್ರಕಟಣೆಯನ್ನು ಹೊರಡಿಸಲಾಗಿತ್ತು. ಹೊಸ ದಿಗಂತ ದಿನಪತ್ರಿಕೆಯಲ್ಲಿ ದಿನಾಂಕ:14–08–2011ರಲ್ಲಿ ವಾಹನದ ಬಗ್ಗೆ ಜಾಹಿರಾತನ್ನು ನೀಡಿ, ವಾಹನದ ಮಾಲೀಕರು/ವಾರಸುದಾರರು 30 ದಿನಗಳ ಒಳಗಾಗಿ ಸೂಕ್ತ ದಾಖಲೆಗಳೊಂದಿಗೆ ತಮ್ಮ ಆಕ್ಷೇಪಣೆಗಳನ್ನು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು ರವರ ಸಮಕ್ಷಮ ಸಲ್ಲಿಸಲು ಸೂಚಿಸಲಾಗಿತ್ತು. ಪ್ರಕಟಣೆಯ ಅವಧಿ ಪೂರ್ಣಗೊಂಡ ಬಳಿಕ ವಾಹನದ ಮಾಲೀಕತ್ವವನ್ನು ಯಾರೂ ಸಹ ವಹಿಸಿಕೊಂಡಿರುವುದಿಲ್ಲ ಮತ್ತು ಪ್ರಾಧಿಕಾರದ ಮುಂದೆ ಆಕ್ಷೇಪಣೆಗಳನ್ನು ಸಲ್ಲಿಸಿರುವುದಿಲ್ಲ.

ಸರ್ಕಾರಿ ಪರ ಸಾಕ್ಷಿಗಳು ಸಹ ಸದರಿ ವಾಹನವು ಅಕ್ರಮವಾಗಿ ಶ್ರೀಗಂಧವನ್ನು ಸಾಗಣೆ ಮಾಡುತ್ತಿದ್ದದನ್ನು ವಿಚಾರಣಾ ಸಮಯದಲ್ಲಿ ಹೇಳಿಕೆ ನೀಡಿರುತ್ತಾರೆ. ಆದುದರಿಂದ ಸದರಿ ವಾಹನವು ಕರ್ನಾಟಕ ಅರಣ್ಯ ಕಾಯ್ದೆ 1963 ಹಾಗೂ ನಿಯಮ 1969ರ ಉಲ್ಲಂಘನೆ ಮಾಡಿರುವುದು ಖಾತರಿಯಾಗಿರುತ್ತದೆ.

ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71ಎ ಮೇರೆಗೆ ಅರಣ್ಯ ಮೊಕದ್ದಮೆಯಲ್ಲಿ ಒಳಗೊಂಡ ವಾಹನ ಮತ್ತು ಶ್ರೀಗಂಧವನ್ನು ಅಧಿಕೃತ ಅಧಿಕಾರಿಯ ಮುಂದೆ ಹಾಜರುಪಡಿಸಿರುವುದರಿಂದ ಅಂತಹ ವಾಹನವನ್ನು ಮತ್ತು ಸರ್ಕಾರದ ಸ್ವತ್ತನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಅವಕಾಶವಿರುವುದರಿಂದ ಸದರಿ ವಾಹನವನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುತ್ತದೆ.

ಆದೇಶ

ನಾನು ಕೆ.ಬಿ.ಮಂಜುನಾಥ, ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71ಎ, ಇ, ಎಫ್ ಮತ್ತು ಜಿ ಗೆ ಒಳಪಟ್ಟು ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಅರಣ್ಯ ಅಪರಾಧ ಮೊಕದ್ದಮೆ ಸಂಖ್ಯೆ:262/2000–01ರಲ್ಲಿ ಅಮಾನತ್ತುಪಡಿಸಿಕೊಂಡಿರುವ 44 ಕೆ.ಜಿ ಶ್ರೀಗಂಧದ ತುಂಡುಗಳು ಹಾಗೂ ಮಾರುತಿ 800 ನೊಂದಣಿ ಸಂಖ್ಯೆ:ಕೆಎ–18–ಎಂ–1821 ಹಾಗೂ ಕೆಎ–16–ಎಂ–2136, ಎಂ.ಹೆಚ್–05–ಎ–6759 ನೊಂದಣಿ ಸಂಖ್ಯೆಗಳುಳ್ಳ ವಾಹನವನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಈ ಮೂಲಕ ಆದೇಶಿಸುತ್ತೇನೆ.

ಈ ಆದೇಶವನ್ನು ಬೆರಳಚ್ಚುಗಾರರಿಗೆ ಉತ್ತಲೇಖನ ಕೊಟ್ಟಿದ್ದು, ಅವರು ಬೆರಳಚ್ಚಿಸಿದ ನಂತರ ತಿದ್ದುಪಡಿ ಮಾಡಿ ಈ ದಿನ ದಿನಾಂಕ:20–12–2011ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

ಈ ಆದೇಶವು ರಾಜ್ಯಪತ್ರದಲ್ಲಿ ಪ್ರಕಟಗೊಂಡ 30 ದಿವಸಗಳ ನಂತರ ಜಾರಿಗೆ ಬರುತ್ತದೆ.

ಕೆ.ಬಿ.ಮಂಜುನಾಥ,
ಅಧಿಕೃತ ಅಧಿಕಾರಿ ಹಾಗೂ
ಉಪ ಅರಣ್ಯ ಸಂರಕ್ಷಣಾಧಿಕಾರಿ,
ಅರಣ್ಯ ಸಂಚಾರಿ ದಳ, ಬೆಂಗಳೂರು.

ಪಿ.ಆರ್. 1408

ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಕಲ್ಯಾಣ ಮತ್ತು ಅಲ್ಪಸಂಖ್ಯಾತರ ಇಲಾಖೆ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು–ಇವರ ನಡವಳಿಗಳು

ವಿಷಯ: ಶ್ರೀ ಗೋಪಾಲ ದೇವಾಡಿಗ, ಅಡುಗೆಯವರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಮಣಿನಾಲ್ಕೂರು, ಬಂಟ್ವಾಳ ನಿಯೋಜನೆ ಮೇರೆಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಅರಂತೋಡು, ಸುಳ್ಯ, ದಕ್ಷಿಣ ಕನ್ನಡ ಜಿಲ್ಲೆ–ಇವರನ್ನು ಸೇವೆಯಿಂದ ವಜಾ ಮಾಡುವ ಕುರಿತು ಅಂತಿಮ ಆದೇಶ.

ಉಲ್ಲೇಖ:

1. ಕಾರ್ಯನಿರ್ವಾಹಕ ಅಧಿಕಾರಿ, ತಾಲೂಕು ಪಂಚಾಯತ್, ಬಂಟ್ವಾಳ–ಇವರ ಕಛೇರಿ ಕಾರಣ ಕೇಳಿಕೆ ನೋಟಿಸು ಸಂಖ್ಯೆ:ತಾಪಬಂ:ಬಿಸಿಎಂ: ಸಿಬ್ಬಂದಿ: ಸಿಆರ್–9/09–10, ದಿನಾಂಕ:01–04–2010
2. ಪ್ರಭಾರ ವಿಸ್ತರಣಾಧಿಕಾರಿ, ತಾಲೂಕು ಪಂಚಾಯತ್, ಬಂಟ್ವಾಳ–ಇವರ ವರದಿ ದಿನಾಂಕ:05–03–2010
3. ಕಾರ್ಯನಿರ್ವಾಹಕ ಅಧಿಕಾರಿ, ತಾಲೂಕು ಪಂಚಾಯತ್, ಬಂಟ್ವಾಳ–ಇವರ ಕಛೇರಿ ಕಾರಣ ಕೇಳಿಕೆ ನೋಟಿಸು ಸಂಖ್ಯೆ:ತಾಪಬಂ:ಬಿಸಿಎಂ:ಸಿಬ್ಬಂದಿ:ಸಿಆರ್–26/09–10/673, ದಿನಾಂಕ:03–03–2010
4. ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು–ಇವರ ಕಛೇರಿ ಕಾರಣ ಕೇಳಿಕೆ ನೋಟಿಸು ಸಂಖ್ಯೆ:ಬಿಸಿಎಂ/ವಿನಿ/ಸಿಬ್ಬಂದಿ/ಸಿಆರ್–78/2004–05, ದಿನಾಂಕ:28–08–2010

5. ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು–ಇವರ ಕಛೇರಿ ಪತ್ರಿಕಾ ಪ್ರಕಟಣೆ ಸಂಖ್ಯೆ:ಬಿಸಿಎಂ/ವಿನಿ/ಸಿಬ್ಬಂದಿ/ಸಿಆರ್–78/2004–05, ದಿನಾಂಕ:04–12–2010

6. ಪತ್ರಿಕಾ ಪ್ರಕಟಣೆ, ವಿಜಯ ಕರ್ನಾಟಕ, ಕನ್ನಡ ದೈನಿಕ, ದಿನಾಂಕ: 18–01–2011

7. ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಕಲ್ಯಾಣ ಮತ್ತು ಅಲ್ಪಸಂಖ್ಯಾತರ ಇಲಾಖೆ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು–ಇವರ ಕಛೇರಿ ತಿಳುವಳಿಕೆ ಪತ್ರ ಸಂಖ್ಯೆ:ಬಿಸಿಎಂ/ವಿನಿ/ಸಿಬ್ಬಂದಿ/ಸಿಆರ್–78/04–05, ದಿನಾಂಕ: 03–05–2011

8. ಪ್ರಭಾರ ವಿಸ್ತರಣಾಧಿಕಾರಿ, ತಾಲೂಕು ಪಂಚಾಯತ್, ಬಂಟ್ವಾಳ–ಇವರ ವರದಿ ದಿನಾಂಕ:07–04–2011

ಪ್ರಸ್ತಾವನೆ:

ಶ್ರೀ ಗೋಪಾಲ ದೇವಾಡಿಗ, ಅಡುಗೆಯವರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಮಣಿನಾಲ್ಕೂರು, ಬಂಟ್ವಾಳ ನಿಯೋಜನೆ ಮೇರೆಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಅರಂತೋಡು, ಸುಳ್ಯ, ದಕ್ಷಿಣ ಕನ್ನಡ ಜಿಲ್ಲೆ–ಇವರು ದಿನಾಂಕ:07–02–2010 ರಿಂದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಅರಂತೋಡು, ಸುಳ್ಯ–ಇಲ್ಲಿಯ ಅಡುಗೆಯವರ ಹುದ್ದೆಯ ಕರ್ತವ್ಯಕ್ಕೆ ಅನಧಿಕೃತ ಗೈರುಹಾಜರಾಗಿದ್ದು, ಇವರ ಅನಧಿಕೃತ ಗೈರುಹಾಜರಿ ಕುರಿತು, ಉಲ್ಲೇಖ(1)ರಲ್ಲಿ, ಕಾರ್ಯನಿರ್ವಾಹಕ ಅಧಿಕಾರಿ, ತಾಲೂಕು ಪಂಚಾಯತ್, ಬಂಟ್ವಾಳ–ಇವರ ಕಛೇರಿ ಕಾರಣ ಕೇಳಿಕೆ ನೋಟಿಸನ್ನು ನೌಕರರಿಗೆ ಜ್ಯಾರಿಗೊಳಿಸಲಾಗಿತ್ತು ಹಾಗೂ ಸದರಿ ನೋಟಿಸಿನ ಪ್ರತಿಯನ್ನು ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು–ಇವರಿಗೆ ಮುಂದಿನ ಸೂಕ್ತಕ್ರಮಕ್ಕಾಗಿ ಕಳುಹಿಸಿಕೊಡಲಾಗಿತ್ತು. ಅದರಂತೆ, ಉಲ್ಲೇಖ(1), ಉಲ್ಲೇಖ(2) ಮತ್ತು ಉಲ್ಲೇಖ(3)ರ ನೋಟಿಸು/ವರದಿಗಳ ಆಧಾರದ ಮೇಲೆ, ಉಲ್ಲೇಖ(4)ರಲ್ಲಿ, ಈ ನೌಕರರ ಅನಧಿಕೃತ ಗೈರುಹಾಜರಿ ಬಗ್ಗೆ, ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು–ಇವರ ಕಛೇರಿಯಿಂದ ಕಾರಣ ಕೇಳಿಕೆ ನೋಟಿಸನ್ನು ನೋಂದಾಯಿತ ಅಂಚೆ ಮುಖಾಂತರ ನೌಕರರಿಗೆ ಜ್ಯಾರಿ ಮಾಡಲಾಯಿತು. ಈ ಕಾರಣ ಕೇಳಿಕೆ ನೋಟಿಸನ್ನು ನೌಕರರು ಸ್ವೀಕರಿಸಿ, ಅಂಚೆ ಸ್ವೀಕೃತಿ ನೀಡಿರುತ್ತಾರೆ. ಆದರೆ, ಈ ಮೇಲಿನ ನೋಟಿಸುಗಳಿಗೆ ಸದ್ರಿ ನೌಕರರು ಯಾವುದೇ ಉತ್ತರ/ಸಮಜಾಯಿಷಿಕೆಯನ್ನು ನೀಡಿರುವುದಿಲ್ಲ ಮತ್ತು ತದನಂತರವೂ ಇವರು ಕರ್ತವ್ಯಕ್ಕೆ ಹಾಜರಾಗಿರುವುದಿಲ್ಲ. ಆದ ಕಾರಣ, ಕರ್ತವ್ಯಕ್ಕೆ ಹಾಜರಾಗುವಂತೆ ಸೂಚಿಸಿ ಉಲ್ಲೇಖ(5)ರಲ್ಲಿ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾಯಿತು. ಸದರಿ ಪ್ರಕಟಣೆಯು ಉಲ್ಲೇಖ(6)ರಲ್ಲಿ ಪ್ರಕಟಗೊಂಡಿರುತ್ತದೆ. ಆದರೂ ಇವರು ಕರ್ತವ್ಯಕ್ಕೆ ಹಾಜರಾಗಿರುವುದಿಲ್ಲ. ಮಾತ್ರವಲ್ಲದೆ, ಯಾವುದೇ ಉತ್ತರ/ಸಮಜಾಯಿಷಿಕೆಯನ್ನು ನೀಡಿರುವುದಿಲ್ಲ. ಇವರು ಅನಧೀಕೃತವಾಗಿ ಗೈರುಹಾಜರಿಯಲ್ಲಿಯೇ ಮುಂದುವರಿಯುವ ಮೂಲಕ ಮೇಲಾಧಿಕಾರಿಗಳ ಆದೇಶಗಳನ್ನು ನಿರಂತರವಾಗಿ ಉಲ್ಲಂಘಿಸಿದ್ದಾರೆ ಹಾಗೂ ನಿಲಯ ನಿರ್ವಹಣೆಗೆ ತೊಂದರೆಯನ್ನುಂಟುಮಾಡಿರುತ್ತಾರೆ. ಆದಕಾರಣ, ಇವರ ವಿರುದ್ಧ 1957 ರ ಕರ್ನಾಟಕ ಸರ್ಕಾರಿ ಸೇವೆ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳ ಉಪ–ಬಂಧಗಳಿಗನುಸಾರವಾಗಿ ನಿರ್ದಿಷ್ಟವಾದ ಮತ್ತು ಸ್ಪಷ್ಟವಾದ ದುರ್ನಡತೆಯ ವಿಷಯಗಳ ಆರೋಪ ಪಟ್ಟಿಯನ್ನೂ, ಪ್ರತಿಯೊಂದು ಆರೋಪ ವಿಷಯವನ್ನು ಸಮರ್ಥಿಸುವ ದುರ್ನಡತೆಯ ಆರೋಪಣೆಯ ವಿವರಣೆಯನ್ನೂ, ಆರೋಪ ವಿಷಯಗಳನ್ನು ಸಮರ್ಥಿಸುವ ದಸ್ತಾವೇಜುಗಳ ಮತ್ತು ಸಾಕ್ಷಿಗಳ ಪಟ್ಟಿಯನ್ನೂ ಅನುಕ್ರಮವಾಗಿ 1 ರಿಂದ 4 ರ ವರೆಗಿನ ಅನುಬಂಧಗಳಾಗಿ ತತ್ಸಂಬಂಧಿ ಪೂರಕ ದಾಖಲೆಗಳೊಂದಿಗೆ ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಕಲ್ಯಾಣ ಮತ್ತು ಅಲ್ಪಸಂಖ್ಯಾತರ ಇಲಾಖೆ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು–ಇವರ ಕಛೇರಿಯ ಉಲ್ಲೇಖ(7)ರ ತಿಳುವಳಿಕೆ ಪತ್ರದ ಲಗತ್ತಿನೊಂದಿಗೆ ನೋಂದಾಯಿತ ಅಂಚೆ ಮುಖಾಂತರ ನೌಕರರಿಗೆ ಕರ್ನಾಟಕ ನಾಗರೀಕ ಸೇವಾ(ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳು, 1957 ರ ನಿಯಮ 11(4)ರನ್ವಯ ಜ್ಯಾರಿ ಮಾಡಲಾಯಿತು ಹಾಗೂ ಈ ಬಗ್ಗೆ ಲಿಖಿತ ಹೇಳಿಕೆಗಳನ್ನೇನಾದರೂ ನೀಡ ಬಯಸಿದಲ್ಲಿ ಲಿಖಿತ ಹೇಳಿಕೆಯನ್ನು ನೀಡಲು ಈ ನೌಕರರಿಗೆ ಅವಕಾಶವನ್ನು ಕಲ್ಪಿಸಲಾಯಿತು. ಈ ತಿಳುವಳಿಗೆ ಪತ್ರ ಹಾಗೂ ಆರೋಪಣಾ ಪಟ್ಟಿಯನ್ನು ನೌಕರರು ಸ್ವೀಕರಿಸಿ, ಅಂಚೆ ಸ್ವೀಕೃತಿ ನೀಡಿರುತ್ತಾರೆ. ಆದರೆ, ನೌಕರರು ಈ ತಿಳುವಳಿಕೆ ಪತ್ರಕ್ಕೆ ಯಾವುದೇ ಉತ್ತರ ನೀಡಿರುವುದಿಲ್ಲ. ಮಾತ್ರವಲ್ಲದೆ ತದನಂತರವೂ ಈ ನೌಕರರು ಕರ್ತವ್ಯಕ್ಕೆ ಈವರೆಗೆ ಹಾಜರಾಗಿರುವುದಿಲ್ಲ.

ದಿನಾಂಕ: 07–02–2010 ರಿಂದ ಇವರ ನಿರಂತರ ಅನಧಿಕೃತ ಗೈರು ಹಾಜರಿ ಹಾಗೂ ಈ ಬಗ್ಗೆ ಕಛೇರಿಯಿಂದ ನೀಡಲಾದ ಯಾವುದೇ ನೋಟಿಸಿಗೆ ಪ್ರತಿಕ್ರಿಯೆ ನೀಡದಿರುವುದನ್ನು, ಕರ್ತವ್ಯಕ್ಕೆ ಹಾಜರಾಗುವಂತೆ ಸೂಚಿಸಿ ಜಿಲ್ಲಾ ಕಛೇರಿ ಹಾಗೂ ಅಧೀನ ಕಛೇರಿಗಳಿಂದ ಪದೇ ಪದೇ ನೀಡಲಾಗಿರುವ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳದೇ ಇರುವುದನ್ನು ಗಂಭೀರವಾಗಿ ಪರಿಗಣಿಸಿ, ಶ್ರೀ ಗೋಪಾಲ ದೇವಾಡಿಗ, ಅಡುಗೆಯವರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಮಣಿನಾಲ್ಕೂರು, ಬಂಟ್ವಾಳ ನಿಯೋಜನೆ ಮೇರೆಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಅರಂತೋಡು, ಸುಳ್ಯ, ದಕ್ಷಿಣ ಕನ್ನಡ ಜಿಲ್ಲೆ–ಇವರ ದಿನಾಂಕ: 07–02–2010 ರಿಂದ ಈ ಆದೇಶದ ದಿನಾಂಕದವರೆಗೆ ಅಂದರೆ ದಿನಾಂಕ: 19–07–2011 ರವರೆಗಿನ ನಿರಂತರ ಅನಧಿಕೃತ ಗೈರು ಹಾಜರಿಯ ಆರೋಪಕ್ಕೆ ಸಂಬಂಧಿಸಿದಂತೆ ಕರ್ನಾಟಕ ನಾಗರೀಕ ಸೇವಾ(ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳು, 1957 ರ ನಿಯಮ 11(20) ರನ್ವಯ, ನಿಲಯದ ಹಾಜರಾತಿ ವಹಿ, ವೇತನ ಬಡವಾಡೆ ವಹಿ, ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲೂಕು ಪಂಚಾಯತ್, ಬಂಟ್ವಾಳ,

ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲೂಕು ಪಂಚಾಯತ್, ಸುಳ್ಯ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ಪ್ರಭಾರ ವಿಸ್ತರಣಾಧಿಕಾರಿ, ತಾಲೂಕು ಪಂಚಾಯತ್, ಬಂಟ್ವಾಳ–ಇವರ ವರದಿಗಳನ್ನು ಹಾಗೂ ಲಭ್ಯವಿರುವ ಇನ್ನಿತರ ದಾಖಲೆಗಳು/ವಹಿಗಳನ್ನು ಪರಿಶೀಲಿಸಲಾಗಿ, ಈ ಕೆಳಕಂಡ ಅಂಶಗಳು ಶಿಸ್ತುಪ್ರಾಧಿಕಾರಿಯಾದ ನನ್ನ ಗಮನಕ್ಕೆ ಬಂದಿರುತ್ತದೆ:

ಆಪಾದಿತ ನೌಕರರು ದಿನಾಂಕ: 01–06–2010 ರಿಂದ ಈ ಆದೇಶದ ದಿನಾಂಕದವರೆಗೆ ಅಂದರೆ ದಿನಾಂಕ: 19–07–2011 ರವರೆಗೆ ಒಟ್ಟು 414 ದಿನಗಳು ಯಾವುದೇ ಮುನ್ಸೂಚನೆಯನ್ನು ನೀಡದೆ ಹಾಗೂ ಮೇಲಾಧಿಕಾರಿಗಳ ಪೂರ್ವಾನುಮತಿಯನ್ನು ಪಡೆಯದೆ ಕರ್ತವ್ಯಕ್ಕೆ ನಿರಂತರವಾಗಿ ಅನಧಿಕೃತ ಗೈರು ಹಾಜರಾಗಿರುವುದು; ಈ ಅವಧಿಯಲ್ಲಿ ಕರ್ತವ್ಯಕ್ಕೆ ಹಾಜರಾಗುವಂತೆ ಸೂಚಿಸಿ ಜಿಲ್ಲಾ ಕಛೇರಿ/ಅಧೀನ ಕಛೇರಿಗಳಿಂದ ನೀಡಿರುವ ಸೂಚನೆಗಳನ್ನು ನಿರಂತರವಾಗಿ ನಿರ್ಲಕ್ಷಿಸಿರುವುದು. ತನ್ಮೂಲಕ ಇವರು ಮೇಲಾಧಿಕಾರಿಗಳಿಗೆ ಅವಿಧೇಯತೆಯನ್ನು ತೋರಿರುವುದು. ಮಾತ್ರವಲ್ಲದೆ, ನಿಲಯದ ವಿದ್ಯಾರ್ಥಿಗಳಿಗೆ ಸಮಯಕ್ಕೆ ಸರಿಯಾಗಿ ಊಟೋಪಚಾರಗಳನ್ನು ನೀಡುವಂಥಹ ಗುರುತರವಾದ ಜವಾಬ್ದಾರಿಯನ್ನು ಹೊಂದಿರುವ ಅಡುಗೆಯವರಾದ ಶ್ರೀ ಗೋಪಾಲ ದೇವಾಡಿಗ–ಇವರು ಅನಧಿಕೃತ ಗೈರು ಹಾಜರಾಗುವ ಮೂಲಕ ನಿಲಯದ ನಿರ್ವಹಣೆಗೆ ತೊಂದರೆಯನ್ನುಂಟು ಮಾಡಿರುವುದು ತೀವ್ರತರವಾದ ದುರ್ನಡತೆಯಾಗಿರುತ್ತದೆ ಮತ್ತು ಇವರು ನಾಲ್ಕು ತಿಂಗಳಿಗೂ ಮೀರಿ ಕರ್ತವ್ಯಕ್ಕೆ ಅನಧಿಕೃತವಾಗಿ ಗೈರು ಹಾಜರಾಗಿರುವುದು ಇವರು ಕರ್ತವ್ಯದಲ್ಲಿ ಅನಾಸಕ್ತರಾಗಿರುವುದನ್ನು ತೋರಿಸುತ್ತದೆ ಹಾಗೂ ಕರ್ನಾಟಕ ನಾಗರೀಕ ಸೇವಾ ನಿಯಮಗಳು 1957 ರ ನಿಯಮ 108 ರ ಪ್ರಕಾರ ಸರ್ಕಾರಿ ಸೇವೆಯಿಂದ ವಜಾಮಾಡಬಹುದಾದ ಅಥವಾ ತೆಗೆದುಹಾಕಬಹುದಾದ ಪ್ರಕರಣವಾಗಿರುತ್ತದೆ.

ಆದ್ದರಿಂದ, ಈ ಪ್ರಕರಣದಲ್ಲಿ, ಶ್ರೀ ಗೋಪಾಲ ದೇವಾಡಿಗ, ಅಡುಗೆಯವರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಮಣಿನಾಲ್ಕೂರು, ಬಂಟ್ವಾಳ ನಿಯೋಜನೆ ಮೇರೆಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಅರಂತೋಡು, ಸುಳ್ಯ, ದಕ್ಷಿಣ ಕನ್ನಡ ಜಿಲ್ಲೆ–ಇವರು ದಿನಾಂಕ: 01–06–2010 ರಿಂದ ಈ ಆದೇಶದ ದಿನಾಂಕದವರೆಗೆ ಅಂದರೆ ದಿನಾಂಕ: 19–07–2011 ರವರೆಗೆ ಒಟ್ಟು 414 ದಿನಗಳು ಅಂದರೆ ನಾಲ್ಕು ತಿಂಗಳಿಗೂ ಹೆಚ್ಚಿನ ಅವಧಿಗೆ ಕರ್ತವ್ಯಕ್ಕೆ ಅನಧಿಕೃತವಾಗಿ ಗೈರು ಹಾಜರಾಗಿದ್ದು, ಆಪಾದಿತ ನೌಕರರ ಈ ಮೇಲಿನ ಅನಧಿಕೃತ ಗೈರು ಹಾಜರಾತಿ ಹಾಗೂ ದುರ್ನಡತೆ ಆರೋಪದ ಹಿನ್ನೆಲೆಯಲ್ಲಿ ಕರ್ನಾಟಕ ನಾಗರೀಕ ಸೇವಾ(ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳು 1957 ರ ನಿಯಮ–8(viii) ರ ಕಠಿಣ ದಂಡನೆಯನ್ನು ವಿಧಿಸಲು ನಿರ್ಧರಿಸಿದ್ದು, ಪ್ರಯುಕ್ತ ಈ ಕೆಳಕಂಡ ಆದೇಶ:

ಆದೇಶ

ಸಂಖ್ಯೆ: ಬಿಸಿಎಂ/ವಿನಿ/ಸಿಬ್ಬಂದಿ/ಸಿಆರ್–78/04–05, ದಿನಾಂಕ: 19–07–2011

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, ಕರ್ನಾಟಕ ನಾಗರೀಕ ಸೇವಾ(ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳು 1957 ರ ನಿಯಮ 11 ಮತ್ತು ನಿಯಮ 11(ಎ)ನ್ನು ಓದಿಕೊಂಡಂತೆ, ಅದೇ ನಿಯಮಗಳ ನಿಮಯ 9(I)(3)ರಲ್ಲಿ ನನಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು–ಆದ ನಾನು, ಶ್ರೀ ಗೋಪಾಲ ದೇವಾಡಿಗ, ಅಡುಗೆಯವರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಮಣಿನಾಲ್ಕೂರು, ಬಂಟ್ವಾಳ ನಿಯೋಜನೆ ಮೇರೆಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಅರಂತೋಡು, ಸುಳ್ಯ–ದಕ್ಷಿಣ ಕನ್ನಡ ಜಿಲ್ಲೆ–ಇವರನ್ನು ಕರ್ನಾಟಕ ನಾಗರೀಕ ಸೇವಾ ನಿಯಮಗಳು 1957 ರ ನಿಯಮ 108ರನ್ವಯ ತಕ್ಷಣದಿಂದ ಅನ್ವಯಿಸುವಂತೆ ಸೇವಾಯಿಂದ ವಜಾ ಮಾಡಿರುತ್ತೇನೆ.

ಸದರಿ ನೌಕರರ 01–06–2010 ರಿಂದ ಈ ಆದೇಶದ ದಿನಾಂಕದವರೆಗೆ ಅಂದರೆ ದಿನಾಂಕ:19–07–2011 ರವರೆಗೆ ಒಟ್ಟು 414 ದಿನಗಳವರೆಗಿನ ಅನಧಿಕೃತ ಗೈರು ಹಾಜರಿಯನ್ನು ಕರ್ನಾಟಕ ನಾಗರೀಕ ಸೇವಾ ನಿಯಮಗಳು 1957 ರ ನಿಯಮ 254 ರನ್ವಯ ಲೆಕ್ಕಕ್ಕಿಲ್ಲದ ಅವಧಿ (Dies-non service) ಎಂದು ಪರಿಗಣಿಸಿ ಆದೇಶಿಸಿದೆ.

ಜಿಲ್ಲಾ ಅಧಿಕಾರಿ,
ಹಿಂದುಳಿದ ವರ್ಗಗಳ ಕಲ್ಯಾಣ ಮತ್ತು ಅಲ್ಪಸಂಖ್ಯಾತರ ಇಲಾಖೆ,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು–4

ಪಿ.ಆರ್. 769

ಗಣಿ ಮತ್ತು ಭೂವಿಜ್ಞಾನ ಇಲಾಖೆ

ಜಂಟಿ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಉತ್ತರ ವಲಯ, ಬಳ್ಳಾರಿ.

ಸಂ:ಗಭೂಇ:ಜಂನಿಉ:ಅಧಿಸೂಚನೆ:2011–12, ದಿನಾಂಕ:11–11–2011

ದಾವಣಗೆರೆ ಜಿಲ್ಲೆ ದಾವಣಗೆರೆ, ಹರಪನಹಳ್ಳಿ ಮತ್ತು ಚನ್ನಗಿರಿ ತಾಲ್ಲೂಕು ಗ್ರಾಮಗಳಲ್ಲಿಯ ಕ.ಉ.ಖ.ನಿ 1994ರ ನಿಯಮ 8–ಎ ಅಡಿಯಲ್ಲಿ ಅಧಿಸೂಚನೆಗಾಗಿ ಉದ್ದೇಶಿಸಿದ ಕಲ್ಲು ಗಣಿ ಗುತ್ತಿಗೆ ಪ್ರದೇಶಗಳು.

ಈ ಕೆಳಕಂಡ ಪಟ್ಟಿಯಲ್ಲಿರುವ ದಾವಣಗೆರೆ ಜಿಲ್ಲೆ ದಾವಣಗೆರೆ, ಹರಪನಹಳ್ಳಿ ಮತ್ತು ಚನ್ನಗಿರಿ ತಾಲ್ಲೂಕಿನ ಗ್ರಾಮಗಳಲ್ಲಿಯ ಸರ್ಕಾರಿ ಜಮೀನಿನಲ್ಲಿ ಅನಿರ್ಧಿಷ್ಟ ಉಪ ಖನಿಜದ ಕಲ್ಲು ಗಣಿ ಗುತ್ತಿಗೆಯ ಕಟ್ಟಡ ಕಲ್ಲು ಪ್ರದೇಶದ ಮರು ಮಂಜೂರಾತಿಗಾಗಿ ಹಿರಿಯ ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ದಾವಣಗೆರೆ ಅವರು ಅಧಿಸೂಚನೆಗಾಗಿ ಸಲ್ಲಿಸಿದ ಪ್ರಸ್ತಾವನೆಯಂತೆ ಲಭ್ಯವಿರುತ್ತದೆ. (ಲಗತ್ತಾದ ವಿವರದಂತೆ)

ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಾವಳಿ 1994ರ ನಿಯಮ 8–ಎ ರ ಉಪ ನಿಯಮ (1)ರಂತೆ ಕರ್ನಾಟಕ ರಾಜ್ಯ ಪತ್ರದಲ್ಲಿ ಅಧಿಸೂಚನೆ ಹೊರಡಿಸಿದ ಮುವತ್ತು (30) ದಿನಗಳ ನಂತರ ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಾವಳಿ 1994ರ ನಿಯಮ 8, 1ರಂತೆ ಸದರಿ ಪ್ರದೇಶಕ್ಕೆ ಕಲ್ಲು ಗಣಿ ಗುತ್ತಿಗೆಗಾಗಿ ಅರ್ಜಿಯನ್ನು ಹಿರಿಯ ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ದಾವಣಗೆರೆ ಕಛೇರಿಯಲ್ಲಿ ಸ್ವೀಕರಿಸಲಾಗುವುದು. ಅಧಿಸೂಚನೆ ಜಾರಿಯಾದ ದಿನದಿಂದಲೇ 30 ದಿನಗಳನ್ನು ಲೆಕ್ಕ ಹಾಕಲಾಗುವುದು ಹಾಗೂ ನಿಯಮಗಳಲ್ಲಿ ಸೂಚಿಸಿದಂತೆ 30ನೇ ದಿವಸ ಸಾರ್ವತ್ರಿಕ ರಜಾದಿನವಾಗಿದ್ದಲ್ಲಿ ಮುಂದಿನ ಒಂದು ದಿನಕ್ಕೆ ಅವಧಿ ವಿಸ್ತರಣೆ ಅನ್ವಯವಾಗುತ್ತದೆ.

1) ಮುಕ್ತ ಕಂದಾಯ ಪ್ರದೇಶದ ಲಭ್ಯತೆಗೆ ಒಳಪಟ್ಟಂತೆ
2) ಕಂದಾಯ ಇಲಾಖೆಯ ನಿರಾಪೇಕ್ಷಣ ಪತ್ರಕ್ಕೆ ಒಳಪಟ್ಟಂತೆ
3) ಈ ಪ್ರದೇಶಕ್ಕಾಗಿ ಯಾವುದೇ ಗಣಿ ಗುತ್ತಿಗೆಗಳ ಅರ್ಜಿಗಳ ನಿರ್ಣಯಕ್ಕೆ ಒಳಪಟ್ಟಂತೆ
4) ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಾವಳಿ 1994ರ ನಿಯಮ 23(3)ಕ್ಕೆ ಒಳಪಟ್ಟಂತೆ
5) ಯಾವುದೇ ಮಾನ್ಯ ನ್ಯಾಯಲಯದ ಆದೇಶ ಅಥವಾ ನ್ಯಾಯಾಧೀಕರಣದ ಆದೇಶಕ್ಕೆ ಒಳಪಟ್ಟಂತೆಯೂ ಸಹ:

ಉದ್ದೇಶಿತ ಪ್ರದೇಶಕ್ಕೆ ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಾವಳಿ 1994ರ ನಿಯಮ 8–ಎ 3 ಕ್ಕೆ ಒಳಪಡುತ್ತದೆ. ಅದರನ್ವಯ ಹಿರಿಯ ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ದಾವಣಗೆರೆ ಅವರು ನಿಯಮಾವಳಿಯಂತೆ ಕ್ರಮ ಜರುಗಿಸಲು ಸ್ವತಂತ್ರರಾಗಿರುತ್ತಾರೆ. ಇಲಾಖೆಗೆ ಕಟ್ಟು ಬಾಕಿದಾರರು ಬಾಕಿದಾರರಾಗಿದ್ದರೆ ತಮ್ಮ ಬಾಕಿಯ ಬಗ್ಗೆ ಅರ್ಜಿಯೊಂದಿಗೆ "ಬೇಬಾಕಿ ಪ್ರಮಾಣ ಪತ್ರ" ಸಲ್ಲಿಸುವುದನ್ನು ಕಡ್ಡಾಯಗೊಳಿಸಿದೆ.

ಇದಕ್ಕೆ ನಿಗದಿಪಡಿಸಿದ ಅರ್ಜಿ ಪ್ರಪತ್ರ ಮತ್ತು ಅಧಿಸೂಚನೆ ನಕಾಶೆಗಳು ಹಿರಿಯ ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ದಾವಣಗೆರೆ ಇವರಲ್ಲಿ ಲಭ್ಯವಿದ್ದು ಅವನ್ನು ನಿಗದಿತ ಶುಲ್ಕ ಪಾವತಿಸಿ ಪಡೆಯಬಹುದಾಗಿದೆ ಹಾಗೂ ಅಧಿಸೂಚನೆಯಾದ ಪ್ರದೇಶದ ನಕ್ಷೆ ವಿವರಗಳನ್ನು ಅವಶ್ಯಕವೆನಿಸಿದಲ್ಲಿ ಸಂಬಂಧಪಟ್ಟ ಇಲಾಖಾ ಕಾರ್ಯಾಲಯದಿಂದ ಪಡೆಯಬಹುದಾಗಿದೆ. ಅಲ್ಲದೆ, ಅರ್ಜಿದಾರರು ತಾವೇ ಸ್ವತಃ ನಕ್ಷೆ ತಯಾರಿಸಿಯೂ ಸಹ ಅರ್ಜಿ ಸಲ್ಲಿಸಬಹುದಾಗಿದೆ. ಮೇಲಿನ ರೀತಿಯಲ್ಲಿ ಸಲ್ಲಿಸಿದ ಅರ್ಜಿಗಳನ್ನು ಪರಿಗಣಿಸಲ್ಪಡುತ್ತದೆ.

ಆಸಕ್ತ ಸಾರ್ವಜನಿಕರು ಅಧಿಸೂಚಿತ ಪ್ರದೇಶಗಳನ್ನು ಖುದ್ದಾಗಿ ಪರಿಶೀಲಿಸಿ, ಖನಿಜ ಲಭ್ಯತೆ, ವಿಸ್ತೀರ್ಣ, ರಸ್ತೆ, ಮತ್ತಿತರ ಅಂಶಗಳ ಬಗ್ಗೆ ಪೂರ್ಣ ಮನವರಿಕೆ ಮಾಡಿಕೊಂಡ ನಂತರ ಕಲ್ಲು ಗಣಿ ಗುತ್ತಿಗೆ ಅರ್ಜಿಯನ್ನು ಹಿರಿಯ ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ದಾವಣಗೆರೆ ಕಛೇರಿ ಇವರಲ್ಲಿ ದಾಖಲು ಮಾಡಲು ಈ ಮೂಲಕ ತಿಳುವಳಿಕೆ ನೀಡಿದೆ ಮತ್ತು ಕಲ್ಲು ಗಣಿ ಗುತ್ತಿಗೆಯ ಮಂಜೂರಾತಿಯು ಸಂಬಂಧಿತ ಕಂದಾಯ ಇಲಾಖೆಯ ಪೂರ್ವಾನುಮತಿ ಮೇರೆಗೆ ಹಾಗೂ ಪ್ರದೇಶದ ಲಭ್ಯತೆಯನ್ನಾಧರಿಸಿ ನೀಡಲಾಗುವುದೆಂದು ತಿಳಿಯಪಡಿಸಿದೆ.

ಹಿರಿಯ ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ದಾವಣಗೆರೆ ಅವರು ಕಛೇರಿಯ ಸೂಚನಾ ಫಲಕದಲ್ಲಿ ಸಾರ್ವಜನಿಕರ ಅನುಕೂಲಕ್ಕೆ ಪ್ರಕಟಣೆ ಜಾಹೀರುಗೊಳಿಸುವುದು.

ಜಂಟಿ ನಿರ್ದೇಶಕರು,
ಗಣಿ ಮತ್ತು ಭೂವಿಜ್ಞಾನ ಇಲಾಖೆ,
ಉತ್ತರ ವಲಯ, ಬಳ್ಳಾರಿ.

ದಾವಣಗೆರೆ ಜಿಲ್ಲೆ ದಾವಣಗೆರೆ, ಹರಪನಹಳ್ಳಿ ಮತ್ತು ಚನ್ನಗಿರಿ ತಾಲ್ಲೂಕುಗಳ ಕೆ.ಎಂ.ಎಂ.ಸಿ.ಆರ್ 1994ರ ನಿಯಮ 8(ಎ)ರ ಅಡಿಯಲ್ಲಿ ಅಧಿಸೂಚನೆಗಾಗಿ ಉದ್ದೇಶಿಸಲಾದ ಪ್ರದೇಶಗಳ ವಿವರ

ಕ್ರ. ಸಂ	ಬ್ಲಾಕ್ ನಂ	ಸರ್ವೆ ನಂ	ವಿಸ್ತೀರ್ಣ (ಎಕರೆ)	ಗ್ರಾಮ	ರದ್ದುಪಡಿಸಲಾದ ಗುತ್ತಿಗೆ ಪ್ರದೇಶದ ವಿವರಗಳು	ಚಕ್ಕುಬಂದಿ
1	2	3	4	5	6	7
ದಾವಣಗೆರೆ ತಾಲ್ಲೂಕು						
1	1	24	1.00	ಕಬ್ಬೂರು	ಶ್ರೀ ಮತಿ ಗುಂಡಮ್ಮ ಕಬ್ಬೂರು ಗ್ರಾಮ, ರಾಮಗೊಂಡನಹಳ್ಳಿ ಅಂಚೆ, ದಾವಣಗೆರೆ ತಾ & ಜಿ, ಕ.ಗ.ಗು.ಸಂ:378	ಉ: ಸರ್ವೆ ನಂ:19 ದ: ಸ.ನಂ:24ರ ಉಳಿದ ಭಾಗ ಪೂ: ಸ.ನಂ:24ರ ಉಳಿದ ಭಾಗ ಪ: ಸ.ನಂ:24ರ ಉಳಿದ ಭಾಗ
ಚನ್ನಗಿರಿ ತಾಲ್ಲೂಕು						
1	01	60,71	0.20	ದೊಡ್ಡಬ್ಬಿ ಗೆರೆ	ಶ್ರೀ ಕಂದಸ್ವಾಮಿ ನಲ್ಲ ಮುತ್ತು, ಕಸ್ತೂರಿಬಾಯಿ ಗ್ರಾಮ, ದೊಡ್ಡಬ್ಬಿಗೆರೆ, ಚನ್ನಗಿರಿ ತಾಲ್ಲೂಕು, ದಾವಣಗೆರೆ, ಕ.ಗ.ಗು.ಸಂ:527	ಉ: ಸರ್ವೆ ನಂ:60ರ ಉಳಿದ ಭಾಗ ದ: ಸರ್ವೆ ನಂ: 71ರ ಉಳಿದ ಭಾಗ ಪೂ: 60 ಮತ್ತು 71ರ ಉಳಿದ ಭಾಗ ಪ: 60 ಮತ್ತು 71ರ ಉಳಿದ ಭಾಗ

1	2	3	4	5	6	7
2	02	59	0.20	ದೊಡ್ಡಬ್ಬಿ ಗೆರೆ	ಶ್ರೀ ಪಿ.ಕೆಂಚನಾಯ್ಕ ಬಿನ್ ಪರ್ಸಾನಾಯ್ಕ, ಗದ್ದಿಗೆ ಮಠ ರಸ್ತೆ, ಚನ್ನಗಿರಿ ಟೌನ್, ದಾವಣಗೆರೆ ಕ.ಗ.ಗು.ಸಂ:478	ಉ: ಸರ್ವೆ ನಂ:59ರ ಉಳಿದ ಭಾಗ ದ: ಸರ್ವೆ ನಂ:59ರ ಉಳಿದ ಭಾಗ ಪೂ: ಸರ್ವೆ ನಂ:59ರ ಉಳಿದ ಭಾಗ ಪ: ಸರ್ವೆ ನಂ:59ರ ಉಳಿದ ಭಾಗ
03	03	60	0.20	ದೊಡ್ಡಬ್ಬಿಗೆರೆ	ಶ್ರೀ ಕೆ.ಗಂಗಪ್ಪ ಬಿನ್ ಮಾರಪ್ಪ, ಕಾಳಘಟ್ಟ, ವಡ್ಡರಹಟ್ಟಿ ಗ್ರಾಮ, ಕಾಳಘಟ್ಟ ಅಂಚೆ, ಹೊಳಲ್ಕೆರೆ, ಚಿತ್ರದುರ್ಗ ಜಿಲ್ಲೆ, ದಾವಣಗೆರೆ ಕ.ಗ.ಗು.ಅ.ಸಂ:98/08–09	ಉ: ಸರ್ವೆ ನಂ:60ರ ಉಳಿದ ಭಾಗ ದ: ಸರ್ವೆ ನಂ:60ರ ಉಳಿದ ಭಾಗ ಪೂ: ಸರ್ವೆ ನಂ:60ರ ಉಳಿದ ಭಾಗ ಪ: ಸರ್ವೆ ನಂ:60ರ ಉಳಿದ ಭಾಗ
04	04	03	1.00	ಕೊಳಕೆರೆ	ಶ್ರೀ ಹೆಚ್.ಆರ್.ಶಶಿಧರ್ ನಾಯ್ಕ, ಬಿನ್ ಹೆಚ್.ರಾಮಚಂದ್ರ ನಾಯ್ಕ್,ಕೋರ್ಟ್ ಹತ್ತಿರ, ಚನ್ನಗಿರಿ ಟೌನ್, ಶಿವಮೊಗ್ಗ ಜಿಲ್ಲೆ	ಉ:ಸರ್ವೆ ನಂ:03ರ ಉಳಿದ ಭಾಗ ದ:ಸರ್ವೆ ನಂ:03ರ ಉಳಿದ ಭಾಗ ಪೂ:ಸರ್ವೆ ನಂ:03ರ ಉಳಿದ ಭಾಗ ಪ:ಸರ್ವೆ ನಂ:03ರ ಉಳಿದ ಭಾಗ
05	05	71	0.20	ದೊಡ್ಡಬ್ಬಿ ಗೆರೆ	ಶ್ರೀ ರಾಜಪ್ಪ ಬಿನ್ ರಂಗಪ್ಪ ದೊಡ್ಡಬ್ಬಿಗೆರೆ ಅಂಚೆ, ಚನ್ನಗಿರಿ ತಾಲ್ಲೂಕು, ದಾವಣಗೆರೆ ಕ.ಗ.ಗು.ಅ.ಸಂ:56/09–10	ಉ:ಸರ್ವೆ ನಂ:71ರ ಉಳಿದ ಭಾಗ ದ:ಸರ್ವೆ ನಂ:71ರ ಉಳಿದ ಭಾಗ ಪೂ:ಸರ್ವೆ ನಂ:71ರ ಉಳಿದ ಭಾಗ ಪ:ಸರ್ವೆ ನಂ:71ರ ಉಳಿದ ಭಾಗ
ಹರಪನಹಳ್ಳಿ ತಾಲ್ಲೂಕು						
1	01	399/ಇ	1.00	ಉಚ್ಚಂಗಿದುರ್ಗ	ಶ್ರೀ ಎ.ಆರ್.ನಾಗರಾಜಪ್ಪ ಬಿನ್ ರೇವಣಸಿದ್ದಪ್ಪ, ತರಳಬಾಳು ನಗರ (ಗ್ರಾಮ), ಬೆಳವನೂರು ಅಂಚೆ, ದಾವಣಗೆರೆ ಕ.ಗ.ಗು.ಸಂ:126	ಉ: ಸರ್ವೆ ನಂ:399/ಇ ರ ಉಳಿದ ಭಾಗ ದ: ಸರ್ವೆ ನಂ: 399/ಇ ರ ಉಳಿದ ಭಾಗ ಪೂ: ಸರ್ವೆ ನಂ:399/ಇ ರ ಉಳಿದ ಭಾಗ ಪ: ಸರ್ವೆ ನಂ:399/ಇ ರ ಉಳಿದ ಭಾಗ
2	02	399/ಇ	0.20	ಉಚ್ಚಂಗಿದುರ್ಗ	ಶ್ರೀ ಬಿ.ಸಿದ್ದಪ್ಪ ಬಿನ್ ಎಲಿಗಾರ್ ಅಪ್ಪಾಜಿ, 10ನೇ ಕ್ರಾಸ್, 3ನೇ ಮೇನ್, ವಿನೋಬನಗರ, ದಾವಣಗೆರೆ ಕ.ಗ.ಗು.ಸಂ:104	ಉ: ಸರ್ವೆ ನಂ:399/ಇ ರ ಉಳಿದ ಭಾಗ ದ: ಸರ್ವೆ ನಂ: 399/ಇ ರ ಉಳಿದ ಭಾಗ ಪೂ: ಸರ್ವೆ ನಂ:399/ಇ ರ ಉಳಿದ ಭಾಗ ಪ: ಸರ್ವೆ ನಂ:399/ಇ ರ ಉಳಿದ ಭಾಗ
3	03	399/ಇ	0.20	ಉಚ್ಚಂಗಿದುರ್ಗ	ಶ್ರೀ ಬಿ.ಎಸ್.ದೀಪಕ್ ಬಿನ್ ಷಣ್ಮುಖಪ್ಪ, #776/1, ವಿಜಯ ಲಕ್ಷ್ಮಿ ರಸ್ತೆ, ದಾವಣಗೆರೆ ಕ.ಗ.ಗು.ಸಂ:212	ಉ: ಸರ್ವೆ ನಂ:399/ಇ ರ ಉಳಿದ ಭಾಗ ದ: ಸರ್ವೆ ನಂ: 399/ಇ ರ ಉಳಿದ ಭಾಗ ಪೂ: ಸರ್ವೆ ನಂ:399/ಇ ರ ಉಳಿದ ಭಾಗ ಪ: ಸರ್ವೆ ನಂ:399/ಇ ರ ಉಳಿದ ಭಾಗ
4	04	1/ಬಿ1	1.00	ಉಚ್ಚಂಗಿದುರ್ಗ	ಶ್ರೀ ಸಿ.ಈರ್ಯಾನಾಯ್ಕ್ ಬಿನ್ ಚಂದ್ಯಾನಾಯ್ಕ್, ಬೇವಿನಹಳ್ಳಿ ದೊಡ್ಡತಾಂಡ, ಪೋತಲಕಟ್ಟೆ ಪೋಸ್ಟ್, ಹರಪನಹಳ್ಳಿ ತಾಲ್ಲೂಕು ಕ.ಗ.ಗು.ಸಂ:208	ಉ: ಸರ್ವೆ ನಂ:1ಎ ದ: ಸರ್ವೆ ನಂ:1ಬಿ ರ ಉಳಿದ ಭಾಗ ಪೂ: ಸರ್ವೆ ನಂ:1ಬಿ ರ ಉಳಿದ ಭಾಗ ಪ: ಸರ್ವೆ ನಂ:1ಬಿ ರ ಉಳಿದ ಭಾಗ
5	05	223/13	1.30	ಬಾಗಳಿ	ಶ್ರೀ ಕೆ.ಎಂ.ಜಗದೀಶ್ ಬಿನ್ ವೃಶುಬೇಂದ್ರಯ್ಯ, ಗಣೇಶ ಗುಡಿ ಹತ್ತಿರ,, ಹೊಸಪೇಟೆ ರಸ್ತೆ, ಹರಪನಹಳ್ಳಿ, ದಾವಣಗೆರೆ ಕ.ಗ.ಗು.ಸಂ:234	ಉ:ಸರ್ವೆ ನಂ:223/13 ರ ಉಳಿದ ಭಾಗ ದ: ಸರ್ವೆ ನಂ:223/13 ರ ಉಳಿದ ಭಾಗ ಪೂ:ಸರ್ವೆ ನಂ:223/13 ರ ಉಳಿದ ಭಾಗ ಪ: ಸರ್ವೆ ನಂ:223/13 ರ ಉಳಿದ ಭಾಗ
6	06	223/13	1.00	ಬಾಗಳಿ	ಶ್ರೀ ಕೆ.ಎಂ. ಕೊಟ್ರಯ್ಯ ಬಿನ್ ವೃಶುಬೇಂದ್ರಯ್ಯ, ಗಣೇಶ ಗುಡಿ ಹತ್ತಿರ,, ಹೊಸಪೇಟೆ ರಸ್ತೆ, ಹರಪನಹಳ್ಳಿ, ದಾವಣಗೆರೆ ಕ.ಗ.ಗು.ಸಂ:236	ಉ: ಸರ್ವೆ ನಂ:223/13 ರ ಉಳಿದ ಭಾಗ ದ: ಸರ್ವೆ ನಂ:223/13 ರ ಉಳಿದ ಭಾಗ ಪೂ:ಸರ್ವೆ ನಂ:223/13 ರ ಉಳಿದ ಭಾಗ ಪ: ಸರ್ವೆ ನಂ:223/13 ರ ಉಳಿದ ಭಾಗ

1	2	3	4	5	6	7
7	07	223/ 13	2.00	ಬಾಗಳಿ	ಮೆ. ಆದರ್ಶ ರಿಯಲ್ ಎಸ್ಟೇಟ್ ಪ್ರೈ.ಲಿ., ಹೊಸಪೇಟೆ ರಸ್ತೆ, ಹರಪನಹಳ್ಳಿ, ದಾವಣಗೆರೆ ಕ.ಗ.ಗು.ಸಂ:223	ಉ: ಸರ್ವೆ ನಂ:223/13 ರ ಉಳಿದ ಭಾಗ ದ: ಸರ್ವೆ ನಂ:223/13 ರ ಉಳಿದ ಭಾಗ ಪೂ:ಸರ್ವೆ ನಂ:223/13 ರ ಉಳಿದ ಭಾಗ ಪ: ಸರ್ವೆ ನಂ:223/13 ರ ಉಳಿದ ಭಾಗ
8	08	492/ ಬಿ	1.00	ಹರಪನಹಳ್ಳಿ	ಶ್ರೀ ಬಿ.ಎಸ್.ನಾಗಪ್ಪ ಬಿನ್ ಲೇ. ಸಿದ್ದಪ್ಪ ಬಣಕಾರ್, ನಿಟ್ಟೂರು ಗ್ರಾಮ, ಹರಪನಹಳ್ಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ ಕ.ಗ.ಗು.ಸಂ:251	ಉ: ಸರ್ವೆ ನಂ:492/ಬಿ ರ ಉಳಿದ ಭಾಗ ದ: ಸರ್ವೆ ನಂ:492/ಬಿ ರ ಉಳಿದ ಭಾಗ ಪೂ:ಸರ್ವೆ ನಂ:492/ಬಿ ರ ಉಳಿದ ಭಾಗ ಪ: ಸರ್ವೆ ನಂ:492/ಬಿ ರ ಉಳಿದ ಭಾಗ
9	09	492/ ಬಿ	1.50	ಹರಪನಹಳ್ಳಿ	ಶ್ರೀ ಬಿ.ಎಸ್.ನಾಗಪ್ಪ ಬಿನ್ ಲೇ. ಸಿದ್ದಪ್ಪ ಬಣಕಾರ್, ನಿಟ್ಟೂರು ಗ್ರಾಮ, ಹರಪನಹಳ್ಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ ಕ.ಗ.ಗು.ಸಂ:253	ಉ: ಸರ್ವೆ ನಂ:492/ಬಿ ರ ಉಳಿದ ಭಾಗ ದ: ಸರ್ವೆ ನಂ:492/ಬಿ ರ ಉಳಿದ ಭಾಗ ಪೂ:ಸರ್ವೆ ನಂ:492/ಬಿ ರ ಉಳಿದ ಭಾಗ ಪ: ಸರ್ವೆ ನಂ:492/ಬಿ ರ ಉಳಿದ ಭಾಗ
10	10	492/ ಬಿ	1.50	ಹರಪನಹಳ್ಳಿ	ಶ್ರೀ ಬಿ.ಎಸ್.ನಾಗಪ್ಪ ಬಿನ್ ಲೇ. ಸಿದ್ದಪ್ಪ ಬಣಕಾರ್, ನಿಟ್ಟೂರು ಗ್ರಾಮ, ಹರಪನಹಳ್ಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ ಕ.ಗ.ಗು.ಸಂ:252	ಉ: ಸರ್ವೆ ನಂ:492/ಬಿ ರ ಉಳಿದ ಭಾಗ ದ: ಸರ್ವೆ ನಂ:492/ಬಿ ರ ಉಳಿದ ಭಾಗ ಪೂ:ಸರ್ವೆ ನಂ:492/ಬಿ ರ ಉಳಿದ ಭಾಗ ಪ: ಸರ್ವೆ ನಂ:492/ಬಿ ರ ಉಳಿದ ಭಾಗ
11	11	1/ಬಿ1	0.20	ಉಚ್ಚಂಗಿ ದುರ್ಗ	ಶ್ರೀ ದುರ್ಗ್ಯಾನಾಯ್ಕ, ಬೇವಿನಹಳ್ಳಿ,ದೊಡ್ಡತಾಂಡ, ಪೋತಲಕಟ್ಟೆ ಅಂಚೆ, ಹರಪನಹಳ್ಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ ಕ.ಗ.ಗು.ಸಂ:235	ಉ: ಸರ್ವೆ ನಂ:1ಎ ದ: ಸರ್ವೆ ನಂ:1ಬಿ ರ ಉಳಿದ ಭಾಗ ಪೂ: ಸರ್ವೆ ನಂ:1ಬಿ ರ ಉಳಿದ ಭಾಗ ಪ: ಈರ್‍ಯಾನಾಯ್ಕರ ಕಲ್ಲು ಗಣಿ ಗುತ್ತಿಗೆ
12	12	492/ ಬಿ	3.20	ಹರಪನಹಳ್ಳಿ	ಶ್ರೀಮತಿ ಹೆಚ್.ಆರ್.ಶಿವಲೀಲಾ ಕೋಂ ಹೆಚ್.ಇ. ರೋಹಿತ್ ಕುಮಾರ್, 12ನೇ ವಾರ್ಡ್, ಹಡಗಳಿ ರಸ್ತೆ, ಹರಪನಹಳ್ಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ ಕ.ಗ.ಗು.ಸಂ:262	ಉ: ಸರ್ವೆ ನಂ:492/ಬಿ ರ ಉಳಿದ ಭಾಗ ದ: ಸರ್ವೆ ನಂ:492/ಬಿ ರ ಉಳಿದ ಭಾಗ ಪೂ:ಸರ್ವೆ ನಂ:492/ಬಿ ರ ಉಳಿದ ಭಾಗ ಪ: ಸರ್ವೆ ನಂ:492/ಬಿ ರ ಉಳಿದ ಭಾಗ
13	13	492/ ಬಿ	0.30	ಹರಪನಹಳ್ಳಿ	ಶ್ರೀ ಜಿತೇಂದ್ರ ಕೆ.ಪಟೇಲ್ ಬಿನ್ ಕೆ.ಆರ್.ಪಟೇಲ್, ಸೋನಾಲ್ ಹಾರ್ಡ್‌ವೇರ್ ಅಂಡ್ ಪೇಯಿಂಟ್ಸ್, ಮುನ್ಸಿಪಲ್ ಕಛೇರಿ ಎದುರು, ಹರಪನಹಳ್ಳಿ ತಾಲ್ಲೂಕು, ದಾವಣಗೆರೆ ಕ.ಗ.ಗು.ಸಂ:289	ಉ: ಸರ್ವೆ ನಂ:492/ಬಿ ರ ಉಳಿದ ಭಾಗ ದ: ಸರ್ವೆ ನಂ:492/ಬಿ ರ ಉಳಿದ ಭಾಗ ಪೂ:ಸರ್ವೆ ನಂ:492/ಬಿ ರ ಉಳಿದ ಭಾಗ ಪ: ಸರ್ವೆ ನಂ:492/ಬಿ ರ ಉಳಿದ ಭಾಗ
14	14	492/ ಬಿ	1.00	ಹರಪನಹಳ್ಳಿ	ಶ್ರೀ ಜಿತೇಂದ್ರ ಕೆ.ಪಟೇಲ್ ಬಿನ್ ಕೆ.ಆರ್.ಪಟೇಲ್, ಸೋನಾಲ್ ಹಾರ್ಡ್‌ವೇರ್ ಅಂಡ್ ಪೇಯಿಂಟ್ಸ್, ಮುನ್ಸಿಪಲ್ ಕಛೇರಿ ಎದುರು, ಹರಪನಹಳ್ಳಿ ತಾಲ್ಲೂಕು, ದಾವಣಗೆರೆ ಕ.ಗ.ಗು.ಸಂ:292	ಉ: ಸರ್ವೆ ನಂ:492/ಬಿ ರ ಉಳಿದ ಭಾಗ ದ: ಸರ್ವೆ ನಂ:492/ಬಿ ರ ಉಳಿದ ಭಾಗ ಪೂ:ಸರ್ವೆ ನಂ:492/ಬಿ ರ ಉಳಿದ ಭಾಗ ಪ: ಸರ್ವೆ ನಂ:492/ಬಿ ರ ಉಳಿದ ಭಾಗ
15	15	223/ 13	1.00	ಬಾಗಳಿ	ಶ್ರೀ ಟಿ.ಎಂ.ನಾಗಭೂಷಣ ಸ್ವಾಮಿ, #371/18, ಆಚಾರ್ಯ ಲೇಔಟ್, ಹರಪನಹಳ್ಳಿ, ದಾವಣಗೆರೆ ಕ.ಗ.ಗು.ಸಂ:223	ಉ: ಸರ್ವೆ ನಂ:223/13 ರ ಉಳಿದ ಭಾಗ ದ: ಸರ್ವೆ ನಂ:223/13 ರ ಉಳಿದ ಭಾಗ ಪೂ:ಸರ್ವೆ ನಂ:223/13 ರ ಉಳಿದ ಭಾಗ ಪ: ಸರ್ವೆ ನಂ:223/13 ರ ಉಳಿದ ಭಾಗ
16	16	1ಬಿ1	2.20	ಉಚ್ಚಂಗಿದುರ್ಗ	ಶ್ರೀ ಬಿ.ವೈ.ಮಲ್ಲನಾಥ್, ಬಿನ್ ಯಂಕ್ಯಾನಾಯ್ಕ, ಪುಣಬಗಟ್ಟ ತಾಂಡ, ಹರಪನಹಳ್ಳಿ, ದಾವಣಗೆರೆ ಕ.ಗ.ಗು.ಅ.ಸಂ:19/07–08	ಉ: ಶಶಿಕಲಾ ಕ.ಗ.ಗು.ಅಧಿಸೂಚಿತ ಪ್ರದೇಶ ದ: ಸರ್ವೆ ನಂ:1/ಬಿ1 ರ ಉಳಿದ ಭಾಗ ಪೂ:ಸರ್ವೆ ನಂ:1/ಬಿ1 ರ ಉಳಿದ ಭಾಗ ಪ: ಸರ್ವೆ ನಂ:1/ಬಿ1 ರ ಉಳಿದ ಭಾಗ

1	2	3	4	5	6	7
17	17	1ಬಿ1	2.20	ಉಚ್ಚಂಗಿದುರ್ಗ	ಶ್ರೀಮತಿ ಶಶಿಕಲಾ ಕೋಂ ಶ್ರೀ ಬಿ.ವೈ.ಮಲ್ಲನಾಥ್, ಪುಣಬಗಟ್ಟ ತಾಂಡ, ಹರಪನಹಳ್ಳಿ, ದಾವಣಗೆರೆ ಕ.ಗ.ಗು.ಅ.ಸಂ:18/07–08	ಉ: ಸರ್ವೆ ನಂ:1/ಬಿ1 ರ ಉಳಿದ ಭಾಗ ದ: ಸರ್ವೆ ನಂ:1/ಬಿ1 ರ ಉಳಿದ ಭಾಗ ಪೂ:ಸರ್ವೆ ನಂ:1/ಬಿ1 ರ ಉಳಿದ ಭಾಗ ಪ: ಸರ್ವೆ ನಂ:1/ಬಿ1 ರ ಉಳಿದ ಭಾಗ
18	18	512/ ಸಿ	2.00	ಉಚ್ಚಂಗಿದುರ್ಗ	ಶ್ರೀ ವಿ.ಕೆ.ಹಾಲಪ್ಪ ಬಿನ್ ಈರಪ್ಪ, ಯು.ಬೇವಿನಹಳ್ಳಿ, ಪೋತಲಕಟ್ಟೆ ಪೋಸ್ಟ್, ಹರಪನಹಳ್ಳಿ, ದಾವಣಗೆರೆ ಕ.ಗ.ಗು.ಅ.ಸಂ:99/08–09	ಉ: ಸರ್ವೆ ನಂ:512/ಸಿ1 ರ ಉಳಿದ ಭಾಗ ದ: ಸರ್ವೆ ನಂ:511 ರ ಉಳಿದ ಭಾಗ ಪೂ:ಸರ್ವೆ ನಂ:512/ಸಿ3 ರ ಉಳಿದ ಭಾಗ ಪ: ಸರ್ವೆ ನಂ:399 ರ ಉಳಿದ ಭಾಗ
19	19	419/ ಬಿಎ7 /ಪಿ2	1.00	ಮಾದಾ ಪುರ	ಶ್ರೀ ಜಿಲಾನ್ ಬಾಷಾ ಬಿನ್ ಇಮಾಮ್ ಸಾಬ್, ಅಗಸನಕಟ್ಟೆ, ಹರಪನಹಳ್ಳಿ, ದಾವಣಗೆರೆ ಕ.ಗ.ಗು.ಅ.ಸಂ:74/07–08	ಉ: ಸರ್ವೆ ನಂ:419/ಬಿ ರ ಉಳಿದ ಭಾಗ ದ: ಸರ್ವೆ ನಂ:419/ಬಿ ರ ಉಳಿದ ಭಾಗ ಪೂ: ಸರ್ವೆ ನಂ:419/ಬಿ ರ ಉಳಿದ ಭಾಗ ಪ: ಸರ್ವೆ ನಂ:416
20	20	399/ ಇ	1.00	ಉಚ್ಚಂಗಿ ದುರ್ಗ	ಶ್ರೀ ಎಸ್.ಗೋಪಾಲಕೃಷ್ಣ ಬಿನ್ ಎಲಿಗಾರ ಸಿದ್ದಪ್ಪ, ವಿನೋಬನಗರ, 3ನೇ ಮೈನ್, 10ನೇ ಕ್ರಾಸ್, ದಾವಣಗೆರೆ ಕ.ಗ.ಗು.ಅ.ಸಂ:41/07–08	ಉ: ಸರ್ವೆ ನಂ:399/ಇ ರ ಉಳಿದ ಭಾಗ ದ: ಸರ್ವೆ ನಂ:399/ಇ ರ ಉಳಿದ ಭಾಗ ಪೂ: ಸರ್ವೆ ನಂ:399/ಇ ರ ಉಳಿದ ಭಾಗ ಪ: ಸರ್ವೆ ನಂ:399/ಇ ರ ಉಳಿದ ಭಾಗ
21	21	261/2	1.00	ಸತ್ತೂರು	ಶ್ರೀ ನಾನ್ಯಾ ನಾಯ್ಕ ಬಿನ್ ಬುಳ್ಯಾನಾಯ್ಕ, ಕಾಳಾನಾಯ್ಕನ ತಾಂಡ, ಹಿರೇಮೇಗಳಗೆರೆ ಅಂಚೆ, ಹರಪನಹಳ್ಳಿ, ದಾವಣಗೆರೆ ಕ.ಗ.ಗು.ಅ.ಸಂ:08/08–09	ಉ: ಸರ್ವೆ ನಂ:261/2 ರ ಉಳಿದ ಭಾಗ ದ: ಸರ್ವೆ ನಂ:261/2 ರ ಉಳಿದ ಭಾಗ ಪೂ: ಸರ್ವೆ ನಂ:261/2 ರ ಉಳಿದ ಭಾಗ ಪ: ಸರ್ವೆ ನಂ:261/2 ರ ಉಳಿದ ಭಾಗ
22	22	419/ ಬಿಎ7 /ಪಿ2	0.50	ಮಾದಾಪುರ	ಶ್ರೀಮತಿ ತರನುಂಬಾನು ಕೋಂ ಸಲೀಂಬಾಷಾ, ಸ್ಟೇಡಿಯಂ ಹತ್ತಿರ, ಹಡಗಲಿ ರಸ್ತೆ, ಹರಪನಹಳ್ಳಿ, ದಾವಣಗೆರೆ ಕ.ಗ.ಗು.ಅ.ಸಂ:10/08–09	ಉ: ಸರ್ವೆ ನಂ:419/ಬಿಎ7/ಪಿ2ರ ಉಳಿದ ಭಾಗ ದ: ಸರ್ವೆ ನಂ:419/ಬಿಎ7/ಪಿ2ರ ಉಳಿದ ಭಾಗ ಪೂ: ಸರ್ವೆ ನಂ:419/ಬಿಎ7/ಪಿ2ರ ಉಳಿದ ಭಾಗ ಪ: ಸರ್ವೆ ನಂ:419/ಬಿಎ7/ಪಿ2ರ ಉಳಿದ ಭಾಗ
23	23	437/ ಎ1	1.00	ಹೊಸಕೋಟೆ	ಶ್ರೀ ಪೂಜಾರ್ ಸಣ್ಣ ತಿಮ್ಮಪ್ಪ, ಬಿನ್ ತಿಮ್ಮಪ್ಪ, ಕೆರೆಗುಡಿಹಳ್ಳಿ, ಅರಸಿಕೆರೆ ಅಂಚೆ, ಹರಪನಹಳ್ಳಿ, ದಾವಣಗೆರೆ ಕ.ಗ.ಗು.ಸಂ:ಹೆಚ್‌ಪಿಟಿ191	ಉ: ಸರ್ವೆ ನಂ:437ರ ಉಳಿದ ಭಾಗ ದ: ಸರ್ವೆ ನಂ:437ರ ಉಳಿದ ಭಾಗ ಪೂ: ಸರ್ವೆ ನಂ:437ರ ಉಳಿದ ಭಾಗ ಪ: ಸರ್ವೆ ನಂ:437ರ ಉಳಿದ ಭಾಗ
24	24	399/ ಇ	0.20	ಉಚ್ಚಂಗಿದುರ್ಗ	ಶ್ರೀ ಜಿ.ಹೆಚ್.ಶೇಖರಪ್ಪ ಬಿನ್ ಜಿ.ಹನುಮಂತಪ್ಪ, ಯು.ಕಲ್ಲಹಳ್ಳಿ, ಚಟ್ನಿಹಳ್ಳಿ ಅಂಚೆ, ಹರಪನಹಳ್ಳಿ, ದಾವಣಗೆರೆ ಕ.ಗ.ಗು.ಸಂ:ಹೆಚ್‌ಪಿಟಿ137	ಉ: ಸರ್ವೆ ನಂ:399/ಇ ರ ಉಳಿದ ಭಾಗ ದ: ಸರ್ವೆ ನಂ:399/ಇ ರ ಉಳಿದ ಭಾಗ ಪೂ: ಸರ್ವೆ ನಂ:399/ಇ ರ ಉಳಿದ ಭಾಗ ಪ: ಸರ್ವೆ ನಂ:399/ಇ ರ ಉಳಿದ ಭಾಗ
25	25	207	1.00	ಕೂಲ ಹಳ್ಳಿ	ಶ್ರೀ ಡಿ.ರಾಮಪ್ಪ ಬಿನ್ ಡಿ.ಹಾಲಪ್ಪ, 11ನೇ ವಾರ್ಡ್, ಸುಣ್ಣಗಾರ ಬೀದಿ, ಹರಪನಹಳ್ಳಿ, ದಾವಣಗೆರೆ ಕ.ಗ.ಗು.ಅ.ಸಂ:75/08–09	ಉ:ಸರ್ವೆ ನಂ:207/ಎಫ್ ರ ಉಳಿದ ಭಾಗ ದ:ಸರ್ವೆ ನಂ:207/ಎಫ್‌ರ ಉಳಿದ ಭಾಗ ಪೂ:ಸರ್ವೆ ನಂ:207/ಎಫ್‌ರ ಉಳಿದ ಭಾಗ ಪ: ಸರ್ವೆ ನಂ:207/ಎಫ್‌ರ ಉಳಿದ ಭಾಗ
26	26	06	0.20	ಅರಸೀಕೆರೆ ತಿಮ್ಲಾಪುರ	ಶ್ರೀ ವಿ.ಹನುಮಂತಪ್ಪ ಬಿನ್ ವಿ.ಯಂಕಪ್ಪ, ಅರಸೀಕೆರೆ ತಿಮ್ಲಾಪುರ, ಹರಪನಹಳ್ಳಿ, ದಾವಣಗೆರೆ ಕ.ಗ.ಗು.ಅ.ಸಂ:98/08–09	ಉ: ಸರ್ವೆ ನಂ:06 ರ ಉಳಿದ ಭಾಗ ದ: ಸರ್ವೆ ನಂ:06 ರ ಉಳಿದ ಭಾಗ ಪೂ: ಸರ್ವೆ ನಂ:06 ರ ಉಳಿದ ಭಾಗ ಪ: ಸರ್ವೆ ನಂ:06 ರ ಉಳಿದ ಭಾಗ

1	2	3	4	5	6	7
27	27	06	0.20	ಅರಸೀಕೆರೆ ತಿಮ್ಲಾಪುರ	ಶ್ರೀ ವಿ.ಹನುಮಂತಪ್ಪ ಬಿನ್ ವಿ.ಯಂಕಪ್ಪ, ಅರಸೀಕೆರೆ ತಿಮ್ಲಾಪುರ, ಹರಪನಹಳ್ಳಿ, ದಾವಣಗೆರೆ ಕ.ಗ.ಗು.ಅ.ಸಂ:97/08–09	ಉ: ಸರ್ವೆ ನಂ:06 ರ ಉಳಿದ ಭಾಗ ದ: ಸರ್ವೆ ನಂ:06 ರ ಉಳಿದ ಭಾಗ ಪೂ: ಸರ್ವೆ ನಂ:06 ರ ಉಳಿದ ಭಾಗ ಪ: ಸರ್ವೆ ನಂ:06 ರ ಉಳಿದ ಭಾಗ
28	28	261/2	1.00	ಸತ್ತೂರು	ಶ್ರೀ ಉಮೇಶ್‌ನಾಯ್ಕ ಬಿನ್ ಸೋಮ್ಲಾನಾಯ್ಕ, ಬೇವಿನಹಳ್ಳಿ, ಸಣ್ಣ ತಾಂಡ ಪೋತಲಕಟ್ಟೆ ಅಂಚೆ, ಹರಪನಹಳ್ಳಿ, ದಾವಣಗೆರೆ ಕ.ಗ.ಗು.ಅ.ಸಂ:07/08–09	ಉ: ಸರ್ವೆ ನಂ:261/2 ರ ಉಳಿದ ಭಾಗ ದ: ಸರ್ವೆ ನಂ:261/2 ರ ಉಳಿದ ಭಾಗ ಪೂ: ಸರ್ವೆ ನಂ:261/2 ರ ಉಳಿದ ಭಾಗ ಪ: ಸರ್ವೆ ನಂ:260 ರ ಉಳಿದ ಭಾಗ
29	29	1ಬಿ/1	2.00	ಉಚ್ಚಂಗಿ ದುರ್ಗ	ಶ್ರೀ ನಾಗೇಂದ್ರಪ್ಪ ಬಿನ್ ಹನುಮಂತಪ್ಪ, ಹಿರೇಮ್ಯಾಗಳಗೇರಿ, ಹರಪನಹಳ್ಳಿ, ದಾವಣಗೆರೆ ಕ.ಗ.ಗು.ಅ.ಸಂ:31/07–08	ಉ: ಸರ್ವೆ ನಂ:1ಎರ ಉಳಿದ ಭಾಗ ದ: ಸರ್ವೆ ನಂ:1ಬಿ/1 ರ ಉಳಿದ ಭಾಗ ಪೂ: ಸರ್ವೆ ನಂ:1ಬಿ/1 ರ ಉಳಿದ ಭಾಗ ಪ: ಸರ್ವೆ ನಂ:1ಬಿ/1 ರ ಉಳಿದ ಭಾಗ
30	30	399/ ಇ	1.00	ಉಚ್ಚಂಗಿ ದುರ್ಗ	ಶ್ರೀ ಬಿ.ವೆಂಕಟರಾಮ ಪ್ರಸಾದ ರೆಡ್ಡಿ ಬಿನ್ ಯೋಗಿರೆಡ್ಡಿ, #1949/9, 19ನೇ ಕ್ರಾಸ್, ವಿದ್ಯಾನಗರ, ದಾವಣಗೆರೆ ಕ.ಗ.ಗು.ಅ.ಸಂ:32/07–08	ಉ: ಸರ್ವೆ ನಂ:399/ಇ ರ ಉಳಿದ ಭಾಗ ದ: ಸರ್ವೆ ನಂ:399/ಇ ರ ಉಳಿದ ಭಾಗ ಪೂ: ಸರ್ವೆ ನಂ:399/ಇ ರ ಉಳಿದ ಭಾಗ ಪ: ಸರ್ವೆ ನಂ:399/ಇ ರ ಉಳಿದ ಭಾಗ
31	31	399/ ಇ	0.20	ಉಚ್ಚಂಗಿ ದುರ್ಗ	ಶ್ರೀ ವೆಂಕಟೇಶ್ ಬಿನ್ ಬುಳ್ಳಪ್ಪ, ಪಣಯಾಪುರ, ಪೋತಲಕಟ್ಟೆ ಪೋಸ್ಟ್, ಹರಪನಹಳ್ಳಿ ತಾಲ್ಲೂಕು, ದಾವಣಗೆರೆ. ಕ.ಗ.ಗು.ಸಂ:ಹೆಚ್‌ಪಿಟಿ130	ಉ: ಸರ್ವೆ ನಂ:399/ಇ ರ ಉಳಿದ ಭಾಗ ದ: ಸರ್ವೆ ನಂ:399/ಇ ರ ಉಳಿದ ಭಾಗ ಪೂ: ಸರ್ವೆ ನಂ:399/ಇ ರ ಉಳಿದ ಭಾಗ ಪ: ಸರ್ವೆ ನಂ:399/ಇ ರ ಉಳಿದ ಭಾಗ
32	32	131/ಬಿ	1.20	ಚಟ್ನಿಹಳ್ಳಿ	ಶ್ರೀ ಎ.ರಮೇಶ್ ಬಿನ್ ಕೊಂಡಯ್ಯ, #1854/10, 3ನೇ ವಾರ್ಡ್, ಸ್ವಾಮಿ ವಿವೇಕಾನಂದ ಬಡಾವಣೆ, ಹರಪನಹಳ್ಳಿ ತಾಲ್ಲೂಕು, ದಾವಣಗೆರೆ ಕ.ಗ.ಗು.ಸಂ:ಹೆಚ್‌ಪಿಟಿ189	ಉ: ಸರ್ವೆ ನಂ:131/ಬಿ ರ ಉಳಿದ ಭಾಗ ದ: ಸರ್ವೆ ನಂ:131/ಬಿ ರ ಉಳಿದ ಭಾಗ ಪೂ: ಸರ್ವೆ ನಂ:131/ಬಿ ರ ಉಳಿದ ಭಾಗ ಪ: ಸರ್ವೆ ನಂ:131/ಬಿ ರ ಉಳಿದ ಭಾಗ

ಜಂಟಿ ನಿರ್ದೇಶಕರು,
ಉತ್ತರ ವಲಯ, ಬಳ್ಳಾರಿ.

ಪಿ.ಆರ್.. 1281

ಪೋಲೀಸ್ ಇಲಾಖೆ

ಪೊಲೀಸ್ ಕಮೀಷನರ್ ರವರ ಕಛೇರಿ, ನಂ.1, ಇನ್‌ಫೆಂಟ್ರಿ ರಸ್ತೆ, ಬೆಂಗಳೂರು ನಗರ

ಸಂಖ್ಯೆ:17/ಅಸೂ/ಡಿಸಿಪಿ/ಸಂ.ಪೂ/2011, ದಿನಾಂಕ: 28–07–2011

ಅಧಿಸೂಚನೆ

ಬೆಂಗಳೂರು ನಗರ ಕೆ.ಆರ್.ಪುರ ಸಂಚಾರ ಪೊಲೀಸ್ ಠಾಣೆಯ ಸರಹದ್ದಿನ ಕಸ್ತೂರಿನಗರ 2ನೇ ಮುಖ್ಯರಸ್ತೆಯು ದ್ವಿಮುಖ ಸಂಚಾರ ವ್ಯವಸ್ಥೆಯಿಂದ ಕೂಡಿರುತ್ತದೆ. ಈ ರಸ್ತೆಯ ಕಸ್ತೂರಿಬೇಕರಿ ಜಂಕ್ಷನ್‌ನಿಂದ ಬಿ.ಚನ್ನಸಂದ್ರ ಮುಖ್ಯರಸ್ತೆಯವರೆಗೆ ಸಾರ್ವಜನಿಕರು ಎರಡೂ ಬದಿಗಳಲ್ಲಿಯೂ ತಮ್ಮ ವಾಹನಗಳನ್ನು ನಿಲುಗಡೆ ಮಾಡುತ್ತಿರುವುದರಿಂದ ಈ ರಸ್ತೆಯಲ್ಲಿ ಸಹಜವಾಗಿಯೇ ವಾಹನ ಸಂಚಾರ ದಟ್ಟಣೆ ಅಧಿಕಗೊಂಡು ವಾಹನಗಳ ಸುಗಮ ಸಂಚಾರಕ್ಕೆ ಅನಾನುಕೂಲವಾಗುತ್ತಿರುವುದಲ್ಲದೆ ಪದೇ ಪದೇ ಸಂಚಾರ ಸ್ಥಗಿತಗೊಳ್ಳುತ್ತಿರುತ್ತದೆ. ಅದ್ದರಿಂದ, ಕಸ್ತೂರಿನಗರ 2ನೇ ಮುಖ್ಯರಸ್ತೆಯ ಕಸ್ತೂರಿಬೇಕರಿ ಜಂಕ್ಷನ್‌ನಿಂದ ಬಿ.ಚನ್ನಸಂದ್ರ ಮುಖ್ಯರಸ್ತೆಯವರೆಗೆ ರಸ್ತೆಯ ಎರಡೂ ಬದಿಗಳಲ್ಲಿ ಸಮ ಮತ್ತು ಬೆಸ ಸಂಖ್ಯೆ ದಿನಾಂಕಗಳಂದು ದ್ವಿಚಕ್ರ ಮತ್ತು ಲಘು ವಾಹನಗಳ ನಿಲುಗಡೆ ಮಾಡುವ ವ್ಯವಸ್ಥೆಯನ್ನು ಕಲ್ಪಿಸುವ ಹಾಗೂ ಕಸ್ತೂರಿ ಬೇಕರಿ ಜಂಕ್ಷನ್‌ನಿಂದ ಬೆನ್ನಿಗಾನಹಳ್ಳಿ ಕಡೆಗೆ 15 ಮೀಟರ್ ಹಾಗೂ ಬಿ.ಚನ್ನಸಂದ್ರ ಕಡೆಗೆ 15 ಮೀಟರ್ ವರೆಗೆ ವಾಹನಗಳ ನಿಲುಗಡೆಯನ್ನು ನಿಷೇಧಿಸುವ ಅವಶ್ಯಕತೆಯಿರುತ್ತದೆ.

ಆದ್ದರಿಂದ ಕಲಂ;115 ಮೋಟಾರು ವಾಹನ ಕಾಯ್ದೆ 1988 ಹಾಗೂ ಕಲಂ;3 ಕರ್ನಾಟಕ ಟ್ರಾಫಿಕ್ ಕಂಟ್ರೋಲ್ ಕಾಯಿದೆ 1960ರ ಪ್ರಕಾರ ನನಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಬಿ.ಜಿ.ಜ್ಯೋತಿ ಪ್ರಕಾಶ್ ಮಿರ್ಜಿ, ಐ.ಪಿ.ಎಸ್. ಪೊಲೀಸ್ ಕಮೀಷನರ್, ಬೆಂಗಳೂರು ನಗರ ಆದ ನಾನು

ಕೆ.ಆರ್.ಪುರ ಸಂಚಾರ ಪೊಲೀಸ್ ಠಾಣೆಯ ಸರಹದ್ದಿನ ಕಸ್ತೂರಿನಗರ 2ನೇ ಮುಖ್ಯರಸ್ತೆಯಲ್ಲಿ ಈ ಕೆಳಕಂಡ ಮಾರ್ಪಾಡುಗಳನ್ನು ಮಾಡಲು ಆದೇಶಿಸಿರುತ್ತೇನೆ.

(1) **ಕೆ.ಆರ್.ಪುರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಕಸ್ತೂರಿನಗರದ 2ನೇ ಮುಖ್ಯರಸ್ತೆಯ ಕಸ್ತೂರಿಬೇಕರಿ ಜಂಕ್ಷನ್‌ನಿಂದ ಬಿ.ಚನ್ನಸಂದ್ರ ಮುಖ್ಯರಸ್ತೆಯವರೆಗೆ ರಸ್ತೆಯ ಎರಡೂ ಬದಿಗಳಲ್ಲಿ ಸಮ ಮತ್ತು ಬೆಸ ಸಂಖ್ಯೆ ದಿನಾಂಕಗಳಂದು ದ್ವಿಚಕ್ರ ಮತ್ತು ಲಘು ವಾಹನಗಳ ನಿಲುಗಡೆಗೆ ಅವಕಾಶವನ್ನು ಕಲ್ಪಿಸಲಾಗಿದೆ.**

(2) **ಕಸ್ತೂರಿನಗರ 2ನೇ ಮುಖ್ಯರಸ್ತೆಯ ಕಸ್ತೂರಿ ಬೇಕರಿ ಜಂಕ್ಷನ್‌ನಿಂದ ಬೆನ್ನಿಗಾನಹಳ್ಳಿ ಕಡೆಗೆ 15 ಮೀಟರ್ ಹಾಗೂ ಬಿ.ಚನ್ನಸಂದ್ರ ಕಡೆಗೆ 15 ಮೀಟರ್ ವಾಹನಗಳ ನಿಲುಗಡೆಯನ್ನು ನಿಷೇಧಿಸಲಾಗಿದೆ.**

ಅಂತೆಯೆ ಕಲಂ; 116 ಮೋಟಾರ್ ವಾಹನ ಕಾಯ್ದೆ 1988 ಹಾಗೂ ಕಲಂ;4 ಕರ್ನಾಟಕ ಟ್ರಾಫಿಕ್ ಕಂಟ್ರೋಲ್ ಆಕ್ಟ್ 1960 ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಾಲಯಿಸಿ ಮೇಲ್ಕಂಡ ಮಾರ್ಪಾಡುಗಳನ್ನು ಜಾರಿಗೊಳಿಸಲು ಆದೇಶಿಸಿರುತ್ತೇನೆ.

ಈ ಮೇಲ್ಕಂಡ ವ್ಯವಸ್ಥೆಯನ್ನು ದಿನಾಂಕ; 29–07–2011ರಿಂದ ಜಾರಿಗೆ ಬರುವಂತೆ ಆದೇಶಿಸಿರುತ್ತೇನೆ.

ಈ ಆದೇಶವನ್ನು ನಾನು ಈ ದಿನ ಅಂದರೆ ದಿನಾಂಕ; 28–07–2011 ರಂದು ನನ್ನ ಸಹಿ ಮತ್ತು ಮುದ್ರೆಯೊಂದಿಗೆ ನೀಡಿರುತ್ತೇನೆ.

ಬಿ.ಜಿ.ಜ್ಯೋತಿ ಪ್ರಕಾಶ್ ಮಿರ್ಜಿ, ಐ.ಪಿ.ಎಸ್.

ಪಿ.ಆರ್. 775 ಪೊಲೀಸ್ ಕಮೀಷನರ್, ಬೆಂಗಳೂರು ನಗರ

ಪೊಲೀಸ್ ಇಲಾಖೆ

ಪೊಲೀಸ್ ಕಮೀಷನರ್ ರವರ ಕಛೇರಿ, ನಂ.1, ಇನ್‌ಫೆಂಟ್ರಿ ರಸ್ತೆ, ಬೆಂಗಳೂರು ನಗರ

ಅಧಿಸೂಚನೆ

ಸಂಖ್ಯೆ:20/ಅಸೂ/ಡಿಸಿಪಿ/ಸಂ.ಪೂ/2011, ದಿನಾಂಕ: 28–07–2011

ಇಂದಿರಾನಗರ ಸಂಚಾರ ಪೊಲೀಸ್ ಠಾಣೆಯ ಸರಹದ್ದಿನ ಹಳೇ ಮದ್ರಾಸ್ ರಸ್ತೆ & ಬೆನ್ನಿಗಾನಹಳ್ಳಿ ಜಂಕ್ಷನ್ ಬಳಿ ಸದರಿ ರಸ್ತೆಯಲ್ಲಿ ಕೆ.ಆರ್.ಪುರಂ ಕಡೆಯಿಂದ ಬರುವ ವಾಹನಗಳು ನಗರದ ಕಡೆಗೆ ಹೋಗಲು ಸದರಿ ಜಂಕ್ಷನ್‌ನಲ್ಲಿ 'ಯು' ತಿರುವು ಹಾಗೂ ನಾಗಾವಾರ ಪಾಳ್ಯ ರಸ್ತೆಯ ಕಡೆಗೆ ಹೋಗಲು 'ಬಲ' ತಿರುವು ಪಡೆಯಲು ವಾಹನಗಳು ಸಾಲಾಗಿ ನಿಲ್ಲುವುದರಿಂದ ಕೆ.ಆರ್.ಪುರಂ ಕಡೆಗೆ ನೇರವಾಗಿ ಹೋಗುವ ವಾಹನಗಳಿಗೆ ತೊಂದರೆಯಾಗುತ್ತಿವುದಲ್ಲದೆ ಇತ್ತೀಚಿನ ದಿನಗಳಲ್ಲಿ ಸದರಿ ಹಳೇ ಮದ್ರಾಸ್ ರಸ್ತೆಯಲ್ಲಿ ವಾಹನಗಳ ಸಂಚಾರ ದಟ್ಟಣೆ ಹೆಚ್ಚಾಗಿರುವುದರಿಂದ ಹಾಗೂ ಆರ್.ಎಂ.ಜಡ್. ನಿಂದ ಬರುವ ಎಲ್ಲಾ ವಾಹನಗಳು ಹಳೇ ಮದ್ರಾಸ್ ರಸ್ತೆ & ಬೆನ್ನಿಗಾನಹಳ್ಳಿ ಜಂಕ್ಷನ್ ಬಳಿ 'ಯು' ತಿರುವು ಹಾಗೂ ಬಲ ತಿರುವು ಪಡೆಯುವುದರಿಂದ ವಾಹನಗಳ ಸಂಚಾರ ವ್ಯತ್ಯಯವಾಗಿ ನೇರವಾಗಿ ಹೋಗುವ ವಾಹನಗಳಿಗೆ ಅಡಚಣೆಯುಂಟಾಗುತ್ತಿರುತ್ತದೆ. ಸುಗಮ ಸಂಚಾರಕ್ಕೆ ಅನಾನುಕೂಲವಾಗಿ ಪದೇ ಪದೇ ಸಂಚಾರ ಸ್ಥಗಿತಗೊಳ್ಳುತ್ತಿರುತ್ತದೆ. ಹಳೇ ಮದ್ರಾಸ್ ರಸ್ತೆ & ಬೆನ್ನಿಗಾನಹಳ್ಳಿ ಜಂಕ್ಷನ್‌ನಲ್ಲಿ 'ಯು' ತಿರುವು ಹಾಗೂ ಬಲ ತಿರುವನ್ನು ನಿಷೇಧಿಸಿ, ಸದರಿ ವಾಹನ ಚಾಲಕರು 150 ಮೀಟರ್ ಮುಂದಕ್ಕೆ ಹೋಗಿ ಕೆ.ಆರ್.ಪುರಂ ಫ್ಲೈ ಓವರ್ ಕೆಳಗೆ 'ಯು' ತಿರುವು ಹಾಗೂ ಬಲ ತಿರುವು ಪಡೆಯಲು ಅವಕಾಶ ಕಲ್ಪಸುವ ಅವಶ್ಯಕತೆಯಿರುತ್ತದೆ.

ಆದುದರಿಂದ ಕಲಂ.115 ಮೋಟಾರು ವಾಹನ ಕಾಯ್ದೆ 1988 ಹಾಗೂ ಕಲಂ.3 ಕರ್ನಾಟಕ ಟ್ರಾಫಿಕ್ ಕಂಟ್ರೋಲ್ ಕಾಯಿದೆ 1960ರ ಪ್ರಕಾರ ನನಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಜ್ಯೋತಿಪ್ರಕಾಶ್ ಮಿರ್ಜಿ ಐ.ಪಿ.ಎಸ್., ಪೊಲೀಸ್ ಕಮೀಷನರ್, ಬೆಂಗಳೂರು ನಗರ ಆದ ನಾನು ಈ ಕೆಳಕಂಡ ಸಂಚಾರ ಮಾರ್ಪಾಡುಗಳನ್ನು ಮಾಡಲು ಆದೇಶಿಸಿರುತ್ತೇನೆ.

ಇಂದಿರಾನಗರ ಸಂಚಾರ ಪೊಲೀಸ್ ಠಾಣಾ ಸರಹದ್ದಿನ ಹಳೇ ಮದ್ರಾಸ್ ರಸ್ತೆ ಮತ್ತು ಬೆನ್ನಿಗಾನಹಳ್ಳಿ ಜಂಕ್ಷನ್‌ನಲ್ಲಿ 'ಯು' ತಿರುವು ಹಾಗೂ ಬಲ ತಿರುವನ್ನು ಸಂಪೂರ್ಣವಾಗಿ ನಿಷೇಧಿಸಿ ಸದರಿ ವಾಹನ ಚಾಲಕರು 150 ಮೀಟರ್ ಮುಂದಕ್ಕೆ ಹೋಗಿ ಕೆ.ಆರ್.ಪುರಂ ಫ್ಲೈ ಓವರ್ ಕೆಳಗೆ 'ಯು' ತಿರುವು ಹಾಗೂ ಬಲ ತಿರುವು ಪಡೆಯಲು ಅವಕಾಶ ಕಲ್ಪಸಲಾಗಿದೆ.

ಅಂತೆಯೇ ಕಲಂ.116 ಮೋಟಾರ್ ವಾಹನ ಕಾಯ್ದೆ 1988 ಹಾಗೂ ಕಲಂ.4 ಕರ್ನಾಟಕ ಟ್ರಾಫಿಕ್ ಕಂಟ್ರೋಲ್ ಆಕ್ಟ್ 1960ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಮೇಲ್ಕಂಡ ಮಾರ್ಪಾಡುಗಳನ್ನು ಜಾರಿಗೊಳಿಸಲು ಬೇಕಾದ ಅಗತ್ಯ ಸೂಚನಾ ಫಲಕಗಳನ್ನು ಸೂಕ್ತ ಸ್ಥಳಗಳಲ್ಲಿ ಅಳವಡಿಸಲು ಸ್ಥಳೀಯ ಅಧಿಕಾರಿಗಳಿಗೆ ಆದೇಶಿಸಿರುತ್ತೇನೆ.

ಈ ಮೇಲ್ಕಂಡ ವ್ಯವಸ್ಥೆಯನ್ನು ದಿನಾಂಕ: 29–07–2011 ರಿಂದ ಜಾರಿಗೆ ಬರುವಂತೆ ಆದೇಶಿಸಿರುತ್ತೇನೆ.

ಈ ಆದೇಶವನ್ನು ನಾನು ಈ ದಿನ ಅಂದರೆ ದಿನಾಂಕ: 28-07-2011 ರಂದು ನನ್ನ ಸಹಿ ಮತ್ತು ಮುದ್ರೆಯೊಂದಿಗೆ ನೀಡಿರುತ್ತೇನೆ.

ಬಿ.ಜಿ.ಜ್ಯೋತಿ ಪ್ರಕಾಶ್ ಮಿರ್ಜಿ, ಐ.ಪಿ.ಎಸ್.

ಪಿ.ಆರ್. 776 ಪೊಲೀಸ್ ಕಮೀಷನರ್, ಬೆಂಗಳೂರು ನಗರ

ಪೊಲೀಸ್ ಇಲಾಖೆ

ಪೊಲೀಸ್ ಕಮೀಷನರ್ ರವರ ಕಛೇರಿ, ನಂ.1, ಇನ್‌ಫೆಂಟ್ರಿ ರಸ್ತೆ, ಬೆಂಗಳೂರು ನಗರ

ಅಧಿಸೂಚನೆ

ಸಂಖ್ಯೆ:16/ಅಸೂ/ಡಿಸಿಪಿ/ಸಂ.ಪೂ/2011. ದಿನಾಂಕ: 28-07-2011

1. ಬೆಂಗಳೂರು - ಕೆ.ಆರ್.ಪುರ ಸಂಚಾರ ಪೊಲೀಸ್ ಠಾಣಾ ಸರಹದ್ದಿನ ಕಸ್ತೂರಿನಗರ 1ನೇ ಮುಖ್ಯರಸ್ತೆಯು ದ್ವಿಮುಖ ಸಂಚಾರ ವ್ಯವಸ್ಥೆಯಿಂದ ಕೂಡಿರುತ್ತದೆ. ಈ ರಸ್ತೆಯ ಸಾರ್ವಜನಿಕರು ಎರಡೂ ಬದಿಗಳಲ್ಲಿಯೂ ತಮ್ಮ ವಾಹನಗಳನ್ನು ನಿಲುಗಡೆ ಮಾಡುತ್ತಿರುವುದರಿಂದ ಈ ರಸ್ತೆಯಲ್ಲಿ ಸಹಜವಾಗಿಯೇ ವಾಹನ ಸಂಚಾರ ದಟ್ಟಣೆ ಅಧಿಕಗೊಂಡು ವಾಹನಗಳ ಸುಗಮ ಸಂಚಾರಕ್ಕೆ ಅನಾನುಕೂಲವಾಗುತ್ತಿರುವುದಲ್ಲದೆ ಪದೇ ಪದೇ ಸಂಚಾರ ಸ್ಥಗಿತಗೊಳ್ಳುತ್ತಿರುತ್ತದೆ. ಅದ್ದರಿಂದ, ಕಸ್ತೂರಿನಗರ 1ನೇ ಮುಖ್ಯರಸ್ತೆಯ ಸದಾನಂದನಗರ ರೈಲ್ವೇಬ್ರಿಡ್ಜ್‌ನಿಂದ ಸಿ.ಎಂ.ಆರ್ ಕಾಲೇಜ್‌ವರೆಗೆ ಎರಡೂ ಬದಿಗಳಲ್ಲಿಯೂ ಎಲ್ಲಾ ರೀತಿಯ ವಾಹನಗಳ ನಿಲುಗಡೆಯನ್ನು ನಿಷೇಧಿಸುವ ಅವಶ್ಯಕತೆಯಿರುತ್ತದೆ.

ಆದ್ದರಿಂದ ಕಲಂ;115 ಮೋಟಾರು ವಾಹನ ಕಾಯ್ದೆ 1988 ಹಾಗೂ ಕಲಂ;3 ಕರ್ನಾಟಕ ಟ್ರಾಫಿಕ್ ಕಂಟ್ರೋಲ್ ಕಾಯಿದೆ 1960ರ ಪ್ರಕಾರ ನನಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಬಿ.ಜಿ.ಜ್ಯೋತಿ ಪ್ರಕಾಶ್ ಮಿರ್ಜಿ, ಐ.ಪಿ.ಎಸ್. ಪೊಲೀಸ್ ಕಮೀಷನರ್, ಬೆಂಗಳೂರು ನಗರ ಆದ ನಾನು ಕೆ.ಆರ್.ಪುರ ಸಂಚಾರ ಪೊಲೀಸ್ ಠಾಣೆಯ ಸರಹದ್ದಿನ ಕಸ್ತೂರಿನಗರ 1ನೇ ಮುಖ್ಯರಸ್ತೆಯಲ್ಲಿ ಈ ಕೆಳಕಂಡ ಮಾರ್ಪಾಡುಗಳನ್ನು ಮಾಡಲು ಆದೇಶಿಸಿರುತ್ತೇನೆ.

ಕೆ.ಆರ್.ಪುರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಕಸ್ತೂರಿನಗರದ ಕಸ್ತೂರಿನಗರ 1ನೇ ಮುಖ್ಯರಸ್ತೆಯ ಸದಾನಂದನಗರ ರೈಲ್ವೇಬ್ರಿಡ್ಜ್‌ನಿಂದ ಸಿ.ಎಂ.ಆರ್ ಕಾಲೇಜ್ ನಾಲಾವರೆಗೆ ಎಡಭಾಗದಲ್ಲಿ ಎಲ್ಲಾ ರೀತಿಯ ವಾಹನಗಳ ನಿಲುಗಡೆಯನ್ನು ನಿಷೇಧಿಸಲಾಗಿದೆ.

ಅಂತೆಯೆ ಕಲಂ;116 ಮೋಟಾರ್ ವಾಹನ ಕಾಯ್ದೆ 1988 ಹಾಗೂ ಕಲಂ;4 ಕರ್ನಾಟಕ ಟ್ರಾಫಿಕ್ ಕಂಟ್ರೋಲ್ ಆಕ್ಟ್ 1960 ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಾಲಯಿಸಿ ಮೇಲ್ಕಂಡ ಮಾರ್ಪಾಡುಗಳನ್ನು ಜಾರಿಗೊಳಿಸಲು ಆದೇಶಿಸಿರುತ್ತೇನೆ.

ಈ ಮೇಲ್ಕಂಡ ವ್ಯವಸ್ಥೆಯನ್ನು ದಿನಾಂಕ; 29-07-2011 ರಿಂದ ಜಾರಿಗೆ ಬರುವಂತೆ ಆದೇಶಿಸಿರುತ್ತೇನೆ.

ಈ ಆದೇಶವನ್ನು ನಾನು ಈ ದಿನ ಅಂದರೆ ದಿನಾಂಕ; 28-07-2011 ರಂದು ನನ್ನ ಸಹಿ ಮತ್ತು ಮುದ್ರೆಯೊಂದಿಗೆ ನೀಡಿರುತ್ತೇನೆ.

ಬಿ.ಜಿ.ಜ್ಯೋತಿ ಪ್ರಕಾಶ್ ಮಿರ್ಜಿ, ಐ.ಪಿ.ಎಸ್.

ಪಿ.ಆರ್. 777 ಪೊಲೀಸ್ ಕಮೀಷನರ್, ಬೆಂಗಳೂರು ನಗರ

ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳ ಕಛೇರಿ, ರಾಮನಗರ ಜಿಲ್ಲೆ, ರಾಮನಗರ

ಪ್ರಕಟಣೆ

ಸಂಖ್ಯೆ : ಜಿಸಕಅ/ರಾ/ಕಾಪತ/ಸಿಆರ್-50/11-12, ದಿನಾಂಕ : 16ನೇ ಸೆಪ್ಟೆಂಬರ್, 2011

ವಿಷಯ: 2011-12ನೇ ಸಾಲಿಗೆ ಆಡಳಿತ ನ್ಯಾಯಾಧೀಕರಣ ಯೋಜನೆಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ಕಾನೂನು ಪದವೀಧರರಿಗೆ ತರಬೇತಿ ನೀಡುವ ಬಗ್ಗೆ

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ : ಎಸ್‌ಡಬ್ಲ್ಯೂಎಲ್-89, ದಿನಾಂಕ : 02ನೇ ನವೆಂಬರ್ 1990

2. ಸರ್ಕಾರ ಆದೇಶ ಸಂಖ್ಯೆ : ಸಕಇ-349/ಪಕವಿ-2005, ದಿನಾಂಕ : 28ನೇ ಜನವರಿ 2006

2011-12ನೇ ಸಾಲಿಗೆ ರಾಮನಗರ ಜಿಲ್ಲೆಯ ವ್ಯಾಪ್ತಿಯಲ್ಲಿ ಸಮಾಜ ಕಲ್ಯಾಣ ಇಲಾಖಾವತಿಯಿಂದ "ಆಡಳಿತ ನ್ಯಾಯಾಧಿಕರಣ ಯೋಜನೆಯಡಿ ತರಬೇತಿ" ನೀಡಲು ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ಕಾನೂನು ಪದವೀಧರರಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ. ಈ ಕೆಳಗೆ ನಮೂದಿಸಿರುವ ಷರತ್ತುಗಳ ಪ್ರಕಾರ ಅರ್ಹ ಅಭ್ಯರ್ಥಿಗಳು ಮಾತ್ರ ಈ ಕಛೇರಿಯಿಂದ ಅರ್ಜಿಗಳನ್ನು ಪಡೆದುಕೊಂಡು, ಈ ಪ್ರಕಟಣೆಯು

ರಾಜ್ಯಪತ್ರದಲ್ಲಿ ಪ್ರಕಟಗೊಂಡ ದಿನಾಂಕದಿಂದ ಒಂದು ತಿಂಗಳೊಳಗೆ ಅಥವಾ ದಿನಾಂಕ : 20–10–2011ರೊಳಗಡೆ ಅರ್ಜಿ ಸಲ್ಲಿಸತಕ್ಕದ್ದು. ನಂತರ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

ಷರತ್ತುಗಳು:

1. ರಾಮನಗರ ಜಿಲ್ಲಾ ವ್ಯಾಪ್ತಿಗೆ ಬರುವ 4 ತಾಲ್ಲೂಕುಗಳ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿದ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸತಕ್ಕದ್ದು.
2. ಅಭ್ಯರ್ಥಿಯು 35 ವರ್ಷ ವಯೋಮಿತಿಯೊಳಗಿರಬೇಕು.
3. ಅರ್ಜಿ ಸಲ್ಲಿಸಲು ನಿಗದಿ ಪಡಿಸಿರುವ ಕೊನೆಯ ದಿನಾಂಕಕ್ಕೆ ಎರಡು ವರ್ಷದ ಒಳಗೆ ಕಾನೂನು ಪದವಿಯನ್ನು ಪಡೆದಿರಬೇಕು.
4. ತರಬೇತಿ ಅವಧಿ 4 ವರ್ಷಗಳಾಗಿದ್ದು, ಮಾಸಿಕ ರೂ. 2,000/– ಗಳ ಶಿಷ್ಯವೇತನ ನೀಡಲಾಗುವುದು.
5. ಆಯ್ಕೆಯಾದ ಅಭ್ಯರ್ಥಿಗಳನ್ನು ಜಿಲ್ಲಾ ಪಬ್ಲಿಕ್ ಪ್ರಾಸಿಕ್ಯೂಟರ್, ಸರ್ಕಾರಿ ವಕೀಲರು ಅಥವಾ 20 ವರ್ಷಕ್ಕಿಂತ ಹೆಚ್ಚಿನ ಅನುಭವ ಹೊಂದಿರುವ ಹಿರಿಯ ವಕೀಲರಲ್ಲಿ ತರಬೇತಿಗೆ ನಿಯೋಜಿಸಲಾಗುವುದು.
6. ಆಯ್ಕೆಯಾದ ಅಭ್ಯರ್ಥಿಗಳು ಯಾವುದೇ ಕಾರಣಕ್ಕೂ ತರಬೇತಿಯನ್ನು ಪೂರ್ಣಗೊಳಿಸದೇ ಮಧ್ಯಂತರದಲ್ಲಿ ಬಿಟ್ಟು ಹೋಗಬಾರದು. ಬಿಟ್ಟು ಹೋದ ಪಕ್ಷದಲ್ಲಿ ತರಬೇತಿಯ ಅವಧಿಯಲ್ಲಿ ನೀಡಿದ ಶಿಷ್ಯ ವೇತನವನ್ನು ಶೇ. 10ರಷ್ಟು ಬಡ್ಡಿಯೊಂದಿಗೆ ವಸೂಲಿ ಮಾಡಲಾಗುವುದು. ಈ ನಿಯಮ ಕೇಂದ್ರ ಮತ್ತು ರಾಜ್ಯ ಸರ್ಕಾರಿ ಸೇವೆ ಮತ್ತು ಉದ್ದಿಮೆಗಳಲ್ಲಿ ನೇಮಕ ಹೊಂದುವವರಿಗೆ ಅನ್ವಯಿಸುವುದಿಲ್ಲ.
7. ಸುಳ್ಳು ದಾಖಲೆ ಮಾಹಿತಿಯನ್ನು ಒದಗಿಸಿ. ಆಯ್ಕೆಯಾದ ಅಭ್ಯರ್ಥಿಗಳನ್ನು ಕಾನೂನಿನನ್ವಯ ಶಿಕ್ಷೆಗೆ ಗುರಿಪಡಿಸಲಾಗುವುದು.
8. ಅರ್ಜಿಯಲ್ಲಿನ ಮಾಹಿತಿಯನ್ನು ಅಪೂರ್ಣವಾಗಿದ್ದಲ್ಲಿ ಅಂತಹ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ.
9. ಆಯ್ಕೆ ಸಮಿತಿಯ ತೀರ್ಮಾನವೇ ಅಂತಿಮ ತೀರ್ಮಾನವಾಗಿರುತ್ತದೆ.
10. ಅರ್ಜಿಗಳನ್ನು ಪಡೆಯಬೇಕಾದ ಮತ್ತು ಸಲ್ಲಿಸಬೇಕಾದ ವಿಳಾಸ ಈ ಕೆಳಕಂಡಂತಿದೆ.
11. ತರಬೇತಿಗೆ ಆಯ್ಕೆಯಾದ ಅಭ್ಯರ್ಥಿಗಳಿಗೆ ರಾಮನಗರ ಜಿಲ್ಲೆಯ ವ್ಯಾಪ್ತಿಯೊಳಗಡೆ ಮಾತ್ರ ತರಬೇತಿ ನೀಡಲಾಗುವುದು. ಅರ್ಜಿ ನಮೂನೆಗಳನ್ನು ಪಡೆದು, ಪೂರ್ಣ ಭರ್ತಿ ಮಾಡಿ ದಾಖಲೆಗಳೊಂದಿಗೆ ಸಲ್ಲಿಸಬೇಕಾದ ವಿಳಾಸ:

    ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳ ಕಛೇರಿ,
    ರಾಮನಗರ ಜಿಲ್ಲೆ, ಕೆಂಪೇಗೌಡ ವೃತ್ತ,
    ಮಾಗಡಿ ಮುಖ್ಯರಸ್ತೆ, ರಾಮನಗರ–517511
    ದೂರವಾಣಿ ಸಂಖ್ಯೆ : 080–7273003

ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ,
ರಾಮನಗರ ಜಿಲ್ಲೆ

ಪಿ.ಆರ್. 1002

ಜಿಲ್ಲಾ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಅಧಿಕಾರಿಗಳ ಕಛೇರಿ, ಉತ್ತರ ಕನ್ನಡ, ಕಾರವಾರ

ಪ್ರಕಟಣೆ

ಸಂಖ್ಯೆ : ಬಿಸಿಎಂ/ನಿಲಯ/ಕಾತಭ/ಸಿಆರ್–33/2011–12, ದಿನಾಂಕ : 8ನೇ ಸೆಪ್ಟೆಂಬರ್, 2011

ವಿಷಯ: 2011–12ನೇ ಸಾಲಿನಲ್ಲಿ ಹಿಂದುಳಿದ ವರ್ಗಗಳ ಕಾನೂನು ಪದವೀಧರರಿಗೆ ತರಬೇತಿ ನೀಡುವ ಕುರಿತು

ಉಲ್ಲೇಖ: 1. ಈ ಕಛೇರಿ ಪ್ರಕಟಣೆ ದಿನಾಂಕ : 11ನೇ ಆಗಸ್ಟ್ 2011

ಉಲ್ಲೇಖಿತ ಈ ಕಛೇರಿ ಪ್ರಕಟಣೆಯಲ್ಲಿ 2011–12ನೇ ಸಾಲಿನಲ್ಲಿ ಉತ್ತರ ಕನ್ನಡ ಜಿಲ್ಲೆಯ ಹಿಂದುಳಿದ ವರ್ಗಗಳ ಕಾನೂನು ಪದವೀಧರರಿಗೆ ವಕೀಲ ವೃತ್ತಿ ಮತ್ತು ಜ್ಯುಡಿಶಿಯಲ್ ಸೇವೆಗೆ ಸಂಬಂಧಿಸಿದಂತೆ ನ್ಯಾಯಾಡಳಿತದಲ್ಲಿ 4 ವರ್ಷಗಳ ತರಬೇತಿ ನೀಡುವ ಕುರಿತು ಹಿಂದುಳಿದ ವರ್ಗಗಳ ಕಾನೂನು ಪದವೀಧರರಿಂದ ಅರ್ಜಿಗಳನ್ನು ಆಹ್ವಾನಿಸಿ, ಅರ್ಜಿಗಳನ್ನು ಈ ಕಛೇರಿಗೆ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕವನ್ನು 30–08–2011ರ ಬದಲಾಗಿ ಕಾನೂನು ಪದವೀಧರರ ಹಿತದೃಷ್ಟಿಯಿಂದ 15–09–2011 ಕ್ಕೆ ಮುಂದುವರಿಸಿದೆ.

ನಿಬಂಧನೆಗಳು:

1. ಅಭ್ಯರ್ಥಿಯು ಕಾನೂನು ಪದವಿ ಮಾಡಿರಬೇಕು. ಹಿಂದುಳಿದ ವರ್ಗಕ್ಕೆ ಸೇರಿದವರಾಗಿರಬೇಕು. ರಾಜ್ಯದ ನಿವಾಸಿಯಾಗಿರಬೇಕು. ವಕೀಲಿ ವೃತ್ತಿ ಅಭ್ಯಾಸ (ಪ್ರ್ಯಾಕ್ಟೀಸ್) ನಿಗದಿಪಡಿಸಿರುವ ಅರ್ಹತೆ ಹೊಂದಿದ್ದು ತರಬೇತಿಗೆ ಅರ್ಜಿ ಸಲ್ಲಿಸುವ ದಿನಾಂಕಕ್ಕಿಂತ ಮುಂಚಿತವಾಗಿ ಎರಡು ವರ್ಷದೊಳಗೆ ಬಾರ್ ಕೌನ್ಸಿಲಿನಲ್ಲಿ ಹೆಸರು ನೋಂದಾಯಿಸಿಕೊಂಡಿರತಕ್ಕದ್ದು.
2. ಕಾನೂನು ತರಬೇತಿ ಭತ್ಯೆಗಾಗಿ ಜಿಲ್ಲೆಯಿಂದ ಹತ್ತು (10) ಅಭ್ಯರ್ಥಿಗಳನ್ನು ಮಾತ್ರ ಆಯ್ಕೆ ಮಾಡಲಾಗುವುದು. ಪ್ರವರ್ಗ–1, 2ಎ, 3ಎ, 3ಬಿ (3ಬಿಯಲ್ಲಿ ಕ್ರಿಶ್ಚಿಯಿನ್ ಮತ್ತು ಜೈನರುಗಳನ್ನು ಹೊರತುಪಡಿಸಿ)
3. ಅಭ್ಯರ್ಥಿಗಳ ಪಾಲಕರು/ಪೋಷಕರ ವಾರ್ಷಿಕ ಆದಾಯ ಮಿತಿ ರೂ. 15,000–00 ಒಳಗಿರಬೇಕು. ಪ್ರವರ್ಗ–1 ರಡಿಯಲ್ಲಿ ಬರುವ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ಆದಾಯ ಮಿತಿ ಇರುವುದಿಲ್ಲ.
4. ತರಬೇತಿ ಅವಧಿ ನಾಲ್ಕು ವರ್ಷಗಳು ತರಬೇತಿ ಅವಧಿಯಲ್ಲಿ ಮಾಹೆಯಾನ ರೂ. 1,000–00 ದಂತೆ ತರಬೇತಿ ಭತ್ಯೆ ನೀಡಲಾಗುವುದು.
5. ಪ್ರವರ್ಗ–1ಕ್ಕೆ ಸೇರಿದ ಅಭ್ಯರ್ಥಿಗಳಿಗೆ ವಯೋಮಿತಿ 31 ವರ್ಷಗಳು, ಇತರೇ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ 30 ವರ್ಷಗಳು ಮೀರಿರಬಾರದು.
6. ಅಭ್ಯರ್ಥಿ ಕಾನೂನು ಪದವಿ ಮುಗಿಸಿ ಅರ್ಜಿ ಸ್ವೀಕರಿಸಲು ಕೊನೆಯ ದಿನಾಂಕಕ್ಕೆ ಎರಡು ವರ್ಷ ಒಳಗೊಂಡಿರಬೇಕು.
7. ಆಯ್ಕೆಯಾದ ಅಭ್ಯರ್ಥಿಗಳು ಜಿಲ್ಲಾ ಪಬ್ಲಿಕ್ ಪ್ರಾಸಿಕ್ಯೂಟರ್, ಸರಕಾರಿ ವಕೀಲರು ಅಥವಾ 20 ವರ್ಷಗಳಿಗೆ ಕಡಿಮೆ ಇಲ್ಲದಂತೆ ಸೇವೆ ಸಲ್ಲಿಸಿರುವ ಹಿರಿಯ ವಕೀಲರ ಹತ್ತಿರ ತರಬೇತಿಗೆ ನಿಯೋಜಿಸಲಾಗುವುದು.
8. ಆಯ್ಕೆಯಾದ ಅಭ್ಯರ್ಥಿಗಳು ಸುಳ್ಳು ಆದಾಯ, ಜಾತಿ ಪ್ರಮಾಣ ಪತ್ರ ನೀಡಿ ಆಯ್ಕೆಯಾಗಿರುವುದು ಕಂಡು ಬಂದಲ್ಲಿ ಶಿಕ್ಷೆಗೆ ಗುರಿ ಪಡಿಸಿ ತರಬೇತಿ ಭತ್ಯೆ ನೀಡಿರುವ ಒಟ್ಟು ಹಣದ ಜೊತೆಗೆ ಶೇಕಡಾ 10% ಬಡ್ಡಿ ಸೇರಿ ಕಂದಾಯ ಬಾಕಿ ರೂಪದಲ್ಲಿ ವಸೂಲು ಮಾಡಲಾಗುವುದು.
9. ತರಬೇತಿಗೆ ಆಯ್ಕೆಯಾದ ಅಭ್ಯರ್ಥಿಗಳು ತರಬೇತಿಯನ್ನು ಮಧ್ಯಂತರದಲ್ಲಿ ಬಿಟ್ಟು ಹೋದಲ್ಲಿ ಪಡೆಯಲಾದ ಭತ್ಯೆಯ ಒಟ್ಟಿಗೆ ಶೇಕಡಾ 10%ರಷ್ಟು ಬಡ್ಡಿ ಸೇರಿಸಿ ಸರಕಾರಕ್ಕೆ ಭರಣ ಮಾಡುವುದು.
10. ಅಪೂರ್ಣ ಹಾಗೂ ಸಕಾಲದಲ್ಲಿ ಬಾರದ ಅರ್ಜಿಗಳನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸಲಾಗುವುದು.

ಜಿಲ್ಲಾ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಅಧಿಕಾರಿ,
ಕಾರವಾರ

ಪಿ.ಆರ್. 1006

ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳ ಕಛೇರಿ, ಕೋಲಾರ ಜಿಲ್ಲೆ, ಕೋಲಾರ

ಪ್ರಕಟಣೆ

ಸಂಖ್ಯೆ : ಜಿಸಕಅ/ಯೋಜನೆ/ಸಿಆರ್–11/2011–12, ದಿನಾಂಕ : 10ನೇ ಆಗಸ್ಟ್, 2011

ವಿಷಯ: 2011–12ನೇ ಸಾಲಿಗೆ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ಕಾನೂನು ಪದವೀಧರರಿಗೆ ವಕೀಲ ತರಬೇತಿಗಾಗಿ ಅರ್ಜಿಗಳನ್ನು ಆಹ್ವಾನಿಸುವ ಬಗ್ಗೆ

ಉಲ್ಲೇಖ: ಸರ್ಕಾರಿ ಆದೇಶ ಸಂಖ್ಯೆ:ಎಸ್‌ಇಡಬ್ಲ್ಯೂಎಲ್ 68 ಎಸ್‌ಡಬ್ಲ್ಯೂ 89, ದಿನಾಂಕ: 2–11–1990

2011–12ನೇ ಸಾಲಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಕಾನೂನು ಪದವೀಧರರಿಗೆ ವಕೀಲ ತರಬೇತಿಗಾಗಿ ಪರಿಶಿಷ್ಟ ಜಾತಿ/ವರ್ಗದ ಕಾನೂನು ಪದವೀಧರರಿಂದ ಕೆಳಕಂಡ ನಿಬಂಧನೆಗಳಿಗೊಳಪಟ್ಟು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ನಿಬಂಧನೆಗಳು:

1. ಎಲ್.ಎಲ್.ಬಿ. ಪರೀಕ್ಷೆಯಲ್ಲಿ ಪಾಸು ಮಾಡಿದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಅಭ್ಯರ್ಥಿಗಳು ಪ್ರಯೋಜನೆ ಪಡೆಯಲು ಅರ್ಹರಾಗಿರುತ್ತಾರೆ. ಕಾನೂನು ಪದವಿಯಲ್ಲಿ ಉತ್ತೀರ್ಣರಾಗಿ ಎರಡು ವರ್ಷಗಳು ಮೀರಿರಬಾರದು.
2. ಅಭ್ಯರ್ಥಿಗಳನ್ನು ಸರ್ಕಾರಿ ನಿಯಮಗಳ ಪ್ರಕಾರ ಜಿಲ್ಲಾ ಆಯ್ಕೆ ಸಮಿತಿಯ ಸಂದರ್ಶನಕ್ಕೆ ಕರೆದು ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು.
3. ತರಬೇತಿ ಆವಧಿ ನಾಲ್ಕು ವರ್ಷವಿದ್ದು, ತರಬೇತಿ ಅವಧಿಯಲ್ಲಿ ರೂ. 1000/–ಗಳ ಮಾಸಿಕ ಶಿಷ್ಯವೇತನ ನೀಡಲಾಗುವುದು.
4. ಆಯ್ಕೆಯಾದ ಅಭ್ಯರ್ಥಿಗಳನ್ನು ಜಿಲ್ಲಾ ಮಟ್ಟದ ಪಬ್ಲಿಕ್ ಪ್ರಾಸಿಕ್ಯೂಟರ್ ಸರ್ಕಾರಿ ವಕೀಲರು ಅಥವಾ 20 ವರ್ಷಕ್ಕೂ ಹೆಚ್ಚು ವಕೀಲ ವೃತ್ತಿಯಲ್ಲಿ ಅನುಭವ ಇದ್ದವರ ಹತ್ತಿರ ತರಬೇತಿಗಾಗಿ ನಿಯೋಜಿಸಲಾಗುವುದು.
5. ಅಭ್ಯರ್ಥಿಗಳ ವಯೋಮಿತಿ 35 ವರ್ಷಕ್ಕೆ ಮೀರಿರಬಾರದು (ಅರ್ಜಿ ಸಲ್ಲಿಸಿದ ಕಡೆಯ ದಿನಾಂಕದೊಳಗೆ ಇರಬೇಕು)

6. ತರಬೇತಿ ಸೌಲಭ್ಯವನ್ನು ಪಡೆಯಲು ಇಚ್ಛಿಸುವ ಅಭ್ಯರ್ಥಿಗಳು ಬಾರ್ ಕೌನ್ಸಿಲ್‌ನಲ್ಲಿ ತಮ್ಮ ಹೆಸರುಗಳನ್ನು ನೋಂದಾಯಿಸಬೇಕು. ಒಂದು ವೇಳೆ ಅವರುಗಳು ತಮ್ಮ ಹೆಸರುಗಳನ್ನು ನೋಂದಾಯಿಸದಿದ್ದರೆ, ತರಬೇತಿ ಭತ್ಯೆಯನ್ನು ನೋಂದಣಿ ಮಾಡಿಸಿದ ನಂತರ ಪಾವತಿ ಮಾಡಲಾಗುವುದು.
7. ತರಬೇತಿಗೆ ಆಯ್ಕೆಯಾದ ಅಭ್ಯರ್ಥಿಯ ತರಬೇತಿ ಮುಗಿಯುವವರೆವಿಗೂ ಅಂದರೆ ನಾಲ್ಕು ವರ್ಷದವರೆವಿಗೂ ತರಬೇತಿಯನ್ನು ಬಿಡುವುದಿಲ್ಲವೆಂದು ಕರಾರು ಪತ್ರ ಬರೆದುಕೊಡಬೇಕಾಗುವುದು. ಒಂದು ವೇಳೆ ಬಿಟ್ಟಲ್ಲಿ ಅಲ್ಲಿಯವರೆಗೆ ಪಡೆದ ಶಿಷ್ಯವೇತನವನ್ನು ಸರ್ಕಾರಕ್ಕೆ ವಾಪಸ್ಸು ಮಾಡಬೇಕಾಗುತ್ತದೆ. ಈ ಹಣವನ್ನು ಶೇ. 10ರಷ್ಟು ಬಡ್ಡಿ ಸೇರಿಸಿ ಕಂದಾಯ ಬಾಕಿ ರೂಪದಲ್ಲಿ ವಸೂಲು ಮಾಡಲಾಗುವುದು. ಒಂದು ವೇಳೆ ರಾಜ್ಯ/ಕೇಂದ್ರ ಸರ್ಕಾರಿ ಕೆಲಸ ಸಿಕ್ಕಲ್ಲಿ ಮಾತ್ರ ನಿಯಮ ಸಡಿಲಗೊಳಿಸಲಾಗುವುದು.
8. ಅಪೂರ್ಣವಾದ ಮತ್ತು ನಿಬಂಧನೆಗಳಿಗೆ ಒಳಪಡದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
9. ಅಭ್ಯರ್ಥಿಗಳು ಸುಳ್ಳು ಪ್ರಮಾಣಪತ್ರಗಳನ್ನು ಮತ್ತು ಮಾಹಿತಿಯನ್ನು ನೀಡಿದಲ್ಲಿ ಅಂತಹ ಅಭ್ಯರ್ಥಿಗಳನ್ನು ಕಾನೂನಿನ ಕ್ರಮಕ್ಕೆ ಒಳಪಡಿಸಲಾಗುವುದು.

ಮೇಲ್ಕಂಡ ನಿಬಂಧನೆಗಳಿಗೆ ಒಳಪಟ್ಟಂತೆ ಅರ್ಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿ ನಮೂನೆಗಳನ್ನು ಕಛೇರಿ ವೇಳೆಯಲ್ಲಿ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳ ಕಛೇರಿ, ಕೋಲಾರ ರವರಿಂದ ಈ ಪ್ರಕಟಣೆಯ ಕರ್ನಾಟಕ ಗೆಜೆಟ್‌ನಲ್ಲಿ ಪ್ರಕಟವಾದ ದಿನಾಂಕದಿಂದ ಒಂದು ತಿಂಗಳವರೆಗೆ ಪಡೆಯಬಹುದು. ಪೂರ್ಣ ವಿವರಗಳೊಂದಿಗೆ ಭರ್ತಿ ಮಾಡಿದ ಅರ್ಜಿಗಳನ್ನು ಈ ಪ್ರಕಟಣೆಯ ರಾಜ್ಯ ಗೆಜೆಟ್‌ನಲ್ಲಿ ಪ್ರಕಟಣೆಗೊಂಡ ದಿನಾಂಕದಿಂದ ಒಂದು ತಿಂಗಳವರೆಗೆ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳ ಕಛೇರಿಯಲ್ಲಿ ನೀಡಬಹುದಾಗಿರುತ್ತದೆ. ನಿಗದಿತ ದಿನಾಂಕ ಮೀರಿದ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಅರ್ಜಿಗಳನ್ನು ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳು, ಕೋಲಾರ ರವರಿಗೆ ಕಳುಹಿಸಿಕೊಡುವುದು. ಹೆಚ್ಚಿನ ವಿವರಗಳನ್ನು ಕಛೇರಿಯ ವೇಳೆಯಲ್ಲಿ ಕಛೇರಿಯಿಂದ ಪಡೆಯಬಹುದು.

ಸದಸ್ಯ ಕಾರ್ಯದರ್ಶಿಗಳು ಹಾಗೂ
ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳು
ಕೋಲಾರ

ಪಿ.ಆರ್. 1001

ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು, ಬೆಂಗಳೂರು ಇವರ ನಡವಳಿ

ವಿಷಯ: ಶ್ರೀ ಹೆಚ್.ಸಿ. ಕೃಷ್ಣಪ್ಪ, ದ್ವಿತೀಯ ದರ್ಜೆ ಸಹಾಯಕರು, ರೇಷ್ಮೆ ಸಹಾಯಕರ ನಿರ್ದೇಶಕರ ಕಛೇರಿ (ಉತ್ತರ), ಯಲಹಂಕ, ಬೆಂಗಳೂರು ಇವರ ವಿರುದ್ಧ ಶಿಸ್ತು ಕ್ರಮದ ಕುರಿತು

ಉಲ್ಲೇಖ:

1. ತಿಳುವಳಿಕೆ ಪತ್ರ ಸಂಖ್ಯೆ: ರೇಉನಿ/ಬೆಂನಪ/ಸಿಬ್ಬಂದಿ/ಹೆಚ್‌ಸಿಕೆ/ಶಿಸ್ತು/05/2008–09 ದಿನಾಂಕ: 22–09–2008
2. ಶ್ರೀ ಹೆಚ್.ಸಿ. ಕೃಷ್ಣಪ್ಪ, ದ್ವಿತೀಯ ದರ್ಜೆ ಸಹಾಯಕರು, ಇವರ ದಿನಾಂಕ : 23–12–2008ರ ಲಿಖಿತ ಹೇಳಿಕೆ
3. ಆದೇಶ ಸಂಖ್ಯೆ: ರೇಉನಿ/ಬೆಂನಜಿ/ಸಿಬ್ಬಂದಿ/ಹೆಚ್‌ಸಿಕೆ/ಶಿಸ್ತು/05/08–09 ದಿನಾಂಕ: 27–01–2009
4. ರೇಷ್ಮೆ ಸಹಾಯಕ ನಿರ್ದೇಶಕರು, ಗೂಡಿನ ನಂತರದ ಚಟುವಟಿಕೆಗಳು, ಬೆಂಗಳೂರು ಇವರ ಪತ್ರ ಸಂಖ್ಯೆ: ರೇಸನಿ/ಗುನಂಚ/ರೆ/ವಿಚಾರಣೆ–2/2009–10, ದಿನಾಂಕ : 21–06–2010
5. ರೇಷ್ಮೆ ಸಹಾಯಕ ನಿರ್ದೇಶಕರು, ಬೆಂಗಳೂರು ಉತ್ತರ ವಿಭಾಗ, ಯಲಹಂಕ, ಬೆಂಗಳೂರು ಇವರ ಪತ್ರದ ಸಂಖ್ಯೆ: ರೇಸನಿ/ಬೆಂಉವಿ/ಸಿಬ್ಬಂದಿ/ಅಗೈಹಾ/ಶಿಸ್ತು/01/2007–08, ದಿನಾಂಕ: 03–12–2010
6. ರೇಷ್ಮೆ ಉಪ ನಿರ್ದೇಶಕರು, ಜಿಲ್ಲಾ ಪಂಚಾಯತ್, (ನಗರ), ನಂ. 14, ರೇಷ್ಮೆ ಭವನ, ಬೆಂಗಳೂರು ಇವರ ಪತ್ರದ ಸಂಖ್ಯೆ : ರೇಉನಿ/ಬೆಂನಜಿಪಂ/ಸಿಬ್ಬಂದಿ/ಶಿಸ್ತು/05/2008–09, ದಿನಾಂಕ: 23–09–2010

ಪೀಠಿಕೆ:

